ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮಾರ್ಚ್, ೨೦೧೬ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೫ ಸಂಚಿಕೆ: ೮

ಮಹಿಳಾ ವಿಶೇಷ ಸಂಚಿಕೆ

ಚಂದಾ : ರೂ. ೧೩೫/-(ಫೆಬ್ರುವರಿ-ಆಗಸ್ಟ್, ೨೦೧೬) ಬಿಡಿ ಪ್ರತಿ: ರೂ. ೨೦/- ಪುಟ: ೨೪

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ **ಸಂಚಾರಿ:** ೯೪೪೯೭ ೪೨೨೮೪ ***ಈ ಮೇಲ್:*** dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಹೈದರಾಬಾದ್‌ನ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ರೋಹಿತ್ ವೇಮುಲನ ಆತ್ಮಹತ್ಯೆ ಸೃಷ್ಟಿಸಿದ ರಾಷ್ಟೀಯ ಕೋಲಾಹಲ ಇನ್ನೂ ಮುಗಿದಿಲ್ಲ. ಅದು ಜವಾಹರಲಾಲ್ ನೆಹ್ರೂ ವಿಶ್ವವಿದ್ಯಾಲಯ(ಜೆಎನ್‌ಯು)ದಲ್ಲಿ ಮುಂದುವರೆದಂತೆ ತೋರುತ್ತಿದೆ. ರೋಹಿತನ ಆತ್ಮಹತ್ಯೆಯ ಕಳಂಕವನ್ನು ತೊಡೆದುಕೊಳ್ಳಲು ಸರ್ಕಾರ ಜೆಎನ್‌ಯುದಲ್ಲಿ ಗೊಂದಲ ಎಬ್ಬಿಸಿ ಈಗ ಇನ್ನಷ್ಟು ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಂತಿದೆ. ಕೋಮು ತಂಟೆಗಳ ಆರೋಪ, ಆರ್ಥಿಕ ಹಿಂಜರಿತ ಮತ್ತು ಪಠಾಣ್‌ಕೋಟೆ ದಾಳಿ ಸೃಷ್ಟಿಸಿದ ಮುಜುಗರಗಳ ಮಧ್ಯೆ ಈ ವಿವಾದ ಬಿಜೆಪಿ ಸರ್ಕಾರಕ್ಕೆ ಬೇಕಿರಲಿಲ್ಲ. ಆದರೆ ಏನು ಮಾಡಲಾಗುವುದು? ಸಂಘ ಪರಿವಾರದ ಹುಟ್ಟುಗುಣವೇ ಹಾಗೆ. ಅದೂ, ತನ್ನ ಆಯ್ಕೆಯ ವ್ಯಕ್ತಿಯೇ ದೇಶದ ಸೂತ್ರದಾರನಾಗಿರುವಾಗ ಅದು ಸುಮ್ಮನಿರಲು ಸಾಧ್ಯವೆ?! ಅದೀಗ ರಾಷ್ಟ್ರೀಯತೆಯ ಹೆಸರಿನಲ್ಲಿ ತನ್ನ ತಾತ್ವಿಕತೆಯನ್ನು ದೇಶಾದ್ಯಂತ ಬೇರೂರಿಸಲು ಹೊರಟಿದೆ.

ಅದರ ತಾತ್ವಿಕತೆ ಎಂದರೆ ಅದೇ ನಿರೂಪಿಸಿರುವ ಹಿಂದುತ್ವ. ಅದು ಮಾತೃಭೂಮಿಯ ಹೆಸರಿನಲ್ಲಿ ಏನೇ ಘೋಷಣೆಗಳನ್ನು ಕೂಗಲಿ, ಅದರ ಹಿಂದುತ್ವ ನಿಂತಿರುವುದು ಅದರ 'ಗುರೂಜಿ' ರಚಿಸಿಕೊಟ್ಟಿರುವ 'ಪಿತೃಭೂಮಿ'ಯ ಕಲ್ಪನೆಯ ಮೇಲೇ. ಹಾಗಾಗಿಯೇ ಅದು ಪೂರ್ಣ ಗಂಡು ತಾತ್ವಿಕತೆ. ಅದರ 'ಬಲಿಷ್ಠ ಭಾರತ'ದ ಕೂಗು ಹೊಮ್ಮಿರುವುದೂ ಅಲ್ಲಿಂದಲೇ. ಆದರೆ ಸಮಸ್ಯೆ ಎಂದರೆ ಈ ದೇಶದ ಜನಸಮೂಹದ ಪಾರಂಪರಿಕ ವಿವೇಕ ಈ ಗಂಡು ಹಿಂದುತ್ವವನ್ನು ಧಿಕ್ಕರಿಸುತ್ತಲೇ ಬಂದಿದೆ. ತಾಯ್ತನದ ಹೆಣ್ಣು ಹಿಂದುತ್ವದ ಧಾರೆಯೊಂದು ಇಂತಹ ಬಿಕ್ಕಟ್ಟುಗಳಲ್ಲೆಲ್ಲ ಈ ದೇಶವನ್ನು ಉಳಿಸುತ್ತಾ ಬಂದಿದೆ. ಅದರ ಅಭಿವ್ಯಕ್ತಿ ನಮ್ಮ ಸಂತ ಪರಂಪರೆಯುದ್ದಕ್ಕೂ ಹರಿದು ಬಂದಿದೆ. ನಮ್ಮ ದೇಶದ ಸೂಫಿ ಪರಂಪರೆಯೂ ಸೇರಿದಂತೆ. ಇದನ್ನು 'ಶ್ರಮಣ ಪರಂಪರೆ' ಎಂದೂ ಕರೆಯಬಹುದು. ಅದು ಮುಖ್ಯವಾಗಿ ವೇದ ಪ್ರಾಮಾಣ್ಯವನ್ನೂ, ವರ್ಣಾಶ್ರಮ ಧರ್ಮವನ್ನೂ ನಿರಾಕರಿಸುತ್ತಾ ಬಂದಿದೆ. ಜೊತೆಗೆ ಆ ಗಂಡು ಪರಂಪರೆಗೂ ಒಂದಿಷ್ಟು ಹಾಲೂಡುತ್ತಾ ಅದನ್ನು ಪಳಗಿಸಲು ಯತ್ನಿಸುತ್ತಾ ಬಂದಿದೆ. ಧರ್ಮ ನಿರಪೇಕ್ಷತೆ ಎಂಬುದು ಆಧುನಿಕತೆಯ ಒಂದು ಸಂಕೇತವಾಗುತ್ತಿದ್ದ ಕಾಲದಲ್ಲೂ ತಾನೊಬ್ಬ ಹೆಮ್ಮೆಯ ಸನಾತನ ಹಿಂದೂ ಎಂದು ಘೋಷಿಸಿಕೊಳ್ಳಲು ಹಿಂಜರಿಯದ ಗಾಂಧಿ ಈ ಪರಂಪರೆಯ ಇತ್ತೀಚಿನ ಕೊಂಡಿ. ಈ ಕೊಂಡಿಯನ್ನು ಕಳಚುವುದೇ ಸಂಘ ಪರಿವಾರದ ಜೀವನೋದ್ದೇಶವಾಗಿದೆ. ಈ ಪರಿವಾರದ ಪಿತೃ ಸಂಸ್ಥೆ ಹುಟ್ಟಿದ್ದೇ ಆ ಕಾರಣಕ್ಕಾಗಿ ಎಂಬುದು ಇತಿಹಾಸ ಬಲ್ಲವರೆಲ್ಲರಿಗೂ ಗೊತ್ತು. ಏಕೆಂದರೆ, ಇವರ ಹಿಂದುತ್ವ ಸನಾತನತೆಯನ್ನು ಒಪ್ಪುವುದಿಲ್ಲ. ಅದು ಪಶ್ಚಿಮದ ಅತ್ಯಂತ ವಿನಾಶಕಾರಿ ರಾಜಕೀಯ ಆವಿಷ್ಕಾರವೆಂದು ಗುರುತಿಸಲಾಗುವ 'ರಾಷ್ಟ್ರೀಯತೆ'ಯಲ್ಲಿ ತನ್ನನ್ನು ತಾನು ಪುನರಾವಿಷ್ಕರಿಸಿಕೊಂಡದ್ದು. ಅದು ಸನಾತನತೆಯನ್ನು ಧಿಕ್ಕರಿಸಿ ಆಧುನಿಕ ನಾಗರೀಕತೆಯ ಮೌಲ್ಯಗಳಲ್ಲಿ ಹದಗೊಂಡ ಹಿಂದುತ್ವ. ಹಾಗಾಗಿಯೇ ಅದು ಗಂಡು ಹಿಂದುತ್ವ, ನಾಸ್ತಿಕ ಸಾವರ್ಕರ್ ಪ್ರತಿಪಾದಿಸಿದ ಹಿಂದುತ್ವ. ಈ ಹಿಂದುತ್ವ ತನ್ನ ದೈವವನ್ನು ಕಂಡುಕೊಂಡದ್ದು 'ಭಾರತ ಮಾತೆ'ಯ ಕಲ್ಪನೆಯಲ್ಲಿ. ಹಾಗಾಗಿಯೇ ಅವರಿಗೆ ಮಿಕ್ಕೆಲ್ಲ ಘೋಷಣೆಗಳಿಗಿಂತ 'ಭಾರತ್ ಮಾತಾಕಿ ಜೈ' ಹೆಚ್ಚು ಪ್ರಿಯ.

ಆದರೆ ಗಾಂಧಿ ನೋಡಿ. ಅವರು ಯಾವಾಗಲೂ ಭಗವಂತನ ಸ್ಮರಣೆಯಲ್ಲೇ ಇರುತ್ತಿದ್ದರು. ಪ್ರಾರ್ಥನೆ ಅವರ ಶಕ್ತಿ ಸಂಚಯದ ಸಾಧನವಾಗಿತ್ತು. ಎಂದೂ ಪೂಜೆ ಮಾಡಿದವರಲ್ಲ;ಪೂಜಾ ಸ್ಥಳಗಳಿಗೆ ಹೋದವರಲ್ಲ. 'ನನಗೆ ಎಂದಾದರೂ ಧರ್ಮ ಮತ್ತು ನೈತಿಕತೆಗಳ ನಡುವೆ ಆಯ್ಕೆ ಮಾಡಿಕೊಳ್ಳಲೇಬೇಕಾಗಿ ಬಂದರೆ ನಾನು ನೈತಿಕತೆಯನ್ನೇ ಆಯ್ಕೆ ಮಾಡಿಕೊಂಡೇನು' ಎಂದು ಧರ್ಮ ಪಂಡಿತರಿಗೆ ಹೇಳಿದ ಧೀಮಂತ. ಗಾಂಧಿ ಪ್ರಕಾರ ನೈತಿಕತೆ ಎಂದರೆ ನೆರೆಹೊರೆಯನ್ನು ಕುರಿತ ತನ್ನ ಕರ್ತವ್ಯ. ಹಾಗಾಗಿಯೇ ಅವರು ಅಸ್ಪೃಶ್ಯತೆಯನ್ನು 'ಪಾಪ' ಎಂದು ಕರೆದರು. ನಮ್ಮ ಧರ್ಮ ಶಾಸ್ತ್ರಗಳಲ್ಲಿ ಅಸ್ಪೃಶ್ಯತೆಗೆ ಮಾನ್ಯತೆ ಇದ್ದರೆ ಆ ಧರ್ಮಶಾಸ್ತ್ರಗಳ ಗೊಡವೆಯೇ ನನಗೆ ಬೇಡ ಎಂದು ಘೋಷಿಸಿದರು. ಮೊದಮೊದಲು ಜಾತಿ ಪದ್ಧತಿಯನ್ನು, ಅದು ಕಸಬುಗಳ ಕುಶಲತೆಗಳನ್ನು ರಕ್ಷಿಸುತ್ತದೆ ಎಂಬ ನಂಬಿಕೆಯಲ್ಲಿ ಮಾನ್ಯ ಮಾಡುತ್ತಿದ್ದರಾದರೂ, ಅದರಲ್ಲಿ ಅಂತರ್ಗತವಾಗಿದ್ದ ಶ್ರೇಣೀಕರಣವನ್ನು ಮನಗಾಣುತ್ತಿರುವಂತೆಯೇ ಅವರು ಅದರಲ್ಲಿನ ನಂಬಿಕೆಯನ್ನು ಕೈಬಿಟ್ಟರು. ಆದರೆ ನೋಡಿ, ಇಂದು ಸಂಘಪರಿವಾರದ ಹಿಂಸೆಗೆ ಗುರಿಯಾಗುತ್ತಿರುವವರಾದರೂ ಯಾರು? ಅಲ್ಪ ಸಂಖ್ಯಾತರು, ದಲಿತರು, ಕೆಳ ಜಾತಿಗಳ ವಿದ್ಯಾರ್ಥಿಗಳು. ಇದೇನೂ ಆಕಸ್ಮಿಕವಿರಲಾರದು. ಅದೇನೇ ಇರಲಿ, ಇದೆಲ್ಲದರ ಮಧ್ಯೆ ಮುಖ್ಯವಾಗಿ ನಾವು ಗಮನಿಸಬೇಕಾದದ್ದು, ಆಧುನಿಕ ನಾಗರೀಕತೆಯನ್ನು ಅದರೆಲ್ಲ ಆಳಗಳಲ್ಲಿ ಚರ್ಚಿಸುವ ಅವರ ಬೀಜ ಕೃತಿ 'ಹಿಂದ್ ಸ್ವರಾಜ್'ನ ಕೊನೆಯಲ್ಲಿ ಪ್ರಶ್ನೆಕಾರ 'ಈಗ ರಾಷ್ಟ್ರಕ್ಕೆ ನೀವೇನು ಹೇಳಬಯಸುವಿರಿ?' ಎಂದು ಕೇಳಿದಾಗ ಗಾಂಧಿ ಕೇಳಿದ ಮರುಪ್ರಶ್ನೆ : 'ರಾಷ್ಟ್ರ? ಹಾಗೆಂದರೇನು?'

ಗಾಂಧಿಗೆ ಆಧುನಿಕ ನಾಗರೀಕತೆಯ ತವರಾದ ಯೂರೋಪ್‌ನಲ್ಲಿ 'ರಾಷ್ಟ್ರ ಪ್ರಭುತ್ವ' ಮತ್ತು ಅದನ್ನು ಪೋಷಿಸುವ 'ರಾಷ್ಟ್ರೀಯತೆ' ಎಂಬ ಕಲ್ಪನೆ ಮಾಡಿದ ಅನಾಹುತಗಳು, ಹುಟ್ಟಿಸಿದ ಯುದ್ಧಗಳು ಹರಿಸಿದ ರಕ್ತದ ಕೋಡಿಯ ಅರಿವಿತ್ತು. ಹಾಗಾಗಿ ಅವರ ಮನಸ್ಸಿನಲ್ಲಿದ್ದುದು ಭಾರತವೆಂಬ ಜಟಿಲ ಆಡಳಿತ ಜಾಲದಲ್ಲಿ ಪ್ರಜೆಯೇ ಕಳೆದುಹೋಗುವ 'ರಾಷ್ಟ್ರ'ವಲ್ಲ; ಬದಲಿಗೆ ಪ್ರತಿ ಪ್ರಜೆಯೂ ತನ್ನನ್ನು ತಾನೇ ಆಳಿಕೊಳ್ಳಲು ಸಾಧ್ಯವಿರುವ ಸಣ್ಣ ಆಡಳಿತ ಘಟಕಗಳ ಒಕ್ಕೂಟ ರೂಪದ 'ಸ್ವ-ರಾಜ್ಯ'. ಅಲ್ಲಿ ಪ್ರಜೆತನದ ಬಂಧನಗಳು ಕಡಿಮೆ. ಅವನ ಮನುಷ್ಯತನದ ಸಹಜ ಹುಟ್ಟು ಹಕ್ಕುಗಳಿಗೆ ಹೆಚ್ಚು ಮಾನ್ಯತೆ. ಆದರೆ ಗಾಂಧಿಯನ್ನು ಸನಾತನಿಯೆಂದು ಕರೆದ ಆಧುನಿಕತೆಯ ಸೇನಾನಿಗಳು ಅವರನ್ನು ನಿರ್ಲಕ್ಷಿಸಿ ಆಧುನಿಕ 'ರಾಷ್ಟ್ರ'ವನ್ನೇ ಕಟ್ಟಿದರು. ಆದರೂ ಗಾಂಧಿಯನ್ನು ಪೂರ್ಣ ನಿರ್ಲಕ್ಷಿಸಲಾಗದೆ ಉದಾರವಾದಿ ರಾಜ್ಯಾಂಗದ ಮೂಲಕ ರಾಷ್ಟ್ರ ಕಲ್ಪನೆಯ ಅಂತರ್ಗತ ಅಪಾಯಗಳಿಂದ ಅದನ್ನು ರಕ್ಷಿಸಿದರು.

ಅಂದರೆ ರಾಷ್ಟ್ರವೆಂಬುದು ನಾವು ನಮ್ಮ ಅನುಕೂಲಕ್ಕಾಗಿ ಮಾಡಿಕೊಳ್ಳುತ್ತಿರುವ ರಚನೆ ಮಾತ್ರವಲ್ಲ;ಅದೊಂದು ಪ್ರಕ್ರಿಯೆ ಎಂಬ ಅರಿವು ಇದು. ಅಂದರೆ ರಾಷ್ಟ್ರ ಉಸಿರುಗಟ್ಟಿಸುವಂತಾದಾಗ ಅದನ್ನು ಪ್ರತಿಭಟಿಸುವ, ಅದನ್ನು ಪರಾಮರ್ಶಿಸುವ, ಚರ್ಚೆಯ ಮೂಲಕ ಅದನ್ನು ಪರಿಹರಿಸಿಕೊಳ್ಳುವ ಹಕ್ಕು ಪ್ರಜೆಗೆ ಇದ್ದೇ ಇರುತ್ತದೆ.

ಅದು ಪ್ರಸ್ತುತ ರಾಷ್ಟ್ರ ರಚನೆಯ-ನ್ಯಾಯಾಂಗವೂ ಸೇರಿದಂತೆ ಅದರ ವಿವಿಧ ಅಂಗಗಳ ಕಾರ್ಯಶೈಲಿಗಳೂ ಸೇರಿದಂತೆ-ಸ್ವರೂಪವನ್ನು ಪ್ರಶ್ನಿಸಿದರೂ ಕೂಡ. ಅದು ಕಾಶ್ಮೀರಕ್ಕೆ ಸಂಬಂಧಿಸಿದ್ದಾಗಿರಬಹುದು;ಚತ್ತೀಸ್‌ಘಡದ ಆದಿವಾಸಿಗಳಿಗೇ ಸಂಬಂಧಿಸಿರಬಹುದು; ಕರ್ನಾಟಕ್ಕೇ ಸಂಬಂಧಿಸಿದ್ದೇ ಆಗಿರಬಹುದು. ಆದರೆ ಈ ಪ್ರಶ್ನೆ-ಪರಾಮರ್ಶೆ-ಚರ್ಚೆ ಹಿಂಸೆಗೆ ನೇರ ಪ್ರಚೋದನೆ ನೀಡುವಂತಿರಬಾರದಷ್ಟೆ. ಇಲ್ಲದೇ ಹೋದಲ್ಲಿ ಪರಪ್ರಭುತ್ವದಿಂದ ಸ್ವಾತಂತ್ರ್ಯ ಪಡೆದುದರ ಅರ್ಥವಾದರೂ ಏನು? ಆದರೆ ಇದೆಲ್ಲ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದ ಸಂಘ ಪರಿವಾರಕ್ಕೆ ಅರ್ಥವಾಗಲಾರದು. ವಾಸ್ತವದ ಸಂಗತಿ ಎಂದರೆ, ಅದರ ಸದ್ಯದ ಉದ್ದೇಶವೇ ಸ್ವಾತಂತ್ರ್ಯ ಹೋರಾಟದ ನೆನಪುಗಳನ್ನು ಮತ್ತು ಅದು ಕಟ್ಟಿಕೊಟ್ಟ ಮೌಲ್ಯಗಳನ್ನು, ಗುಡಿಸಿ ಹಾಕುವುದೇ ಆಗಿದೆ. ಮೊನ್ನೆ ಸಂಘ ಪರಿವಾರದ ಬೆಂಬಲಿಗ ಉದ್ಯಮಿಯೊಬ್ಬರು ಟಿವಿಯಲ್ಲಿ ನಾಥೂರಾಂ ಗೋಡ್ಸೆಯ ಜನ್ಮದಿನಾಚರಣೆಯನ್ನು ಸಮರ್ಥಿಸುವಂತೆ ಹೇಳಿದ್ದನ್ನು ನೀವು ಕೇಳಿರಬಹುದು: 'ನಾಥೂರಾಂ ಕೊಲೆಗಾರನಷ್ಟೆ;ದೇಶದ್ರೋಹಿಯಲ್ಲ!'

ಇಂತಹ ವಿಕ್ಷಿಪ್ತ ಮಾನಸಿಕತೆಯ, ದೇಶ ಕಲ್ಪನೆಯ ಜನಕ್ಕೆ ಜೆಎನ್‌ಯುನಲ್ಲಿ ಒಂದು ಸಣ್ಣ ವಿದ್ಯಾರ್ಥಿ ಗುಂಪು ನಡೆಸಿದ;ಆದರೆ ಈವರೆಗೆ ಸ್ಪಷ್ಟ ವಿವರಗಳು ಗೊತ್ತಿಲ್ಲದ ಅಫ್ಜಲ್‌ಗುರು ಸ್ಮರಣೆಯ ಕಾರ್ಯಕ್ರಮದ ನೆಪವೇ ಸಾಕಾಯಿತು, ಈ ಕಾರ್ಯಕ್ರಮಕ್ಕೆ ಸಂಬಂಧವೇ ಇರದ, ಆ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ನಯ್ಯ ಕುಮಾರ್‌ನ ಮೇಲೆ ಒಂದು ನಕಲಿ ವಿಡಿಯೋಸಾಕ್ಷ್ಯದ ಆಧಾರದ ಮೇಲೆ ದೆಹಲಿಯ ತನ್ನ ಚೇಲಾ ಪೋಲೀಸ್ ಅಧಿಕಾರಿಯ ಸಹಕಾರದೊಡನೆ ದೇಶದ್ರೋಹದ ಆರೋಪ ಹೊರಿಸಿ ಜೈಲಿಗೆ ತಳ್ಳಲು; ತಳ್ಳುವ ಮುನ್ನ ದೇಶದ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನೂ ಲೆಕ್ಕಿಸದೆ ವಕೀಲರೆಂಬ ಗೂಂಡಾಗಳಿಂದ ಆತನ ಮತ್ತು ಮಾಧ್ಯಮದವರ ಮೇಲೆ ಪದೇ ಪದೇ ದಾರುಣ ಹಲ್ಲೆ ನಡೆಸಲು. ಇದೆಲ್ಲವನ್ನೂ ವಿಶ್ವವಿದ್ಯಾಯಲದಲ್ಲಿ ರಾಷ್ಟ್ರ ವಿರೋಧಿ ಘೋಷಣೆಗಳನ್ನು ಕೂಗಲಾಯಿತು ಎಂಬ ಇದೇ 'ಪೋಲೀಸ್ ವರದಿ'ಯ ಆಧಾರದ ಮೇಲೇ ಸಮರ್ಥಿಸಿಕೊಳ್ಳುತ್ತಿರುವ ಬಿಜೆಪಿ ಸರ್ಕಾರದ ವಕ್ತಾರರಿಗೆ ದೇಶದಲ್ಲಿ ನ್ಯಾಯಾಂಗ ವ್ಯವಸ್ಥೆ ಎಂಬುದೊಂದಿದೆ ಮತ್ತು ಇಂತಹುದೇ ರಾಷ್ಟ್ರವಿರೋಧಿ ಘೋಷಣೆಗಳನ್ನು ಕೂಗುವ ಕಾರ್ಯಕರ್ತರುಳ್ಳ ಪಕ್ಷವೊಂದರ ಜೊತೆಗೆ ಜಮ್ಮು-ಕಾಶ್ಮೀರದಲ್ಲಿ ತಮ್ಮ ಪಕ್ಷ ತಾನಾಗಿ ಮುಂದಾಗಿ ಸರ್ಕಾರ ರಚಿಸಿಕೊಂಡಿದೆ ಎಂಬ ಪರಿವೆಯೇ ಇದ್ದಂತಿಲ್ಲ. ಇದು ಪರಮ ನಿರ್ಲಜ್ಜ ರಾಷ್ಟ್ರೀಯತೆ.

ಇದರ ಹಿಂದಿರುವ ಮುಖ್ಯ ಉದ್ದೇಶ, ಆ ವಿಶ್ವವಿದ್ಯಾಲಯದಲ್ಲಿ ಇನ್ನೂ ನೆಲೆ ಕಂಡುಕೊಳ್ಳಲಾಗದ ಸಂಘ ಪರಿವಾರದ ವಿದ್ಯಾರ್ಥಿ ಶಾಖೆಯಾದ ಎಬಿವಿಪಿಗೆ ಅಲ್ಲಿ ನೆಲೆ ಒದಗಿಸಿ, ವಿಶ್ವವಿದ್ಯಾಲಯದ ಎಡಪಂಥೀಯ ಸ್ವರೂಪವನ್ನು ನಾಶ ಮಾಡುವುದು. ಹೌದು ಸ್ಪರ್ಧಾತ್ಮಕವಾಗಿ ತಮ್ಮ ತಾತ್ವಿಕತೆಯನ್ನು ಬೆಳೆಸುವ ಹಕ್ಕು ಸಂಘ ಪರಿವಾರಕ್ಕೆ ಇದೆ. ಆದರೆ ರಾಜಕೀಯ ಪಿತೂರಿ ಮತ್ತು ಭಯೋತ್ಪಾದನೆಯ ಮೂಲಕ ಅಲ್ಲ. ಇಂತಹ ತಂತ್ರಗಳನ್ನು ಅದು ಮುಂದುರೆಸಿದರೆ ಅಂತಿಮವಾಗಿ ಸ್ವತಃ ಅದೇ ರಾಷ್ಟ್ರದ್ರೋಹದ ಆಪಾದನೆಗೆ ಒಳಗಾಗಬೇಕಾಗುತ್ತದೆ.

ಇದನ್ನೆಲ್ಲ ರಾಷ್ಟ್ರಮಟ್ಟದಲ್ಲಿ ಈ ಸಂಘ ಪರಿವಾರದವರಿಗೆ ಪರಿಣಾಮಕಾರಿಯಾಗಿ ಹೇಳುವ ನೈತಿಕ ಸ್ಥೈರ್ಯವಿರುವ ಜೀವಗಳೇ ಇಂದು ಕಾಣೆಯಾಗಿದ್ದಾರೆ. ಏಕೆಂದರೆ ಇಂದು ಎಲ್ಲರೂ ಧರ್ಮನಿರಪೇಕ್ಷತೆಯ ದೀಕ್ಷೆ ಪಡೆದವರೇ. ಗಾಂಧಿ ಸಂಕೇತಿಸುತ್ತಿದ್ದ ಹೆಣ್ಣು ಹಿಂದುತ್ವದ ಪರಂಪರೆಗೆ ವಾರಸುದಾರಿಕೆಯೇ ಇಲ್ಲವಾಗಿದೆ. ಗಾಂಧಿಯ ವಾರಸುದಾರಿಕೆಯನ್ನು ಹೇಳಿಕೊಳ್ಳುವ ಕಾಂಗ್ರೆಸ್ ಭ್ರಷ್ಟಗೊಂಡು ಬೇರೆಯೇ ಗಾಂಧಿಗಳ ವಾರಸುದಾರಿಕೆಯನ್ನು ಕಂಡುಕೊಂಡು ತನ್ನ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ದಾರಿ ಕಷ್ಟವಿದೆ...

-ಸಂಪಾದಕ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಫೆಬ್ರವರಿ ಸಂಚಿಕೆ ಎಂದಿನಂತೆ ಚೆನ್ನಾಗಿ ಬಂದಿದೆ ಎಂದರೆ ಅದು ವಾಡಿಕೆಯ ಮಾತು ಎಂದು ಪರಿಗ್ರಹಿಸಬಾರದು. ಸಂಚಿಕೆಯ ವಿಚಾರ ಮತ್ತು ವಿಶ್ಲೇಷಣೆಗಳನ್ನು ನೋಡಿದಾಗ ಆ ಬಗೆಯ ಮಾತು ಅನಿವಾರ್ಯವಾಗಿ ಹೊರಹೊಮ್ಮುತ್ತದೆ.

ಆಕಾಶವಾಣಿ ನನಗೆ ಪ್ರಿಯವಾದ ಮಾಧ್ಯಮ. ಅದು ಸಾವಿನ ಅಂಚಿಗೆ ತಲುಪಿದೆ ಎನ್ನುವ ನಿಮ್ಮ ಬರೆಹ ಅಪ್ರಿಯ ಸತ್ಯವೊಂದರ ಪ್ರಕಟಣೆ ಎನ್ನಿಸುತ್ತದೆ. ಅದು ಹಾಗಾಗಬಾರದು ಎನ್ನುವುದು ನನ್ನ ಕಾಳಜಿ. ಸಧ್ಯದಲ್ಲಿ ಅದು ತೀವ್ರತರ ಅಸ್ವಸ್ಥತೆಗೆ ಒಳಗಾಗಿದ್ದರೂ ಸೂಕ್ತ ಚಿಕಿತ್ಸೆಯ ಮೂಲಕ ಅದನ್ನು ಬದುಕಿಸಿಕೊಳ್ಳಬಹುದು ಎನ್ನುವುದು ನನ್ನ ಆಶಯ. ಸುದ್ದಿ, ಮಾಹಿತಿ, ವಿಚಾರ, ಸಂಗೀತ ಮುಂತಾದ ಕ್ಷೇತ್ರಗಳಲ್ಲಿ ಅದಕ್ಕೆ ಬೇರೆ ಮಾಧ್ಯಮಗಳು ಸರಿಸಾಟಿ ಆಗಲಾರವು. ಸಮಾಜ ಮನೋವಿಜ್ಞಾನಿ ಕರ್ಟ್ ಲೆವಿನ್‌ನ ಸೈದ್ಧಾಂತಿಕ ತತ್ವಗಳನ್ನು ಆಧರಿಸಿ ರೂಪಿಸಿದ ಹಲವು ಕಾರ್ಯಕ್ರಮಗಳು (ಉದಾ. ಕೃಷಿ, ಕಾರ್ಮಿಕ ವಿಚಾರಗಳನ್ನು ಕುರಿತ ರೇಡಿಯೊ ಚರ್ಚೆ, ಸಂವಾದಗಳು) ಪರಿಣಾಮಕಾರಿ ಕೆಲಸ ಮಾಡಿದ್ದಕ್ಕೆ ಸಾಕಷ್ಟು ಸಂಶೋಧನಾ ಪುಷ್ಟೀಕರಣಗಳು ದೊರಕುತ್ತವೆ.

ಬಹುಶಃ ಆಕಾಶವಾಣಿಯ ಪ್ರಮುಖ ಸಮಸ್ಯೆ ಅದು ಒಂದು ಸರ್ಕಾರಿ ಇಲಾಖೆಯಾಗಿ, ಇತರೆ ಇಲಾಖೆಗಳಂತೆ ಕಾರ್ಯ ನಿರ್ವಹಿಸುವ ಸ್ಥಿತಿಗೆ ತಲುಪಿರುವುದು. ಈ ಹಿಂದೆಯೂ ಆಕಾಶವಾಣಿ ಸರ್ಕಾರಿ ಸ್ವಾಮ್ಯದಲ್ಲಿ ಕೆಲಸ ಮಾಡುತ್ತಿತ್ತು, ನಿಜ. ಹಾಗಾದರೂ, ನೀವೂ ಸೇರಿದಂತೆ ಅಲ್ಲಿ ಕೆಲಸ ಮಾಡುತ್ತಿದ್ದ ಹಲವರು ಸೃಜನಶೀಲತೆ ಮತ್ತು ವೃತ್ತಿಪರತೆ ಹೊಂದಿದ್ದವರು. ಸಾಹಿತ್ಯ, ಸಂಸ್ಕೃತಿ, ಅಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಒಲವು ಹೊಂದಿದ್ದ ಅವರು ಜನರ ಆಸಕ್ತಿಗಳಿಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಿ, ಪ್ರಸಾರ ಮಾಡುವಲ್ಲಿ ಪರಿಶ್ರಮ ತೋರುತ್ತಿದ್ದರು. ನನಗೆ ಪರಿಚಿತರಿದ್ದ ಡಾ. ಎ. ಎಂ. ನಟೇಶ್, ಡಾ. ಎಚ್. ಕೆ. ರಂಗನಾಥ್ ಇವರನ್ನು ಪ್ರಾತಿನಿಧಿಕವಾಗಿ ಇಲ್ಲಿ ಸ್ಮರಿಸಿಕೊಳ್ಳುತ್ತೇನೆ. ಈಗ ಅಂಥವರು ಇಲ್ಲ ಎನ್ನುವುದು ನನ್ನ ಅಭಿಪ್ರಾಯವಲ್ಲ. ಆದರೆ ಅವರ ಸಂಖ್ಯೆ ಜಾಸ್ತಿಯಾಗಬೇಕು. ವೃತ್ತಿಪರತೆ ಬೆಳೆಯಬೇಕು. ಹೊಸ ಪ್ರಯೋಗಗಳನ್ನು ಮಾಡುವ ಸಾಹಸಗಳನ್ನೂ ಮಾಡಬೇಕು. ಬೇರೆಲ್ಲ ಮಾಧ್ಯಮಗಳ ಸ್ಪರ್ಧೆಯನ್ನು ಎದುರಿಸುತ್ತಲೇ ಆಕಾಶವಾಣಿ ಉಪಯುಕ್ತ ಕಾರ್ಯ ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ ಎನ್ನುವುದು ನನ್ನ ಅನ್ನಿಸಿಕೆ.

ಸಮಾಜದ ಹಲವು ಪ್ರಜ್ಞಾವಂತರು ಈಗಲೂ ಆಕಾಶವಾಣಿ ಮಾಧ್ಯಮವನ್ನು ಬಳಸುತ್ತಾರೆ ಎಂದು ನಾನು ಬಲ್ಲೆ. ಈಗಲೂ ಯಾವಾಗಲಾದರೂ ಒಮ್ಮೆ ನನ್ನ 'ಚಿಂತನ' ಪ್ರಸಾರವಾದಾಗ ಕೆಲವರಾದರೂ ನನಗೆ ಪೋನ್ ಮಾಡಿ, ಅದಕ್ಕೆ ಪ್ರತಿಕ್ರಿಯಿಸುತ್ತಾರೆ.

-ಡಾ. ಎಚ್.ಎಸ್.ಈಶ್ವರ, ಬೆಂಗಳೂರು

ಫೆಬ್ರುವರಿ ಸಂಚಿಕೆಯಲ್ಲಿ ಆಕಾಶವಾಣಿ ಮತ್ತು ಇತರ ವಾಹಿನಿಗಳ ಕುರಿತು ಲೇಖನಗಳು ತುಂಬ ಮೌಲಿಕವಾಗಿವೆ. ಬೆಂಗಳೂರಿಗೆ ಮಾತ್ರ ಸೀಮಿತವಾಗಿರುವ ಎಫ್‌ಎಂಗಳ ಹಾವಳಿ ಉ.ಕರ್ನಾಟಕದಲ್ಲಿ ಅಷ್ಟಾಗಿ ಇಲ್ಲ. ಹೀಗಾಗಿ ವಿವಿಧ ಭಾರತಿ ಮತ್ತು ಸ್ಥಳೀಯ ಕೇಂದ್ರಗಳು ಇನ್ನೂ ಕೆಲಮಟ್ಟಿಗೆ ತಮ್ಮತನ ಕಾಯ್ದುಕೊಂಡು ತಮ್ಮದೇ ಕೇಳುಗ ವರ್ಗವನ್ನು ಹೊಂದಿವೆ. ಕಿರಿಕಿರಿ ಎಣಿಸುವ ಅತಿಯಾದ ಸರಕಾರಿ ಜಾಹಿರಾತುಗಳನುಮತ್ತು ಹೊಸ ಸಿನೇಮ ಹಾಡುಗಳ ಕರ್ಕಶತನ ಹೊರತು ಪಡಿಸಿದರೆ ಈಗಲೂ ಆಕಾಶವಾಣಿ ಕೇಳಬಹುದು. ಆಕಾಶವಾಣಿ ಅಷ್ಟು ನಿರಾಶೆ ಹೊಂದಬೇಕಿಲ್ಲ.


ಯುವ ಸಮಾಜವಾದಿ ಮತ್ತು ಜೆಪಿ ಕುರಿತು ಲೇಖನಗಳು ಚನ್ನಾಗಿವೆ. ಆದರೆ ಸರ್ವೋದಯ, ಸಮಾಜವಾದಿ ಆಶಯಗಳನ್ನು ರಾಷ್ಟ್ರಮಟ್ಟದಲ್ಲಾಗಲಿ, ರಾಜ್ಯಮಟ್ಟದಲ್ಲಾಗಲಿ ಮುನ್ನಡೆಸುವ ಧುರೀಣರಿಲ್ಲದಿದ್ದರೆ ಆ ವಿಚಾರಗಳು ಇಂದಿನ ರಾಜಕೀಯ ಪರಿಸರದಲ್ಲಿ ಅನಾಥವಾಗುತ್ತಿವೆ.

-ವೆಂಕಟೇಶ ಮಾಚಕನೂರ, ಧಾರವಾಡ.

ಕಳೆದ ಸಂಚಿಕೆಯಲ್ಲಿನ 'ಗ್ಯಾಟ್ ಒಪ್ಪಂದಗಳಿಗೆ ಸಹಿ: ಸಾರ್ಥಕ ಶಿಕ್ಷಣಕ್ಕೆ ತಿಲಾಂಜಲಿ' (ಮೂಲ ಲೇಖನ: ರಮೇಶ್ ಪಟ್ನಾಯಕ್, ಸಂಗ್ರಹಾನುವಾದ: ಎಂ. ರಾಜು) ಮಹತ್ವದ ಮತ್ತು ಸಕಾಲಿಕವಾದ ಲೇಖನ: ಇದು. ಇದರ ಬಗ್ಗೆ ದೇಶದಾದ್ಯಂತ ಚರ್ಚೆಯಾಗಬೇಕಿದೆ. ಡಾ. ಮನಮೋಹನ ಸಿಂಗ್ ಅರ್ಥ ಮಂತ್ರಿಯಾಗಿದ್ದಾಗ ಜಾರಿಗೆ ತಂದ ಆರ್ಥಿಕ ಉದಾರೀಕರಣದ ಪ್ರಕ್ರಿಯೆ ಎಂಬ ತಳವಿಲ್ಲದ ಪ್ರಪಾತಕ್ಕೆ ತಲುಪಲಿರುವ ಹಲವು ಸಂಗತಿಗಳಲ್ಲಿ ಶಿಕ್ಷಣವೂ ಒಂದು. ಭಾರತದಲ್ಲಿ ಈಗಿರುವ ಶಿಕ್ಷಣ ವ್ಯವಸ್ಥೆಯನ್ನು ಉನ್ನತ ಶಿಕ್ಷಣವೆಂದೋ

(೧೯ನೇ ಪುಟಕ್ಕೆ

ನಮ್ಮ ಸಮಾಜವಾದಿಗಳು | ಉಜ್ವಲ ಪ್ರತಿಭೆಯ ದಣಿವರಿಯದ ಹೋರಾಟಗಾರ ಲೋಹಿಯಾ



ಭಾರತೀಯ ಸಮಾಜವಾದಿ ಇತಿಹಾಸದ ಉಜ್ವಲ ತಾರೆಗಳಲ್ಲೊಬ್ಬರಾದ ರಾಮಮನೋಹರ ಲೋಹಿಯಾ ಹುಟ್ಟಿದ್ದು ಈಗಿನ ಉತ್ತರ ಪ್ರದೇಶದ ಅಯೋಧ್ಯೆ ಬಳಿಯ ಅಕ್ಬರ್‌ಪುರ ಎಂಬಲ್ಲಿ. ೧೯೧೦ರ ಮಾರ್ಚ್ ೨೩ರಂದು. ಅವರದ್ದು ಲೋಹಿಯಾ ಎಂಬ ಕುಟುಂಬದ ಹೆಸರಿಗೆ ಕಾರಣವಾದ ಕಬ್ಬಿಣದ ವ್ಯಾಪಾರ ಮಾಡುತ್ತಿದ್ದ ಮಾರ್ವಾಡಿ ಕುಟುಂಬವಾಗಿದ್ದರೂ, ರಾಮಮನೋಹರ ಹುಟ್ಟುವ ವೇಳೆಗೆ ಅದು ವ್ಯಾಪಾರವನ್ನು ತ್ಯಜಿಸಿತ್ತು. ಅವರ ತಂದೆ ಹೀರಾಲಾಲ್ ಗಾಂಧಿ ವಿಚಾರಗಳಿಂದ ಆಕರ್ಷಿತರಾಗಿ ಹಿಂದಿ ಮತ್ತು ಖಾದಿ ಪ್ರಚಾರಾಂದೋಲನದ ಕಾರ್ಯಕರ್ತರಾಗಿ ದೇಶಾದ್ಯಂತ ಪ್ರವಾಸ ಮಾಡುತ್ತಿದ್ದರು. ಹೀಗಾಗಿ, ಚಿಕ್ಕ ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡಿದ್ದ ರಾಮಮನೋಹರ ಬೆಳೆದದ್ದು ನೆರೆಹೊರೆಯ ಅನ್ಯ ಕುಲಗಳ ತಾಯಂದಿರ ಪೋಷಣೆಯಲ್ಲೇ.

ಹೀರಾಲಾಲ್ ಹೆಚ್ಚು ಕಾಲ ಮಗನನ್ನು ಅನ್ಯರ ಸುಪರ್ದಿಯಲ್ಲಿ ಬಿಡಲಾಗದೆ, ಶಾಲಾ ಶಿಕ್ಷಣಕ್ಕಾಗಿ ಲೋಹಿಯಾರನ್ನು ತಾವಿದ್ದ ಮುಂಬೈಗೆ ಕರೆದೊಯ್ದು ಶಾಲೆಗೆ ಸೇರಿಸಿದರು. ಅಲ್ಲಿಯೇ ಮೊದಲ ಬಾರಿಗೆ ಲೋಹಿಯಾ ತಂದೆಯೊಂದಿಗೆ ಗಾಂಧಿಯನ್ನು ಕಂಡದ್ದು; ಆಶೀರ್ವಾದ ಪಡೆದದ್ದು. ನಂತರ ಹೀರಾಲಾಲ್ ತಮ್ಮ ಕೆಲಸಕ್ಕಾಗಿ ಕಲ್ಕತ್ತಾಗೆ ಹೋಗಿ ನೆಲೆಸಬೇಕಾಗಿ ಬಂದದ್ದರಿಂದ ಅವರ ಕಾಲೇಜು ವಿದ್ಯಾಭ್ಯಾಸ ನಡೆದದ್ದು ಆಗ ಧಾರ್ಮಿಕ–ಸಾಂಸ್ಕೃತಿಕ–ರಾಜಕೀಯ ನವೋದಯದ ಕೇಂದ್ರವಾಗಿದ್ದ ಆ ನಗರದಲ್ಲೇ. ಹಾಗೆ ನೋಡಿದರೆ ಅವರ ವ್ಯಕ್ತಿತ್ವದ ಸತ್ವ ರೂಪುಗೊಂಡದ್ದೂ ಅಲ್ಲಿಯೇ ಎಂದೂ ಹೇಳಬಹುದು. ೧೯೨೮ರಲ್ಲಿ ಅಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸಿದ್ಧತೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ರಾಮಮನೋಹರರು ತಮ್ಮ ಸಂಘಟನಾ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯಿಂದ ನೆಹ್ರೂ ಮತ್ತು ಸುಭಾಷರ ಗಮನ ಸೆಳೆದರು.

೧೯೨೯ರಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಮಾರ್ವಾಡಿ ಪೋಷಕರ ಸಂಘದಿಂದ ಲೋಹಿಯಾರನ್ನು ಲಂಡನ್‌ಗೆ ಕಳಿಸಲಾಯಿತಾದರೂ, ಅಲ್ಲಿ ಗುಲಾಮಿ ದೇಶದ ಪ್ರಜೆಯಾಗಿ ಇರಲು ನಿರಾಕರಿಸಿ ಅಲ್ಲಿಂದ ಜರ್ಮನಿಗೆ ಹೋದರು. ಬರ್ಲಿನ್ ವಿಶ್ವವಿದ್ಯಾಲಯದಲ್ಲಿ 'ಉಪ್ಪು ಮತ್ತು ಸತ್ಯಾಗ್ರಹ' ಎಂಬ ವಿಷಯವಾಗಿ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಜೆಂಬಾರ್ಟ್ ಅವರ ಮಾರ್ಗದರ್ಶನದಲ್ಲಿ ಡಾಕ್ಟೋರೇಟ್‌ಗಾಗಿ ವಿಶೇಷ ಅಧ್ಯಯನ ಕೈಗೊಂಡರು. ಆಗ ಜರ್ಮನಿಯ ರಾಜಕೀಯ ದಿಗಂತದಲ್ಲಿ ಕ್ರಿಯಾಶೀಲವಾಗಿದ್ದ ಬಂಡವಾಳವಾದ, ಸಮತಾವಾದ, ಫ್ಯಾಸಿಸಂ ಇತ್ಯಾದಿ ವಿವಿಧ ರಾಜಕೀಯ ಅಲೆಗಳಬ್ಬರದ ನಡುವೆ ಯೂರೋಪಿನ ಹೊಸ ರಾಜಕಾರಣ ಮೂಡುತ್ತಿದ್ದ ಬಗೆಯನ್ನು ಗಮನಿಸುತ್ತಿದ್ದ ಲೋಹಿಯಾರ ಆಸಕ್ತಿ ತಮ್ಮ ಅಧ್ಯಾಪಕರ ಪ್ರಭಾವದಲ್ಲಿ ಸಮಾಜವಾದದ ಕಡೆ ಹೊರಳಲಾರಂಭಿಸಿತ್ತು.

ಎರಡನೇ ಮಹಾಯುದ್ಧದ ಕಾರ್ಮೋಡಗಳು ಯೂರೋಪಿನ ನೆತ್ತಿಯ ಮೇಲೆ ಕವಿಯತೊಡಗಿದಾಗ ೧೯೩೨ರಲ್ಲಿ ಜರ್ಮನಿಯನ್ನು ತೊರೆದು ಭಾರತಕ್ಕೆ ವಾಪಸಾದ ಲೋಹಿಯಾ ಯಾವ ಉದ್ಯೋಗವನ್ನೂ ಅರಸದೆ ಕಲ್ಕತ್ತಾದಲ್ಲಿ ಸಮಾನ ಮನಸ್ಕ ಗೆಳೆಯರ ಗುಂಪೊಂದನ್ನು ಸಂಘಟಿಸಿ ಕಾಂಗ್ರೆಸ್ಸಿನಲ್ಲಿ ಸಮಾಜವಾದಿ ಆದರ್ಶಗಳನ್ನು ಬಿತ್ತುವ ಬಗ್ಗೆ ಚರ್ಚೆಗಳನ್ನು ನಡೆಸುತ್ತಾ 'ಕಾಂಗ್ರೆಸ್ ಸೋಶಲಿಸ್ಟ್' ಎಂಬ ಪತ್ರಿಕೆಯನ್ನೂ ಆರಂಭಿಸಿದರು. ೧೯೩೪ರ ಹೊತ್ತಿಗೆ ಜಯಪ್ರಕಾಶ ನಾರಾಯಣ ಮತ್ತವರ ಗೆಳೆಯರು ಮುಂಬೈನಲ್ಲಿ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಸ್ಥಾಪಿಸುವ ಚರ್ಚೆ ಆರಂಭಿಸಿದಾಗ ಲೋಹಿಯಾ ಕೂಡ ಅದರಲ್ಲಿ ಸೇರಿ ಪಕ್ಷದ ಸ್ಥಾಪಕ ಸದಸ್ಯರಲ್ಲೊಬ್ಬರಾದರು. ಅವರ ಸಂಪಾದಕತ್ವದ 'ಕಾಂಗ್ರೆಸ್ ಸೋಶಲಿಸ್ಟ್' ಹೊಸ ಪಕ್ಷದ ಮುಖವಾಣಿಯಾಯಿತು. ಈ ಪತ್ರಿಕೆಯಲ್ಲಿನ ವಿವಾದಾತ್ಮಕ ಮತ್ತು ಚುರುಕಾದ ಲೇಖನಗಳ ಮೂಲಕ ಗಾಂಧಿಯವರ ಗಮನ ಸೆಳೆದು ಮುಂದೆ ಅವರ ವಿಶಿಷ್ಟ ಶಿಷ್ಯರಾಗಿ ಬೆಳೆದು ಸಮಾಜವಾದಕ್ಕೆ ಒಂದು ಹೊಸ ಆಯಾಮವೇ ಒದಗಲು ಕಾರಣವಾಯಿತು.

ನೆಹ್ರೂ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಅವರ ಆಪ್ತ ಗೆಳೆಯರಾಗಿದ್ದ ಲೋಹಿಯಾ ಕಾಂಗ್ರೆಸ್ಸಿನ ವಿದೇಶ ವ್ಯವಹಾರ ವಿಭಾಗದ ಸೂತ್ರಧಾರರಾಗಿ ಇಂದಿಗೂ ಭಾರತದ ವಿದೇಶಾಂಗ ನೀತಿ ಸಂಹಿತೆಯಾಗಿ ಉಳಿದಿರುವ ಅನೇಕ ಪರಿಕಲ್ಪನೆಗಳನ್ನು ರೂಪಿಸಿದರು ಎಂದು ಹೇಳಲಾಗುತ್ತದೆ. ಅಲ್ಲದೆ, ಯುದ್ಧಕಾಲದ ಆ ಸಂದರ್ಭದಲ್ಲಿ ಗಾಂಧಿ ಜೊತೆಗೆ ನಡೆಸಿದ ಅನೇಕ ಸಂವಾದಗಳು, ನಿಶ್ಶಸ್ತ್ರೀಕರಣ, ಅಹಿಂಸೆ ಮತ್ತು ನಾಗರಿಕ ಅಸಹಕಾರ ಕುರಿತ ಹೊಸ ಚರ್ಚೆಗಳಿಗೆ ಕಾರಣವಾದವು. ೧೯೪೨ರಲ್ಲಿ ಗಾಂಧಿ ಬ್ರಿಟಿಷರಿಗೆ ನೀಡಿದ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂರ್ಭದಲ್ಲಿ ಭೂಗತರಾಗಿ ತಮ್ಮ ಸಹ ಸಮಾಜವಾದಿಗಳೊಂದಿಗೆ ಲೋಹಿಯಾ ಬ್ರಿಟಿಷ್ ಪ್ರಭುತ್ವದ ವಿರುದ್ಧ ನಡೆಸಿದ ಬುಡಮೇಲು ಕೃತ್ಯಗಳು ಮತ್ತು ಅದರ ಪರಿಣಾಮವಾಗಿ ದಸ್ತಗಿರಿಯಾಗಿ ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಅನುಭವಿಸಬೇಕಾಗಿ ಬಂದ ಚಿತ್ರಹಿಂಸೆ, ೧೯೪೬ರಲ್ಲಿ ಸ್ವಾತಂತ್ರ್ಯೋದಯದ ಹಿನ್ನೆಲೆಯಲ್ಲಿ ಬಿಡುಗಡೆಯಾದ ನಂತರ ಅವರನ್ನು ರಾಷ್ಟ್ರದ ಹೆಮ್ಮೆಯ ಯುವನಾಯಕರಲ್ಲೊಬ್ಬರನ್ನಾಗಿ ಮಾಡಿತು. ತದನಂತರದಲ್ಲೇ ಪೋರ್ಚುಗೀಸರ ವಶದಲ್ಲಿದ್ದ ಗೋವಾಗೆ ತೆರಳಿದ ಲೋಹಿಯಾ ಅಲ್ಲಿಯೂ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿ ಬಂದರು.

ಪ್ರತಿಭೆ ಮತ್ತು ಸಾಹಸಗಳ ಅಪೂರ್ವ ಸಂಗಮವೆನಿಸಿದ್ದ ಲೋಹಿಯಾ ಗಾಂಧಿಯ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಲೋಹಿಯಾರನ್ನು ಅವರು 'ಅಪರೂಪದ ಶೀಲವಂತ ವ್ಯಕ್ತಿತ್ವ' ಎಂದು ಗುರುತಿಸಿದ್ದರು. ಗಾಂಧಿಯೊಡನೆ, ಅನೇಕ ಕಾಂಗ್ರೆಸ್ ಸಮಾಜವಾದಿಗಳಂತೆಯೇ ರಾಷ್ಟ್ರ ವಿಭಜನೆಯನ್ನು ವಿರೋಧಿಸಿದ ಲೋಹಿಯಾ ರಾಷ್ಟವಿಭಜನೆಯ ಬೆನ್ನಲ್ಲೇ ಹಬ್ಬಿದ ಕೋಮು ಗಲಭೆಗಳ ಹೊತ್ತಿನಲ್ಲಿ ಪರಿಹಾರ ಕಾರ್ಯಕ್ರಮಗಳಿಗಾಗಿ ಗಾಂಧಿ ಜೊತೆಯಲ್ಲಿ ಸಂಚರಿಸಿದರು. ತಾವು ಕೊಲೆಯಾಗುವ ಎರಡು ಮೂರು ದಿನ ಮುನ್ನ ಗಾಂಧಿ ದೇಶವನ್ನು ಮುನ್ನೆಡಸಲು ಆರಂಭಿಸಬೇಕಾದ ಹೊಸ ರಾಜಕಾರಣ ಮತ್ತು ಕಟ್ಟಬೇಕಾದ ಹೊಸ ನಾಯಕತ್ವದ ಬಗೆಯ ಬಗ್ಗೆ ವಿಶೇಷವಾಗಿ ಲೋಹಿಯಾರೊಂದಿಗೆ ಆಪ್ತ ಮಾತುಕತೆ ನಡೆಸಿದ್ದರು. ಆ ಮಾತುಕತೆ ಪೂರ್ಣವಾಗುವ ಮುನ್ನವೇ ಗಾಂಧಿ ಕೊಲೆಯಾಯಿತು.

ಗಾಂಧಿಯ ಅಗಲಿಕೆ ಲೋಹಿಯಾರನ್ನು ಕಂಗೆಡಿಸಿತು. ಇದರ ಜೊತೆಗೇ ಕಾಂಗ್ರೆಸ್ಸಿನೊಳಗಿನ ಬಲಪಂಥೀಯರ ರಾಜಕಾರಣದಿಂದಾಗಿ ಕಾಂಗ್ರೆಸ್ ಸಮಾಜವಾದಿಗಳು ಕಾಂಗ್ರೆಸ್ ಪಕ್ಷವನ್ನು ತೊರೆದು ತಮ್ಮದೇ (ಪ್ರಜಾ) ಸಮಾಜವಾದಿ ಪಕ್ಷವನ್ನು ಕಟ್ಟಿಕೊಳ್ಳುವ ಅನಿವಾರ್ಯತೆ ಉಂಟಾಯಿತು. ೧೯೫೨ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಈ ಹೊಸ ಪಕ್ಷ ಭಾರಿ ಸೋಲನ್ನು ಅನುಭವಿಸಿದಾಗ ಅದರ ನಾಯಕರೆಲ್ಲ ದಿಕ್ಕೆಟ್ಟಂತಾದರು. ಚುನಾವಣಾ ಸೋಲನ್ನು ವಿಶ್ಲೇಷಿಸಲು ಮಧ್ಯಪ್ರದೇಶದ ಪಂಚಮಡಿಯಲ್ಲಿ ಸೇರಿದ ಪಕ್ಷದ ಸಮಾವೇಶದಲ್ಲಿ ಮುಖ್ಯ ಭಾಷಣ ಮಾಡಿದ ಲೋಹಿಯಾ ಸಮಾಜವಾದ ಕುರಿತಂತೆ ಆವರೆಗೆ ತಾವು ಮಾಡಿದ್ದ ಹೊಸ ಆಲೋಚನೆಗಳನ್ನು ತೆರೆದಿಟ್ಟರು.

ಮುಂದೆ 'ಭಾರತೀಯ ಸಮಾಜವಾದದ ತಾತ್ವಿಕ ಅಡಿಗಲ್ಲು ಎಂದೇ ಹೆಸರಾದ ಆ ಭಾಷಣ, ಆವರೆಗೆ ಮೂಲತಃ ಮಾರ್ಕ್ಸ್‌ವಾದಿಯಾಗಿದ್ದ ಭಾರತೀಯ ಸಮಾಜವಾದಕ್ಕೆ ಗಾಂಧಿವಾದದ ದೀಕ್ಷೆ ನೀಡಿತು. ತಂತ್ರಜ್ಞಾನದ ಕ್ರಾಂತಿಕಾರತೆಯನ್ನು ನಂಬಿದ ಆಧುನಿಕ ಬದುಕಿನ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಆಕಾಂಕ್ಷೆಯನ್ನು, ಅದು ಜಗತ್ತಿನಲ್ಲಿ ಶೋಷಣೆ ಮತ್ತು ಯುದ್ಧಗಳನ್ನಷ್ಟೇ ಉಂಟು ಮಾಡಬಲ್ಲುದು ಎಂದು ವಿಶ್ಲೇಷಿಸಿದ ಲೋಹಿಯಾ; ಅದರ ಜಾಗದಲ್ಲಿ ಮನುಷ್ಯ ಕಳೆದುಹೋಗದಂತಹ ಮಧ್ಯಮ ತಂತ್ರಜ್ಞಾನವನ್ನು ಆಧರಿಸಿದ ಒಂದು ಸರಳ ಸಭ್ಯ ಜೀವನ ಮಟ್ಟದ ಆಕಾಂಕ್ಷೆಯನ್ನು ಪ್ರತಿಪಾದಿಸಿದರು. ಕಮ್ಯೂನಿಸಂನ ವರ್ಗ ಸಂಘರ್ಷಕ್ಕೆ ಬದಲಾಗಿ ನಾಗರಿಕ ಅಸಹಕಾರ ಸತ್ಯಾಗ್ರಹವನ್ನು ಪ್ರತಿಪಾದಿಸಿದರು. ಇತಿಹಾಸವನ್ನು ಗ್ರಹಿಸುವ ಹೊಸ ಕ್ರಮವೊಂದನ್ನು ಪ್ರತಿಪಾದಿಸುವ ಮೂಲಕ

(೩ನೇ ಪುಟಕ್ಕೆ

ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ-೪೧

-ಇಂದಿರಾ ಬಿ. ಕೃಷ್ಣಪ್ಪ

ತಂಗಿ ರೇಣುಕಾಳ ಮದುವೆ-ಸಂಸಾರ

ತಂದೆ ಕಾಲವಶರಾದ ಬಳಿಕ, ಕೃಷ್ಣಪ್ಪನವರಿಗೆ – ಸಹೋದರಿ ರೇಣುಕಾಳ ವಿವಾಹದ ಜವಾಬ್ದಾರಿಯನ್ನು ಮತ್ತಷ್ಟು ಜಾಗೃತಗೊಳಿಸಿತ್ತು. ರೇಣುಕಾ ದಾವಣಗೆರೆಯಲ್ಲಿ ಬಿ.ಎಡ್ ಮಾಡುತ್ತಿದ್ದಾಗಲೇ, ಕೃಷ್ಣಪ್ಪ, ಕಾಲೇಜಿನ ಗೆಳೆಯರಲ್ಲಿ ಮತ್ತು ಕದಸಂಸ ಒಡನಾಡಿಗಳೊಂದಿಗೆ ತಂಗಿಯ ಮದುವೆಯ ಪ್ರಸ್ತಾಪವನ್ನು ಮಾಡಿದ್ದರು. ಅದರಂತೆ ಕೋಲಾರ ಜಿಲ್ಲಾ ಸಂಚಾಲಕರಾಗಿದ್ದ ಎನ್. ಶಿವಣ್ಣನವರು ಮತ್ತು ಎನ್. ಮುನಿಸ್ವಾಮಿಯವರು, ನಾರಾಯಣಸ್ವಾಮಿ ಪಿ.ಸಿ ಎಂಬ ಯುವಕನನ್ನು ಮನೆಗೆ ಕರೆತಂದಿದ್ದರು. ನಾರಾಯಣ ಸ್ವಾಮಿಯವರು, ಬಿ.ಎ.ಪದವಿ ಪಡೆದಿದ್ದು, ಕೆಲಸದ ಬೇಟೆಯಲ್ಲಿದ್ದರು ಮತ್ತು ಕದಸಂಸಯ ತಾಲ್ಲೂಕು ಸಂಚಾಲಕರಾಗಿ ಕೆಲಸ ನಿರ್ವಹಿಸುತ್ತಿದ್ದರು.

ಆವತ್ತು ಭಾನುವಾರ. ಎಲ್ಲರೂ ಮನೆಯಲ್ಲಿದ್ದೆವು. ಸುಮಾರು ೧೨ ಗಂಟೆ ವೇಳೆಗೆ ವರನೊಂದಿಗೆ ಬಂದಿದ್ದವರು, ನಾರಾಯಣಸ್ವಾಮಿಯವರು. ಅವರ ತಂದೆ-ತಾಯಿ, ಮನೆಯ ವಾತಾವರಣ, ಶ್ರೀನಿವಾಸಪುರ ತಾಲ್ಲೂಕಿನ ಪಿಲ್ಲಿಕುಂಟೆ ಗ್ರಾಮದಲ್ಲಿರುವ ಅವರ ಸ್ಥಿತಿಗತಿಗಳನ್ನು ನಮ್ಮ ಮುಂದೆ ತಿಳಿಸಿದ್ದರು. ಅವು ಯಾವುದೂ ನಮಗೆ ಮುಖ್ಯವಾಗಿರಲಿಲ್ಲ. ನಾರಾಯಣಸ್ವಾಮಿಯವರ ಗುಣಸ್ವಭಾವಗಳು, ಅವರು ರೇಣುಕಾಳೊಂದಿಗೆ ಹೇಗೆ ಹೊಂದಿಕೊಳ್ಳ ಬಲ್ಲರೆಂಬುದು ಪ್ರಧಾನವಾಗಿತ್ತು. ರೇಣುಕಾ, ಬಿ.ಎಡ್ ಮಾಡಿ ಭದ್ರಾವತಿಯ ಕನಕ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಳು. ಪದವಿ ಇದೆ; ಸಂಘಟನೆಯ ಕಾರ್ಯಕರ್ತನಾಗಿದ್ದ ಅವರ ಗುಣಸ್ವಭಾವ, ಶಿವಣ್ಣ ಮತ್ತು ಮುನಿಸ್ವಾಮಿಯವರ ಅಭಿಪ್ರಾಯಗಳಿಂದ ತಿಳಿಯಿತು. ಕೃಷ್ಣಪ್ಪ ಮತ್ತು ನಾನೂ ನಾರಾಯಣಸ್ವಾಮಿಯವರನ್ನು ಒಪ್ಪಿಕೊಂಡೆವು. ಇನ್ನು ರೇಣುಕಾಳ ಒಪ್ಪಿಗೆ ವಿಚಾರ "ಅತ್ತಿಗೇ, ನೀವು- ಅಣ್ಣ ಒಪ್ಪಿದರೆ, ನನ್ನದೇನೂ ಇಲ್ಲ" ಎಂದಿದ್ದಳು, ನಾರಾಯಣಸ್ವಾಮಿಯವರಿಗೆ ಸಂಘಟನೆ ಕಟ್ಟಿದ ಹಿರಿಯ ನಾಯಕರ ತಂಗಿಯೊಂದಿಗೆ ವಿವಾಹವೆನ್ನುವುದೇ ಹೆಮ್ಮೆ ಮತ್ತು ಮುಜುಗರದ ಸಂಗತಿಯಾಗಿದ್ದರೂ ಅವರು ಶಿವಣ್ಣನವರೊಂದಿಗೆ ಈ ವಿಷಯ ಹೇಳಿಕೊಂಡರು. ರೇಣುಕಾಳನ್ನು ಮದುವೆಯಾಗಲು 'ಒಪ್ಪಿಗೆ' ತಿಳಿಸಿದರು ಮತ್ತು ನಾರಾಯಣಸ್ವಾಮಿಯವರ ತಂದೆ-ತಾಯಿ ಬಳಗದವರನ್ನು ಒಪ್ಪಿಸುವ ಜವಾಬ್ದಾರಿಯನ್ನು ಶಿವಣ್ಣ ಮತ್ತು ಮುನಿಸ್ವಾಮಿಯವರು ವಹಿಸಿಕೊಂಡರು.

ರೇಣುಕಾಳಿಗೆ ವರಾನೇಷ್ವಣೆಯ ವಿಚಾರ ಹೀಗೆ ಸುಸೂತ್ರವಾಗಿ ನೆರವೇರುತ್ತೆ ಅನ್ನೊ ಬಗ್ಗೆ ನನಗೇ ಬಹಳ ಶಂಕೆ ಇತ್ತು. ರೇಣುಕಾ ಬಿ.ಎ.ಬಿ.ಎಡ್ ಮಾಡಿದವಳು, ನಗರ ವಾತಾವರಣ ಮತ್ತು ಸಮುದಾಯದ ಆಚೆ ಸ್ನೇಹ ಸಂಪರ್ಕವನ್ನು ಬೆಳೆಸಿಕೊಂಡವಳು. ಆಕೆ ಮದುವೆಯ ನಂತರ ಎಂಥಹ ವಾತಾವರಣದೊಳಗೆ ಪ್ರವೇಶಿಸಬೇಕಾಗುತ್ತೋ ಅಂತ ನನಗೇ ಚಿಂತೆ ಹತ್ತಿತ್ತು. ನಾರಾಯಣಸ್ವಾಮಿಯವರನ್ನು ಕಂಡ ನಂತರ ನನ್ನ ಚಿಂತೆಯೂ ಅರ್ಧದಷ್ಟು ಇಳಿದಿತ್ತು. ಅಣ್ಣನಂತೆ ಸ್ವಲ್ಪ ಕೋಪಿಷ್ಟಳು, ದುಡುಕು ಸ್ವಭಾವದವಳಾಗಿದ್ದ ಆಕೆಯನ್ನು ನಾರಾಯಣಸ್ವಾಮಿ ಒಪ್ಪಿಕೊಂಡಿದ್ದು ಕೃಷ್ಣಪ್ಪನವರಿಗೆ ಬಹಳ ಸಂತೋಷವಾಗಿತ್ತು. ನಾವು ರೇಣುಕಾಳ ಅಕ್ಕಂದಿರು, ಅಣ್ಣಂದಿರೆಲ್ಲರಿಗೂ ಒಪ್ಪಿಸುವುದಾಗಿಯೂ, ಅವರಿಗೆ ತಿಳಿಸಿದೆವು. ಕೂಡಲೇ ಮದುವೆ ಮಾಡುವ ಪರಿಸ್ಥಿತಿಯಲ್ಲಿ ನಾವಿರಲಿಲ್ಲ. ಆದ್ದರಿಂದ ಆರು ತಿಂಗಳೊಳಗೆ ನಾರಾಯಣಸ್ವಾಮಿಯವರು ಕೆಲಸ ಅರಸಿಕೊಳ್ಳಲು, ನಂತರ ವಿವಾಹ ಕಾರ್ಯ ಮಾಡಬಹುದೆಂದು ಅಂದೇ ತೀರ್ಮಾನಿಸಿದೆವು.

ತದನಂತರ ನಾರಾಯಣಸ್ವಾಮಿ, ಖಾಸಗಿ ಶಾಲೆಗಳಲ್ಲಿ ಅಧ್ಯಾಪಕ ಹುದ್ದೆಗಾಗಿಯೂ, ಕೆಲವು ಖಾಸಗಿ ಉದ್ದಿಮೆಗಳಲ್ಲಿ ಸಹಾಯಕ ಕೆಲಸಕ್ಕಾಗಿಯೂ ಪ್ರಯತ್ನಿಸಿದರು. ಖಾಸಗಿ ಶಾಲೆಯ ಆಡಳಿತ ಮಂಡಳಿಯವರು, ಅಧ್ಯಾಪಕನಿಗೆ ಸಂಬಳ ಕೊಡುವ ಮಾತಿರಲಿ, ಅಭ್ಯರ್ಥಿಯೇ ಡೊನೇಷನ್ ಕಟ್ಟಿ, ಅಧ್ಯಾಪಕ ವೃತ್ತಿ ಪಡೆಯಬೇಕಾದ ಪರಿಸ್ಥಿತಿ ಎದುರಾಗಿತ್ತು. ಅಂಥಹ ಒಂದೆರಡು ಪ್ರಸ್ತಾವಗಳನ್ನು ನಾರಾಯಣಸ್ವಾಮಿಯವರು ತಂದಿದ್ದರು ಮತ್ತು ಪ್ರೊ. ಕೃಷ್ಣಪನವರು ಹೇಳಿದ್ರೆ,



ರೇಣುಕಾ-ನಾರಾಯಣಸ್ವಾಮಿಯವರ ಕುಟುಂಬ

ಒಂದೆರಡು ಕಡೆ ಕೆಲಸ ಕೊಡ್ತಾರೇನೋ ಎಂಬ ಆಸೆಯು ಅವರ ಮನದಲ್ಲಿತ್ತು. ಆಗ ಕೃಷ್ಣಪ್ಪ "ನಾವು, ಅನ್ಯಾಯ, ಭ್ರಷ್ಟಾಚಾರ, ಸ್ವಜನಪಕ್ಷಪಾತವನ್ನು ಖಂಡಿಸುವವರಾಗಿರೋದರಿಂದ, ನಿನಗೆ ಕೆಲಸ ಕೊಡಬೇಕೆಂದಿರುವವರೂ, ಕೆಲಸ ಕೊಡಬಾರದೆಂದು ನಿರ್ಣಯಿಸಿಬಿಡಬಹುದು. ನನ್ನ ಹೆಸರನ್ನು ಹೇಳದೆ, ನೀನೇ ಪ್ರಯತ್ನಿಸು" ಎಂದರು.

ಹೀಗೆ ಮದುವೆಯ ದಿನಾಂಕ, ಆತನ ಕೆಲಸದ ಕಾರಣದಿಂದ ಮುಂದಕ್ಕೋಗುತ್ತಿತ್ತು. ನಾನಂತೂ, "ನಾರಾಯಣಸ್ವಾಮಿಗೆ ಕೆಲಸ ಸಿಕ್ಕ ನಂತರವೇ ಮದುವೆ ಮಾಡೋಣ, ಅವಳ ಮದುವೆಯಾದರೆ, ಅವಳು ಇಲ್ಲೂ ಕೆಲಸ ಬಿಡಬೇಕು. ಅಲ್ಲೂ ಕೆಲಸ ಇರೋಲ್ಲ. ಅವರ ಹಳ್ಳಿಯಲ್ಲಿರೋ ಜಮೀನು ನಂಬಿಕೊಂಡು, ಇವಳು ಅಲ್ಲೇ ಹೋಗಿ ಅವಲಂಬಿ ಆಗಬಾರದು" ಅಂತ ಕೃಷ್ಣಪ್ಪನವರಿಗೆ ಹೇಳಿದ್ದೆ. ಅದಕ್ಕೆ ಅವರ ಸಮ್ಮತಿಯೂ ಇತ್ತು. ಆದರೆ ಮದುವೆ ನಿಶ್ಚಯವಾದ ಯುವ ಮನಸ್ಸುಗಳು ಮೌನದಿಂದಿರಲೂ, ನೋಡದಿರಲೂ, ಬಹುದೂರವಿರಲೂ ಸಾಧ್ಯವಿತ್ತೇ? ಇಲ್ಲ; ನಮ್ಮ ಮನೆಗೆ ನಾರಾಯಣಸ್ವಾಮಿಯವರ ಭೇಟಿ ಹೆಚ್ಚುತ್ತಾ ಹೋಯಿತು. ನಾನು- ಕೃಷ್ಣಪ್ಪ ಬೆಳಿಗ್ಗೆ ಕೆಲಸಕ್ಕೆ ಹೊರಟರೆ, ಬರುವುದು ಮತ್ತೆ ರಾತ್ರಿಯೇ ಆಗುತ್ತಿತ್ತು. ಮನೆಯಲ್ಲಿ ಮಕ್ಕಳಿಬ್ಬರು, ಮೈತ್ರಾ, ತಿಪ್ಪೇಶ, ಅವರೂ ಶಾಲೆಗಳಿಂದ ಬರಬೇಕು. ಒಂದು ರೀತಿಯಲ್ಲಿ ನನಗೆ ಆತಂಕವೂ, ಭಯವೂ ಮನದಲ್ಲಿ ಕಾಡಲಾರಂಭಿಸಿತು. ಈ ವಿಷಯ ಕೃಷ್ಣಪ್ಪನವರಲ್ಲಿ ಮಾತನಾಡಿದೆ. ಅವರಿಗೂ ವಿಷಕಂತನ ಪರಿಸ್ಥಿತಿ ಬಂದಿತು.

ಒಂದುಕಡೆ ಮನೆಯವರ ಒಪ್ಪಿಗೆಯ ಪ್ರೀತಿ ತುಂಬಿಕೊಂಡ ಜೋಡಿಗಳು, ಇನ್ನೊಂದೆಡೆ ಮದುವೆ ಮಾಡಲಾಗದ ಪರಿಸ್ಥಿತಿ. ಕಡೆಗೆ ನಾವೇ ಚರ್ಚೆ ಮಾಡಿ, "ತಕ್ಷಣ ಮದುವೆ ಮಾಡುವುದು. ಅವಳು ಬಿ.ಎಡ್ ಮಾಡಿರೋದ್ರಿಂದ, ಸರ್ಕಾರಿ ಕೆಲಸ ಬೇಗ ಸಿಗಬಹುದು. ಅಲ್ಲಿಯವರೆಗೂ ಖಾಸಗಿ ಶಾಲೆಯಲ್ಲಿ ಕೆಲಸ ಮಾಡಬಹುದು. ಅಂತ ತೀರ್ಮಾನಿಸಿ, ಕೃಷ್ಣಪ್ಪನವರು ನಾರಾಯಣಸ್ವಾಮಿಯವರ ಮನೆಗೇ ಹೋಗಿ, ದಿನಾಂಕ ನಿಗದಿಪಡಿಸಿಕೊಂಡು ಬಂದರು ಮತ್ತು ಕೋಲಾರದ "ನಚಿಕೇತ ನಿಲಯ" ದಲ್ಲಿ ೧೯೯೦ರ ಮೇ ೨೦ ರಂದು ಸರಳ ವಿವಾಹವೆಂದು ನಿಶ್ಚಯವಾಯಿತು. ಕೃಷ್ಣಪ್ಪ – ನಾನು, ಹೋಗಿ ಮನೆಯವರಿಗೆಲ್ಲಾ ಬಟ್ಟೆ- ಸೀರೆ ಇತ್ಯಾದಿಗಳನ್ನು ತಂದೆವು. ರೇಣುಕಾ, ಭದ್ರಾವತಿಯ ಕೆಲಸಕ್ಕೆ ರಾಜೀನಾಮೆ ಕೊಟ್ಟಳು.

ಇಬ್ಬರು ನಿರುದ್ಯೋಗಿಗಳನ್ನು ಯಾವ ಆಸರೆಯಿಲ್ಲದ ಬದುಕಿಗೆ ತಳ್ಳತಾ ಇದ್ದೀವೇನೋ ಎಂಬ ಆತಂಕದ ನಡುವೆಯೇ ಮದುವೆಯ ದಿನ ಬಂದೇ ಬಿಟ್ಟಿತು. ಹರಿಹರದಿಂದ ಎಲ್ಲಾ ಬಂಧು ಬಾಂಧವರೊಂದಿಗೆ ನಾನೂ ಕೃಷ್ಣಪ್ಪ, ಮಕ್ಕಳು ಭದ್ರಾವತಿಯಿಂದ ಅಲ್ಲಿಗೆ ತೆರಳಿದ್ದೆವು. ಮದುವೆ, ಕದಸಂಸದ ಕೋಲಾರ ಜಿಲ್ಲೆಯ ಎಲ್ಲಾ ಕಾರ್ಯಕರ್ತರು, ಹಾಸನದಿಂದ ತ್ಯಾಗಿ, ಭದ್ರಾವತಿಯ ಗಿರಿಯಪ್ಪ ಮತ್ತು ಕಾರ್ಯಕರ್ತರು ಬಂದಿದ್ದರು. ಹೋರಾಟದ ಹಾಡುಗಳು, ಚಂದ್ರಪ್ರಸಾದ್ ತ್ಯಾಗಿ, ಗಿರಿಯಪ್ಪ ಮುಂತಾದ ಗೆಳೆಯರ ಮಾತುಗಳೊಂದಿಗೆ ಸರಳ ವಿವಾಹ

ಸಂಹಿತೆಯ ಸಂಕಲ್ಪ, ಪುಷ್ಪ ಮಾಲೆಯ ವಿನಿಮಯ ಮತ್ತು ಮಧ್ಯಾಹ್ನದ ಊಟದೊಂದಿಗೆ, ವಿವಾಹ ಸಮಾರಂಭ ಮುಗಿದೇ ಹೋಗಿತ್ತು.

ಆಗಮಿಸಿದ್ದ ಬಂಧು ಮಿತ್ರರನೆಲ್ಲಾ ಬೀಳ್ಕೊಟ್ಟು, ನಂತರ, ನಾವು ವಧುವರರೊಂದಿಗೆ ಅವರ ಊರು 'ಪಿಲ್ಲಿಕುಂಟೆ' ಗೆ ಹೋಗಿದ್ದೆವು. ಆಂಧ್ರದ ಗಡಿಭಾಗದ ಹಳ್ಳಿಯದು. ಅಲ್ಲಿಗೆ ತಲುಪುವಾಗ ಮುಸ್ಸಂಜೆಯಾಗಿತ್ತು. ದಾರಿಯುದ್ದಕ್ಕೂ, ಹಸಿರು ತುಂಬಿದ ತೋಟ- ಗದ್ದೆ; ಚಿಗುರೊಡೆದು, ಹೂ ತುಂಬಿಕೊಂಡು, ಗಾಳಿಗೆ ಪರಿಮಳ ಹರಡುವ ಚಿಕ್ಕ ಚಿಕ್ಕ ಮಾವಿನ ಮರಗಳ ತೋಟಗಳು, ಕೈಗೆಟಕುವಂತೆ, ನೆಲ ತಾಗುವಂತೆ ತೊನೆದಾಡುವ ತೋತಾಪುರಿ, ರಸಪುರಿ ಮಾವಿನ ಹಣ್ಣುಗಳು, ಸೊಪ್ಪು-ತರಕಾರಿ ತೋಟದ ನಡುವಿನ ಮನೆಗೆ ಹೋಗಿ ತಲುಪಿದ್ದೆವು. ಪುಟ್ಟ ಮನೆ. ನಗರಗಳಷ್ಟು ಸೌಕರ್ಯ ಮಾಡಿಕೊಳ್ಳದೆ, ತೋಟದಲ್ಲೇ ಬದುಕು ಕಳೆಯುವವರು – ಅವರು. ನಾವು ಸುತ್ತಮುತ್ತಲಿದ್ದ, ಗಗನ ಚುಂಬಿ- ತೆಂಗಿನ ಮರಗಳು, ದನಕರುಗಳನ್ನು ನೋಡುತ್ತಾ ಒಂದು ಸುತ್ತು ಬಂದೆವು. ಅಷ್ಟರಲ್ಲಿ ಕೋಡೊಲೆ ಮುಂದೆ ರೇಣುಕಾ ಅತ್ತೆ- ನಾದಿನಿಯವರು ಮುದ್ದೆ ತಿರುವುತ್ತಿದ್ದರು, ಸೊಪ್ಪುಸಾರು ಕುದಿಸುತ್ತಿದ್ದರು. ಅವರೆಲ್ಲಾ ತೆಲುಗು ಭಾಷೆ ಮಾತನಾಡುವವರು. ಅವರಿಗೆ ಕನ್ನಡವೇ ತಿಳಿಯದು. ನಾವು ಮುಖನೋಡಿ ಕಿರುನಗೆ ಬೀರುವುದು ಬಿಟ್ಟರೆ- ಮಾತಿಲ್ಲ-ಕತೆಯಿಲ್ಲ-ಮೌನ. ನಾರಾಯಣಸ್ವಾಮಿಗೆ, ನಮ್ಮ ನಾಯಕರು ನಮ್ಮ ಮನೆಗೆ ಬಂದಿದ್ದಾರೆ. ನಾನೇನು ಹೆಚ್ಚಿನ ಉಪಚಾರ ಮಾಡಲಿಕ್ಕೆ ಆಗೋಲ್ಲವಲ್ಲವೆಂಬ ಚಿಂತೆಯನ್ನು ಮುಖದ ಮೇಲೆ ಮೂಡಿಸಿಕೊಂಡಿದ್ದರು. ನನ್ನ ಬಳಿ ಬಂದು, "ಅಕ್ಕಾ ಬಡವರ ಮನೆ", ಅಂತ – ಇನ್ನೇನೋ ಹೇಳಲಿಕ್ಕೆ ಬಂದರು. ನಾನು ಅಷ್ಟಕ್ಕೆ ತಡೆದು ಜಗುಲಿಯ ಮೇಲೆ ಕುಳಿತುಕೊಂಡೆವು. ಊಟದ ನಂತರ ರಾತ್ರಿಯೇ ಬೆಂಗಳೂರಿಗೆ ಹೊರಟೆವು. ಅವಳನ್ನು, ನಮ್ಮಿಂದ ದೂರ, ಆಂಧ್ರದ ಗಡಿಯಲ್ಲಿರುವ ಹಳ್ಳಿಯೊಂದರಲ್ಲಿ, ಅಪರಿಚಿತರೊಡನೆ ಬಿಟ್ಟು ಬಂದ ದು:ಖ ನನ್ನ ಮನದಲ್ಲಿ ತುಂಬಿಕೊಂಡಿತ್ತು.

ಕೃಷ್ಣಪ್ಪನವರು ಏನೋ ಹೇಳಲು ಮಾತು ಪ್ರಾರಂಭಿಸುವುದು, ಹಾಗೇ ನುಂಗಿಕೊಳ್ಳವರು. ಈ ದು:ಖವೇ ಅನೂಚಾನವಾಗಿ ಮುಂದುವರಿಯಲಿಲ್ಲ. ಹಳ್ಳಿ-ಭಾಷೆ-ಅನಕ್ಷರತೆ-ಸೌಲಭ್ಯಗಳ ಕೊರತೆಯಿರುವ ಸ್ಥಳದಲ್ಲಿ ಆಕೆ ಹಲವಾರು ಮಾನಸಿಕ ತಳಮಳವನ್ನನುಭವಿಸುವಾಗಲೆಲ್ಲಾ ದೊಡ್ಡಣ್ಣ ಕೃಷ್ಣಪ್ಪ ಮತ್ತು ಚಿಕ್ಕಣ್ಣ ಹರಿಹರ-ಮಾರುತಿಯವರಿಗೆ 'ತಂತಿ' ಕಳುಹಿಸಿಬಿಡುತ್ತಿದ್ದಳು. ತಂತಿ ನೋಡಿದಾಕ್ಷಣ, ನಮಗೆಲ್ಲಾ ಎದೆ 'ಡವಡವ' ಅನ್ನಲಿಕ್ಕೆ ಪ್ರಾರಂಭವಾಗುತ್ತಿತ್ತು. ಮೂವರು ಅಣ್ಣಂದಿರಲ್ಲಿ ಇಬ್ಬರಂತೂ ತಕ್ಷಣ ಪಿಲ್ಲಿಕುಂಟೆಗೆ ಹೋಗಿ ತಂಗಿಯನ್ನು ಮನೆಯವರನ್ನು, ಸಾಮಾಧಾನ ಪಡಿಸಿ ಬರುತ್ತಿದ್ದರು. ಕೋಲಾರದ ಕಾರ್ಯಕ್ರಮವಿದ್ದಾಗಲೆಲ್ಲಾ ಅವಳ ಮನೆಗೆ ಹೋಗಿ, ಕ್ಷೇಮ-ಸಮಾಚಾರ ವಿಚಾರಿಸಿಕೊಂಡು ಬರುತ್ತಿದ್ದರು. ಹಾಗಾಗಿ ನಮಗೆ ನೆಮ್ಮದಿ.

ರೇಣುಕಾ ಗಟ್ಟಿಗಿತ್ತಿ. ಹಳ್ಳಿಯಿಂದ ಶ್ರೀನಿವಾಸಪುರದ ಬಾಡಿಗೆ ಮನೆಗೆ ಬಂದು, ಖಾಸಗಿ ಶಾಲೆಯಲ್ಲಿ ಕೆಲಸಕ್ಕೆ ಸೇರಿಕೊಂಡಳು. ಮಕ್ಕಳಿಬ್ಬರನ್ನು, ಅದೇ ಶಾಲೆಗೆ ಸೇರಿಸಿಕೊಂಡು, ಬದುಕು ಕಟ್ಟಿಕೊಂಡಳು. ನಾರಾಯಣಸ್ವಾಮಿಯವರು ತಂಗಿಯ ಮದುವೆ ಕೋಲಾರದಲ್ಲೇ ಏರ್ಪಡಿಸಿದ್ದರು. ಆ ಮದುವೆಗೆ ನಾವು ಹೋಗಿದ್ದೊಂದು ದೊಡ್ಡ ಪ್ರಯಾಸ. ಡಾ. ಅಂಬೇಡ್ಕರ್ ಪ್ರತಿಮೆಗೆ ಮದ್ಯಾಭಿಷೇಕದ ಪ್ರಕರಣದ ವಿರೋಧಿ ಚಳುವಳಿಯಲ್ಲಿ ಕೃಷ್ಣಪ್ಪನವರು ಭಾಗಿಯಾದದ್ದರಿಂದ, ಛತ್ರದವರು ಬಾಗಿಲು ಹಾಕುವ ಮುನ್ನ ನಾವು ಹೋಗಿ ಹರಸಲು ಸಾಧ್ಯವಾಯಿತು.

ಕೃಷ್ಣಪ್ಪನವರು, ಅವರ ತಂಗಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುವುದನ್ನು ನೋಡಲಾಗಲೇ ಇಲ್ಲ. ಅವರು ಗತಿಸಿದ ನಂತರ ಅವಳಿಗೆ ಆ ಕೆಲಸದೊರಕಿತ್ತು. ಕೆಲಸ ದೊರಕಿದ ದಿನ ಆಕೆ, ಅವರಣ್ಣನನ್ನು ನೆನೆಸಿಕೊಂಡು ಅತೀವ ದು:ಖಿತಳಾಗಿ, "ನಮ್ಮಣ್ಣ ಇದ್ದಿದ್ರೆ ಎಷ್ಟು ಸಂತೋಷ ಪಡ್ತಾ ಇದ್ರು, ನನ್ನ ಪ್ರತಿಭೆ, ವಿದ್ಯಾರ್ಹತೆ ಇರಲಿ, ಅವರ ಹೆಸರನ್ನು ಸಂದರ್ಶನದ ವೇಳೆ ಹೇಳಿದ್ದರಿಂದಲೇ ನನಗೆ ಕೆಲಸ ಸಿಕ್ತು" ಅಂತ ಈಗಲೂ ಜ್ಞಾಪಿಸಿಕೊಳ್ತ ಇರ್ತಾಳೆ. ಕಳೆದ ವರ್ಷ ಆಯುರ್ವೇದಿಕ್ ಡಾಕ್ಟರ್ ಆದ ಅವಳ ಮಗಳ ಮದುವೆಗೆ ಕರೆಯಲು ಬಂದಾಗ, ನಾವೆಲ್ಲ ರೇಣುಕಾ ಮದುವೆ, ಅವರ ಊರು ಪಿಲ್ಲಿಕುಂಟೆ, ಅವರ ಬಳಗ, ಅವರ ತೊಂದರೆ, ಅವಳ ಪಾಡು ಎಲ್ಲವನ್ನು ನೆನಪಿಸಿಕೊಳ್ಳುತ್ತಿದ್ದಾಗ, ನಾರಾಯಣಸ್ವಾಮಿ ರೇಣುಕಾಳನ್ನು ನೋಡುತ್ತಾ "ನಾನು ನಿನ್ನನ್ನು ನೋಡಿ, ಮದುವೆಯಾಗಿಲ್ಲ; ನಾನು ಅಕ್ಕ-ಭಾವನ್ನ ನೋಡಿ ನಿನ್ನನ್ನು ಮದುವೆಯಾದೆ!" ಎಂದು ಹೆಮ್ಮೆಯಿಂದ ಹೇಳಿದ್ದು ಕೇಳಿ, ನಮ್ಮ ಬದುಕೂ ಸಾರ್ಥಕವಾಯಿತು ಎನಿಸಿದ್ದು ಸುಳ್ಳಲ್ಲ.

(ಮುಂದುವರೆಯುವುದು)

೩ನೇ ಪುಟದಿಂದ)

ಮಾರ್ಕ್ಸ್‌ವಾದದ ತಾತ್ವಿಕ ತಳಹದಿಯನ್ನೇ ಪ್ರಶ್ನಿಸಿದ ಅವರು ಭಾರತೀಯ ಸಮಾಜವಾದ ಐರೋಪ್ಯ ಅನುಭವದ ತಾತ್ವಿಕತೆಯಿಂದ ಕಳಚಿಕೊಂಡು ತನ್ನದೇ ಹೊಸ ಲಂಗರುಗಳನ್ನು ಕಂಡುಕೊಳ್ಳಬೇಕಾದ ಅಗತ್ಯವನ್ನು ಒತ್ತಿಹೇಳಿದರು.

ಈ ಮಾತುಗಳು ಪಕ್ಷದಲ್ಲಿ ಚರ್ಚೆಯಲ್ಲಿರುವಾಗಲೇ ಪಕ್ಷದ ಕೆಲವರು ಪ್ರಧಾನಿ ನೆಹ್ರೂರಿಂದ ಬಂದ ಸಹಕಾರದ ಕರೆಗೆ ಓಗೊಟ್ಟು ಮಾತುಕತೆಗಳನ್ನು ಆರಂಭಿಸಿದರು. ಇದು ನೆಹ್ರೂ ಸರ್ಕಾರ ಜಾರಿಗೆ ತರುತ್ತಿದ್ದ ಸಮಾಜವಾದಕ್ಕಿಂತ ಭಿನ್ನವೂ, ಕ್ರಾಂತಿಕಾರಿಯೂ ಆದ ಸಮಾಜವಾದವನ್ನು ಕಟ್ಟುವ ಉಮೇದಿನಲ್ಲಿದ್ದ ಲೋಹಿಯಾರನ್ನು ಸಿಟ್ಟಿಗೆಬ್ಬಿಸಿತು. ಇದೇ ಸಂದರ್ಭದಲ್ಲಿ ಆಗಿನ ಕೊಚ್ಚಿನ್-ತ್ರಿವಾಂಕೂರು ರಾಜ್ಯದಲ್ಲಿ ಕಾಂಗ್ರೆಸ್ ಬೆಂಬಲದೊಂದಿಗೆ ಸಮಾಜವಾದಿಗಳು ರಚಿಸಿಕೊಂಡಿದ್ದ ಸರ್ಕಾರ ತನ್ನ ಪ್ರಜೆಗಳ ಮೇಲೇ ಗೋಲೀಬಾರ್ ನಡೆಸಿದಾಗ ಅದರ ರಾಜೀನಾಮೆಗಾಗಿ ಆಗ್ರಹಿಸಿದರು. ಇದಕ್ಕೆ ಸ್ವಲ್ಪ ಮುನ್ನ ಉತ್ತರ ಪ್ರದೇಶದ ಕಾಂಗ್ರೆಸ್ ಸರ್ಕಾರ ಜನರ ಮೇಲೆ ಗೋಲಿಬಾರ್ ಮಾಡಿದ ಸಂದರ್ಭದಲ್ಲಿ ಅದರ ರಾಜೀನಾಮೆಗೆ ಆಗ್ರಹಿಸಿದ್ದ (ಪ್ರಜಾ) ಸಮಾಜವಾದಿ ಪಕ್ಷ ಲೋಹಿಯಾರ ಆಗ್ರಹವನ್ನು ಆಶಿಸ್ತು ಎಂದು ಪರಿಗಣಿಸಿತು. ಈ ವಿವಾದ ತಾರಕಕ್ಕೇರಿ ಲೋಹಿಯಾ ತಮ್ಮ ಬೆಂಬಲಿಗರೊಂದಿಗೆ ಪಕ್ಷವನ್ನು ತೊರೆದು ೧೯೫೫ರಲ್ಲಿ ತಮ್ಮದೇ ಸಮಾಜವಾದಿ ಪಕ್ಷವನ್ನು ರಚಿಸಿಕೊಳ್ಳುವ ಅನಿವಾರ್ಯತೆ ಉಂಟಾಯಿತು.

ತುಂಬ ಮಹತ್ವಾಕಾಂಕ್ಷೆಯಿಂದ ಆರಂಭವಾದ ಈ ಪಕ್ಷ ಸ್ವಾತಂತ್ರ್ಯ ತಂದುಕೊಟ್ಟವರ ಪಕ್ಷವೆಂಬ ನಂಬಿಕೆ ಜನರಲ್ಲಿ ಬೇರೂರಿದ್ದ ಕಾಂಗ್ರೆಸ್‌ನ ಬಲಿಷ್ಠ ರಾಜಕಾರಣದ ಎದುರು ಯಶಸ್ವಿಯಾಗಿ ಸೆಣೆಸಲಾಗದಿದ್ದರೂ, ಕಾಲಕ್ರಮೇಣ ಕಾಂಗ್ರೆಸ್ಸಿನ ತತ್ವ, ದಾರಿದ್ರ್ಯ ಮತ್ತು ಭ್ರಷ್ಟಾಚಾರವನ್ನು ಬಯಲಿಗೆಳೆಯುವ ಹೋರಾಟಗಳ ಮೂಲಕ ಪರ್ಯಾಯ ರಾಜಕಾರಣದ ಹೊಸ ಹೊಳಹು ಮತ್ತು ಭರವಸೆಗಳನ್ನು ಸೃಷ್ಟಿಸಿದ್ದಂತೂ ನಿಜ. ಅವರು ಪ್ರತಿಪಾದಿಸಿದ ಕಾಂಗ್ರೆಸ್ಸೇತರವಾದ ಆ ಕಾಲಕ್ಕೆ ಕ್ರಾಂತಿಕಾರಕವೇ ಆಗಿದ್ದು , ೧೯೬೭ರ ಚುನಾವಣೆಗಳ ಹೊತ್ತಿಗೆ ಪಟ್ಟಭದ್ರ ರಾಜಕಾರಣದ ಪ್ರತೀಕವಾಗಿದ್ದ ಕಾಂಗ್ರೆಸ್‌ನ ಬುಡ ಅಲ್ಲಾಡುವಂತೆ ಮಾಡಿತು ಮತ್ತು ರಾಷ್ಟ್ರದಲ್ಲಿ ಬೇರೂರಿದ್ದ ಏಕಪಕ್ಷೀಯ ಸರ್ಕಾರದ ಪರಂಪರೆಯನ್ನು ಮುರಿಯಿತು..

ಅದೇನೇ ಇರಲಿ, ತಮ್ಮ ಪಕ್ಷದ ಪರವಾಗಿ ಲೋಹಿಯಾ ರೂಪಿಸಿದ ಜಾತಿ ವಿನಾಶ, ಇಂಗ್ಲಿಷ್ ತೊಲಗಿಸಿ, ಸ್ತ್ರೀ ಸಮಾನತೆ, ಚತುಸ್ತಂಭ ರಾಷ್ಟ, ವಿಶ್ವ ಸರ್ಕಾರ ಇತ್ಯಾದಿ ನೀತಿ-ಕಾರ್ಯಕ್ರಮಗಳು ಅತಿ ನಾವೀನ್ಯತೆಯಿಂದ ಕೂಡಿದ್ದು ಇಂದಿನ ರಾಜಕಾರಣದಲ್ಲಿ ಅವು ಕುರೂಪಿಯಾಗಿ ಕಾಣುತ್ತಿದ್ದರೆ ಅದಕ್ಕೆ ಹೊಸ (ಜಾಗತೀಕರಣದ) ರಾಜಕಾರಣವು ಲೋಹಿಯಾ ತಮ್ಮ ಸಮಾಜವಾದದ ಕೇಂದ್ರ ತತ್ವವಾಗಿ ನಿರೂಪಿಸಿದ್ದ 'ಮಿತಿಗಳುಳ್ಳ ಬದುಕಿ'ನ ಪರಿಕಲ್ಪನೆಗೆ ವಿದಾಯ ಹೇಳಿ ಮಿತಿಯಿಲ್ಲದ ಸುಖಗಳ ಬದುಕನ್ನು ಅಪ್ಪಿಕೊಂಡಿರುವದೇ ಕಾರಣವಾಗಿದೆ. ಪ್ರಗತಿಯ ಬಂಡಿಗೆ ಸಂಪದಭಿವೃದ್ಧಿ ಮತ್ತು ಸಮಾನತೆಯ ಎರಡು ಚಕ್ರಗಳಿಲ್ಲದಿದ್ದರೆ ಬಂಡಿ ಉರುಳಿಬೀಳುವುದು ಖಂಡಿತವೆಂದು ಹೇಳಿದ್ದ ಅವರ ಮಾತು ಎಷ್ಟು ನಿಜ ಎಂಬುದನ್ನು ಇಂದು 'ಬಲಿಷ್ಠ ಭಾರತ'ದ ನಿರ್ಮಾಣದ ಕೂಗಿನೊಂದಿಗೆ ನಡೆದಿರುವ ಅಭಿವೃದ್ಧಿಯ ಭರಾಟೆ ಸೃಷ್ಟಿಸುತ್ತಿರುವ ನಿಯಂತ್ರಣಕ್ಕೇ ಸಿಕ್ಕದಂತೆ ತೋರುತ್ತಿರುವ ನಿರಂತರ ಹಿಂಸೆ-ಅಶಾಂತಿಯ ಘಟನೆಗಳು ಸೂಚಿಸುತ್ತಿವೆ.

೧೯೬೭ರಲ್ಲಿ ಅನಾರೋಗ್ಯದ ನಿಮಿತ್ತ ಬಡವರು ಹೋಗಬಲ್ಲ ಸರ್ಕಾರಿ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುವುದಾಗಿ ಹಠ ಹಿಡಿದು ದೆಹಲಿಯ ಸರ್ಕಾರಿ ಆಸ್ಪತ್ರೆಯೊಂದಕ್ಕೆ ಸೇರಿ ಚಿಕಿತ್ಸೆ ಫಲಕಾರಿಯಾಗದೆ ಅಕ್ಟೋಬರ್ ೧೨ರಂದು ಅಸು ನೀಗಿದಾಗ ಮನೆ-ಕುಟುಂಬ, ಬ್ಯಾಂಕ್ ಖಾತೆ ಎಂಬುವುಗಳು ಯಾವೂ ಇಲ್ಲದೆ ಬದುಕಿದ ಈ ಜೋಗಿ ರಾಜಕಾರಣಿಗೆ ಕೇವಲ ೫೭ ವರ್ಷ.

ಲೋಹಿಯಾ ಹೇಳುತ್ತಿದ್ದರು: 'ಜನ ನನ್ನ ಮಾತನ್ನು ಕೇಳುತ್ತಿಲ್ಲ. ಆದರೆ ಒಂದಲ್ಲ ಒಂದು ದಿನ ಕೇಳಿಯೇ ಕೇಳಬೇಕು. ನಾನು ಸತ್ತ ಮೇಲಾದರೂ. ಬಹುಶಃ ನಾನು ಕಾಲದ ಜೊತೆ ಹೆಜ್ಜೆ ಹಾಕುವಾಗ ಒಂದೆರಡು ಹೆಜ್ಜೆ ಮುಂದೆ ಹೋಗಿಬಿಟ್ಟಿದ್ದೇನೇನೋ!'. ನಿಜವಿರಬಹುದಲ್ಲವೆ?

–ಡಿ.ಎಸ್.ನಾಗಭೂಷಣ

ಯುವ ಸಮಾಜವಾದಿ ಚಿಂತನ ವೇದಿಕೆ

ನಂಬಿಕೆಗಳ ವಿರುದ್ಧವೂ ನಂಬಿಕೆಯೇ ಇರಲಿ...

–ಎಂ.ವಿ. ಪ್ರತಿಭಾ



ಚಿತ್ರ: ರೂಪ ಹಾಸನ

'ರಂಗಭೂಮಿ' ಎಂಬುದೇ ನನ್ನ ಪಾಲಿನ ಒಂದು ಭಾಗ್ಯ.. ಇಲ್ಲಿ ನಾಟಕದ ನೆಪದಲ್ಲಿ ಬೆಸೆದುಕೊಳ್ಳುವ ಸಂಗತಿಗಳು ಅನೇಕ. ಆಸಕ್ತಿಯೇ ಇದರ ಬಂಡವಾಳ. ಆ ಬೆರಗಿನಿಂದ ಕಣ್ತೆರೆದು ಲೋಕವನ್ನು ಗಮನಿಸಿದಾಗ ಮಾತ್ರ ಪ್ರೀತಿ, ಮನುಷ್ಯತ್ವ, ಸಂವೇದನೆ, ಬದುಕು, ಹೋರಾಟ, ಚಿಂತನೆ, ಸಂಘಟನೆ ಹೀಗೆ ಹಲವಾರು ಆಯಾಮಗಳಲ್ಲಿ ನಮ್ಮನ್ನು ನಾವು ತೆರೆದುಕೊಳ್ಳುತ್ತಾ, ಹುಡುಕಾಡುತ್ತಾ, ಒಳಗೊಳ್ಳುತ್ತಾ ಬಯಲಾಗುವ ಪ್ರಕ್ರಿಯೆ. ಆ ಹಂತಗಳಲ್ಲಿ ಕಂಡುಕೊಳ್ಳುವ ಸತ್ಯಗಳ ಮುಖಾಮುಖಿಯೇ ಒಂದು ವಿಶಿಷ್ಟ ಅನುಭವ!

ಇಂತಹ ಅನುಭವಗಳು ಓದಿನಲ್ಲಿ, ಭಾಷಣಗಳಲ್ಲಿ, ಪ್ರದರ್ಶನಗಳಲ್ಲಿ ಕಂಡಿದ್ದಕ್ಕಿಂತ ಹೆಚ್ಚು ದಕ್ಕುವುದು ನಮ್ಮ ತಾಲೀಮುಗಳಲ್ಲಿ. ಈ ಹಂತದಲ್ಲಿ ನಾಟಕಕಾರ, ನಿರ್ದೇಶಕ ನಟ/ನಟಿ, ನೇಪಥ್ಯ, ಕಲಾವಿದ, ತಂತ್ರಜ್ಞರ ನಡುವೆ ಒಂದು ಮುಖಾಮುಖಿ, ಒಡನಾಟವಿರುತ್ತದೆ. ಅದು ಮಾತಿನ ರೂಪದಲ್ಲಿ ಮಾತ್ರವೇ ಇರದೇ ಬೇರೆಯೇ ವಿಶಿಷ್ಟ ನೆಲೆಗಳಲ್ಲೂ ಇರುತ್ತದೆ. ಮಾತು, ಭಾವ, ಸಂಘರ್ಷ, ಸಂವಾದ ಎಲ್ಲವೂ ಸಾಧ್ಯವಿದೆ. ಒಂದು ಪ್ರದರ್ಶನ ಯಶಸ್ವಿಯಾಗುವುದು ಎಷ್ಟು ಮುಖ್ಯವೋ ಅಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಮುಖ್ಯವಾಗುವುದು ರಿಹರ್ಸಲ್ ಪ್ರೋ ಕ್ಷಣಗಳು.

ಇಲ್ಲಿಯೇ ನಿಜವಾದ ರಂಗಭೂಮಿಯ ಉದ್ದೇಶ ಅನಾವರಣಗೊಳ್ಳುವುದು. ಇತ್ತೀಚಿನ ದಿನಗಳಲ್ಲಿ ಆಧುನಿಕ ತಂತ್ರಜ್ಞಾನದ ಬೆನ್ನತ್ತಿ ಓಡುತ್ತಿರುವ ಯುವ ಜನಾಂಗವನ್ನು ದಿನಕ್ಕೆ ಐದಾರು ತಾಸು ಮೊಬೈಲ್ ಫೋನನ್ನು ಸ್ವಿಚ್ ಆಫ್ ಮಾಡಿಸಿ ತಾಲೀಮಿಗೆ ನಿಲ್ಲಿಸುವುದೇ ಒಂದು ಸವಾಲಾಗಿದೆ. ಕೇವಲ ಇದೊಂದೇ ರಂಗವಲ್ಲ, ಶಿಕ್ಷಣ, ರಾಜಕೀಯ, ಉದ್ಯಮ ಹೀಗೇ ಎಲ್ಲ ರಂಗಗಳಲ್ಲಿಯೂ ಒಂದು ಧಾವಂತವಿದೆ. ಬೇಗನೇ ಸಾಫಲ್ಯ ಕಾಣುವ ಧಾವಂತ.

ನಾಟಕ ಕಲಿಯಲು, ನಾಟಕ ಮಾಡಲು ಕೆಲ ಹುಡುಗರು ಬರುತ್ತಾರೆ. ಬಂದವರೇ ರಂಗದಲ್ಲಿ ಮುಖ ತೋರಿಸುವ ಧಾವಂತದಲ್ಲಿರುತ್ತಾರೆ. ಆದರೆ ಈ ತಾಲೀಮು ಎಂಬುದಿದೆಯಲ್ಲ, ಅದೊಂದು ಮಹಾನ್ ಯಾತ್ರೆ. ದಾರಿ ಸವೆಸುತ್ತಾ ಹೆಜ್ಜೆ ಹೆಜ್ಜೆಗೂ ಅನುಭವಗಳ ಕಟ್ಟಿಕೊಡುತ್ತಾ ಹೋಗುತ್ತದೆ. ಒಬ್ಬ ನಿರ್ದೇಶಕಿಯಾಗಿ ನನಗೆ ನನ್ನ ಜೊತೆಯ ಯುವ ಮನಸುಗಳು ಕಟ್ಟಿ ಕೊಟ್ಟ ಪಾಠಗಳಿಂದ ನಾನು ಗಟ್ಟಿಯಾಗಿದ್ದೇನೆ. ಹೌದು, ಅವರಿಗೆ ಧಾವಂತವಿದೆ. ಏಳುಬೀಳುಗಳಿವೆ. ಸ್ವಚ್ಛಂದವಿದೆ. ಪೊಳ್ಳು ಪ್ರೀತಿಗಳಿವೆ. ಮುಖವೇ ಇಲ್ಲದ ಫೇಸ್‌ಬುಕ್, ವಾಟ್ಸಪ್‌ಗಳ ಆಕರ್ಷಕ ಕಲ್ಪನಾ ಲೋಕದಲ್ಲಿ ವಿಹರಿಸುವ ಅವರಿಗೆ ವಾಸ್ತವದಲ್ಲಿ ಎದುರು ಬದುರಾಗಿ ಕಾಣುವ ಮುಖಗಳೆಲ್ಲ ಅಸಹನೀಯವೇ.... ಆದರೂ ಅವರೊಳಗೊಂದು ಸುಂದರ ಮನಸ್ಸಿದೆ. ಮಿಡಿವ ಹೃದಯವಿದೆ. ಆ ಮಿಡಿವ ಹೃದಯವನ್ನು ಸಮಾಜದತ್ತ ದುಡಿಯುವಂತೆ ಮಾಡುವ ಕೈಗಳು ನಾವಾಗಬೇಕಷ್ಟೇ. ಇಂತಹ ನನ್ನ ಅನುಭವಕ್ಕೆ ಇತ್ತೀಚಿನ ಉದಾಹರಣೆ ಇಲ್ಲಿದೆ:

ಇತ್ತೀಚೆಗೆ ನನ್ನೊಂದಿಗೆ ನಾಟಕ ಕಲಿಯಲು ಬಂದ ಡಿಗ್ರಿ ಓದುವ ಹೊಸ ಹುಡುಗನೊಬ್ಬನ ಫೇಸ್‌ಬುಕ್ ವಾಲ್ ಗಮನಿಸಿ ಹೌಹಾರಿದೆ. ಅಮೀರ್‌ಖಾನ್.... ಅಸಹಿಷ್ಣುತೆ ಇತ್ಯಾದಿ ಬಗ್ಗೆ ವಿಪರೀತವಾದ ಕಾಮೆಂಟ್ ಹಾಕಿದ್ದ. ಅರಳಿದ ಕಮಲಗಳ ಶಾಲನ್ನು ಹೊದ್ದು ಅದನ್ನೇ ಪ್ರೊಫೈಲ್ ಪಿಕ್ಚರ್ ಮಾಡಿಕೊಂಡಿದ್ದ... ನನಗೆ ಅವನ ಈ ಮುಖ ಪರಿಚಯವಾದಾಗ ಒಂದು ಅರ್ಧ ಗಂಟೆ ಸುಮ್ಮನೇ ಕುಳಿತೆ. ಸಂಜೆ ತಾಲೀಮಿಗೆ ಬಂದಾಗ ಅವನ ಮುಖ ನೋಡಿದರೆ ಎಲ್ಲಿ ಡಿಸ್ಟರ್ಬ್ ಆಗಿಬಿಡುತ್ತೇನೋ ಅನಿಸಿತ್ತು. ಸಂಜೆ ಎಲ್ಲರಿಗಿಂತ ಮುಂಚೆ ಬಂದ ಅವನೇ ನನ್ನ ಮನೆಯ ಮೇಲಿನ 'ಭೂಮಿ ರಂಗಮನೆ' ರಿಹರ್ಸಲ್ ಹಾಲ್‌ನ ಬೀಗ ತೆಗೆದ. ಕೆಳಗೆ ಬಂದು ಕುಡಿಯುವ ನೀರನ್ನು ತುಂಬಿಕೊಂಡು ಇಟ್ಟ. ಚಪ್ಪಲಿಗಳನ್ನು ನೀಟಾಗಿ ಜೋಡಿಸಿಟ್ಟ. ನಾನು ಗಮನಿಸುತ್ತಲೇ ಇದ್ದೆ. ಬರಬೇಕಾಗಿದ್ದ ಸಹ ನಟರಿಗೆ ಬೇಗ ಬನ್ನಿ... ಲೇಟಾಗುತ್ತದೆ ಅಂತ ಫೋನಾಯಿಸಿದ... ಆಮೇಲೆ ಸುಮ್ಮನೆ ಫೋನನ್ನು ಆಫ್ ಮಾಡಿಟ್ಟು ನಾಟಕದ ಸ್ಕ್ರಿಪ್ಟ್ ತೆಗೆದು ಓದಲು ಕುಳಿತ. ಮುಗ್ಧಮುಖ... ವಿಧೇಯತೆ....


ನಾಟಕ ಗಾಂಧಿಯ ಕುರಿತದ್ದು... ಗೋಡ್ಸೆ ಕೂಡ ಅದರ ಒಂದು ಪಾತ್ರ. ಇನ್ನೂ ಬ್ಲಾಕಿಂಗ್ ಆಗಿರಲಿಲ್ಲ. ಮೂರು ದೃಶ್ಯಗಳಲ್ಲಿ ಬರುವ ಗಾಂಧಿ ಪಾತ್ರವನ್ನು ಮೂವರು ಹುಡುಗರಿಗೆ ಹಂಚಬೇಕೆಂದಿದ್ದೆ. ಇವನು ಆ ಮೂವರ ಪೈಕಿಯಲ್ಲಿರಲಿಲ್ಲ. ತಾಲೀಮು ಮಾಡಿಸುತ್ತಾ, ಮಾಡಿಸುತ್ತಾ... ಕೊಟ್ಟ ಪಾತ್ರದಲ್ಲಿ ಲೀನವಾಗುತ್ತಿದ್ದ ಅವನಿಗೆ ಎಲ್ಲರೆದುರು ದಿಢೀರನೇ 'ಪುಟ್ಟಾ ನೆಕ್ಸ್ಟ್ ಸೀನಿನಲ್ಲಿ ಬರುವ ಗಾಂಧಿ ಪಾತ್ರ ನಿನ್ನದು ' ಎಂದು ಹೇಳಿದೆ. ಕಣ್ಣರಳಿಸಿ ನನ್ನತ್ತ ನೋಡುತ್ತಾ ನಿಂತ... ಹಾಗೇ ನಿಂತ ಅವನ ಕಂಗಳಲ್ಲಿ ಬ್ರಹ್ಮಾಂಡದ ಮಿಂಚು ಇತ್ತು... ಓ ಭಾರತ ಪ್ರಕಾಶಿಸುತ್ತಿದೆ ಎಂದೆನಿಸಿತು ನನಗೆ ಆ ಕ್ಷಣ....

ಮುಂದಿನ ರಂಗ ಪಯಣ ಸಾಗಿದ ದಿಕ್ಕೇ... ಅಭೂತಪೂರ್ವ.. ಅವನು ತನ್ನ ಮಾತಿನಲ್ಲಿ, ಭಾವಾಭಿವ್ಯಕ್ತಿಯಲ್ಲಿ... ಬಾಪೂವೇ ಆದ.. ಸ್ಟೈಲ್ ಆಗಿ ಕೂದಲು ನೇವರಿಸುತ್ತಿದ್ದ, ಹುಡುಗ ನಾಟಕ ಹತ್ತಿರ ಬಂದಂತೆ ಇಂಟರ್‌ನೆಟ್‌ನಲ್ಲಿದ್ದ ಗಾಂಧಿಯ ಭಾವ ಭಂಗಿಗಳನ್ನೆಲ್ಲ ನೋಡಿ ಅನುಕರಿಸತೊಡಗಿದ. ತಲೆ ಕೂದಲನ್ನು ತೆಗೆಸಿದ.... ರಂಗದಲ್ಲೂ ಅಂತರಂಗದಲ್ಲೂ ಅವನೊಳಗೊಬ್ಬ ಬಾಪುವನ್ನು ಕಾಣತೊಡಗಿದೆ ನಾನು. ಕಸ್ತೂರ ಬಾ ಪಾತ್ರ ಮಾಡಿದ ಹುಡುಗಿ ಅಕ್ಷರಶಃ ಮಲಗಿದ ಅವನನ್ನು ನೋಡಿ ಕಣ್ಣೀರು ಹಾಕಿದ್ದಳು....

ನಾಟಕದ ಪ್ರದರ್ಶನಕ್ಕಿಂತ ಎರಡು ದಿನಗಳ ಮುಂಚೆ ನಾನು ಮಾತನಾಡುತ್ತಾ, 'ಪುಟ್ಟಾ, ನಿನ್ನಲ್ಲಿ ನಂಬಿಕೆ ಇಟ್ಟು ನಿನಗೆ ಗಾಂಧಿ ಪಾತ್ರ ಕೊಟ್ಟಿದ್ದೇನೆ. ದೊಡ್ಡ ಜವಾಬ್ದಾರಿ ನಿರ್ವಹಿಸಬೇಕು ನೀನು' ಎಂದು ಹೇಳುತ್ತಾ, 'ನಿನ್ನ ಫೇಸ್‌ಬುಕ್ ವಾಲ್ ನೋಡಿದ್ದೇನೆ' ಎಂದೆ. ತಲೆ ತಗ್ಗಿಸಿ ಬಿಕ್ಕಿದ. ಹತ್ತಿರ ಕರೆದು ಮಡಿಲಲ್ಲಿ ಮಲಗಿಸಿಕೊಂಡು ತಲೆ ನೇವರಿಸಿದೆ. ಅದೆಷ್ಟೋ ಹೊತ್ತು ಅವನಿಂದ ನನಗೆ ನನ್ನಿಂದ ಅವನಿಗೆ ಒಂದು ಶಕ್ತಿ ಸಂಚಾರವಾದಂತೆನಿಸಿತು. ಈ ಕ್ಷಣಕ್ಕೂ ಬೇರೆ ಏನನ್ನೂ ನಾನು ಅವನಲ್ಲಿ ಚರ್ಚಿಸಿಲ್ಲ. ಚರ್ಚೆಯಿಲ್ಲದೆ... ವಾಗ್ವಾದಗಳಿಲ್ಲದೇ... ಸಹಜವಾಗಿ ಗೆಲ್ಲುವುದೇ ತಾಯ್ತನ. ಪ್ರಾಯಶಃ ಇವತ್ತು ಎಲ್ಲರಿಗೂ ಬೇಕಾಗಿರುವುದು ಈ ಧಾವಂತಗಳ ನಡುವೆಯೂ ಒಂದು ತಾಯ್ತನದ ಸೂಕ್ಷ್ಮ ಸಂವೇದನೆ.

ನಾವು ಕೇವಲ ಫಲಿತಾಂಶದ ಬೆನ್ನು ಹತ್ತಿ, ಉತ್ಕೃಷ್ಟತೆಯ ಬೆನ್ನು ಹತ್ತಿ ಸಣ್ಣ ಸಣ್ಣ ಸಂಗತಿಗಳನ್ನು ಮರೆಯುತ್ತಿದ್ದೇವೆ. ಐದು ತಾಸು ತಾಲೀಮಿಗೆ ಬರುವ ಹುಡುಗನಿಗೆ ಆಸಕ್ತಿ ಎಷ್ಟು ಮುಖ್ಯವೋ ಅವನ ಮನಃಸ್ಥಿತಿ, ಅವನು ಹಸಿದುಕೊಂಡಿದ್ದಾನಾ ಎಂಬುದನ್ನು ಗಮನಿಸುವುದು ಕೂಡ ಮುಖ್ಯವಾಗಬೇಕು. ತಂಡದಲ್ಲಿರುವ ಹುಡುಗರ ಹೊಟ್ಟೆಯ ಹಸಿವಿನಂತಹ ವಿಷಯಗಳನ್ನು ನಿರ್ಲಕ್ಷಿಸುವುದು... ಅದು ದುರಂತವೇ... ಅವರ ಮನಸ್ಸಿಗೆ ಹತ್ತಿರವಾಗುವ ಸಂಗತಿಗಳಿಗೆ ನಾವು ಹತ್ತಿರಾಗುತ್ತಲೇ... ಬೇಡವಾದ ಸಂಗತಿಗಳನ್ನು ದೂರವಿಡುವ ಪ್ರಯತ್ನವನ್ನು ಸಹಜವಾಗಿ ಮಾಡಬೇಕು. ಎಲ್ಲ ಮನಸ್ಸುಗಳ ಭಾವಸಂಚಾರ ಒಂದೇ ತರಂಗದ ಮೇಲಿದೆ. ಅದನ್ನು ನಮ್ಮ ವ್ಯಾಪ್ತಿಗೆ ತೆರೆದುಕೊಳ್ಳಬೇಕಾದದ್ದು ಅವರವರ ಕ್ಷೇತ್ರದಲ್ಲಿ ಕೆಲಸ ಮಾಡುವವರದ್ದು. ಎಲ್ಲೆಡೆ ಆಶಾಭಾವನೆಯಂತೂ ಇದ್ದೇ ಇದೆ, ನಂಬಿಕೆಗಳ ವಿರುದ್ಧವೂ ನಂಬಿಕೆಯೇ ಇರಲಿ...

ನಡೆಯಲಿ ನೂರಾರು ಸಂಘರ್ಷಗಳು
ಅರಳಲಿ ಪ್ರೀತಿಯ ಹೂಗಳು....




(ಸಾಗರದ ಎಂ.ವಿ.ಪ್ರತಿಭಾ 'ಸ್ಪಂದನ' ರಂಗ ತಂಡ ಕಟ್ಟಿಕೊಂಡು ತನ್ನೂರಿನ ಸುತ್ತಮುತ್ತ ತಮ್ಮ ಹಲವು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಯುವಜನತೆಯ ಮಧ್ಯೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ.)

ಇಬ್ಬರು ಸಮಾಜವಾದಿ ನಾಯಕಿಯರು

ಭಾರತದ ಸಮಾಜವಾದಿ ಚಳುವಳಿಯನ್ನು ಕಟ್ಟಿದವರಲ್ಲಿ ಪುರುಷರೊಂದಿಗೆ ಹೆಗಲೆಣೆಯಾಗಿ ಹಲವು ಮಹಿಳೆಯರೂ ದುಡಿದಿದ್ದರು. ಸಮಾಜವಾದಿ ಪಕ್ಷದ ಸ್ಥಾಪಕ ಸದಸ್ಯರಲ್ಲೊಬ್ಬರಾದ ಕಮಲಾದೇವಿ ಚಟ್ಟೋಪಾಧ್ಯಾಯ ಇವರಲ್ಲಿ ಹಿರಿಯರಾದರೆ ಇವರ ಹಾದಿಯಲ್ಲಿ ಮುನ್ನಡೆದ ಮಹಿಳಾ ಸಮೂಹದಲ್ಲಿ ಎದ್ದು ಕಾಣುವ ಮೂರು ಮುಖ್ಯ ಹೆಸರುಗಳೆಂದರೆ, ಅರುಣಾ ಅಸಿಫ್ ಅಲಿ, ಮೃಣಾಲಿನಿ ಗೋರೆ ಮತ್ತು ಪ್ರಮೀಳಾ ದಂಡವತೆ. ಇವರಲ್ಲಿ ಮೊದಲಿನವರು ಬಹುಬೇಗ ಸಮಾಜವಾದಿ ಪಕ್ಷವನ್ನು ತೊರೆದು ಕಮ್ಯೂನಿಸ್ಟ್ ಪಕ್ಷ ಸೇರಿದವರಾದರೆ, ಉಳಿದಿಬ್ಬರು ತಮ್ಮ ಬದುಕಿನ ಅಂತ್ಯದವರೆಗೂ ಸಮಾಜವಾದಿ ಆಶಯಗಳಿಗಾಗಿ ತುಡಿದವರು; ದುಡಿದವರು. ಅವರನ್ನಿಲ್ಲಿ ಪರಿಚಯಿಸಲಾಗುತ್ತಿದೆ–ಸಂ.

'ಪಾನೀವಾಲೀ ಬಾಯಿ' ಮೃಣಾಲ್ ಗೋರೆ




ಪಾನೀವಾಲೀ ಬಾಯಿ ಎಂದೇ ಮುಂಬೈನ ಸಾಮಾನ್ಯ ಜನರಿಂದ ಪ್ರೀತಿ ಗೌರವಗಳಿಂದ ಕರೆಸಿಕೊಳ್ಳುತ್ತಿದ್ದ ಸಮಾಜವಾದಿ ನಾಯಕಿ ಮೃಣಾಲ್ ಗೋರೆ, ಮೂಲತಃ ಗಾಂಧಿ ಪ್ರಭಾವವಿದ್ದ ಕುಟುಂಬದಿಂದ ಬಂದವರು. ಆ ಪ್ರಭಾವದಿಂದಲೇ ೧೯೪೭ರಲ್ಲಿ ತಾವು ಅಧ್ಯಯನ ಮಾಡುತ್ತಿದ್ದ ವೈದ್ಯಕೀಯ ವೃತ್ತಿ ಶಿಕ್ಷಣವನ್ನು ತೊರೆದು ಸಮಾಜ ಸೇವೆಗೆ ತಮ್ಮನ್ನು ತೊಡಗಿಸಿಕೊಂಡವರು! ಸ್ತ್ರೀಯರಿಗೆ ಗೌರವ, ಸಮಾನತೆ, ಸ್ವಾತಂತ್ರ್ಯ ನೀಡುತ್ತಿದ್ದ ಕುಟುಂಬದಲ್ಲಿ ೧೯೨೮ರಲ್ಲಿ ಜನಿಸಿದ ಇವರ ವ್ಯಕ್ತಿತ್ವ ರೂಪಗೊಳ್ಳುತ್ತಿದ್ದ ಸಮಯದಲ್ಲಿ ಅಹಲ್ಯ ರಂಗನೇಕರ್, ಸುಶೀಲಾ ಗೋಪಾಲನ್‌ರಂತಹ ಎಡಪಂಥೀಯ ಮಹಿಳಾ ಚಳುವಳಿಕಾರರ ಪ್ರಭಾವ ಇವರ ಮೇಲಾಯಿತು.

೧೯೪೮ರಲ್ಲಿ ಸಮಾಜವಾದಿ ಧುರೀಣರಾಗಿದ್ದ ಕೇಶವ ಗೋರೆಯವರನ್ನು ವಿವಾಹವಾಗಿ ಮುಂಬೈನ ಗೋರೆಗಾಂವ್‌ನಲ್ಲಿ ಸಂಸಾರ ಹೂಡಿದರು ಮತ್ತು ಸಮಾಜವಾದಿ ಪಕ್ಷದ ಸಕ್ರಿಯ ಸದಸ್ಯರಾದರು. ಗೋರೆಗಾಂವ್ ಹಳ್ಳಿಗಾಡಿನಂತಿದ್ದು ಮೂಲಭೂತ ನಾಗರೀಕ ಸೌಲಭ್ಯಗಳಿಂದ ವಂಚಿತವಾಗಿತ್ತು. ಮೃಣಾಲ್ ಗೋರೆಯವರು ಅಲ್ಲಿ ಶೌಚಾಲಯ, ಚರಂಡಿ, ಶುದ್ಧ ಕುಡಿಯುವ ನೀರು, ಸಮುದಾಯ ಭವನ, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಕೇಂದ್ರ, ಶಾಲೆಗಳು, ಹೆಣ್ಣು ಮಕ್ಕಳ ಶಿಕ್ಷಣ ಮುಂತಾದ ಮೂಲಭೂತ ವ್ಯವಸ್ಥೆಗಳಿಗಾಗಿ ಸತತ ಹೋರಾಟ ನಡೆಸಿ ಸಫಲರಾದರು. ಪಾದಯಾತ್ರೆ, ಸಭೆ, ಮೆರವಣಿಗೆಗಳನ್ನು ನಡೆಸಿ ಸಾರ್ವಜನಿಕರ, ರಾಜಕಾರಣಿಗಳ, ಅಧಿಕಾರಿಗಳ ಗಮನ ಸೆಳೆದರು. ಮಹಿಳೆಯರನ್ನು ಒಂದುಗೂಡಿಸಿ ತಟ್ಟೆ–ಲಟ್ಟಣಿಗೆಗಳನ್ನು ಬಡಿಯುತ್ತಾ ಹೋಗುವ ಇವರ ಹೋರಾಟಕ್ಕೆ ವಿಶಿಷ್ಟ ಕಳೆ–ಛಾಪು ಬಂದಿತ್ತು. ೧೯೫೦ರಲ್ಲಿ ಗೋರೆಗಾಂವ್ ಮಹಿಳಾ ಮಂಡಲ ಸೇರಿದ ಇವರು ಕೇಂದ್ರ ಸರ್ಕಾರ ಕುಟುಂಬ ಯೋಜನಾ ಕಾರ್ಯಕ್ರಮ ಪ್ರಾರಂಭಿಸುವ ಮೊದಲೇ ಕುಟುಂಬ ಯೋಜನೆ ಕುರಿತು ಜಾಗೃತಿ ಮೂಡಿಸಿದ್ದರು. ೧೯೫೩ರಲ್ಲಿ ಗೋರೆಗಾಂವ್ ಪಂಚಾಯ್ತಿ ಸದಸ್ಯರಾಗಿ ಚುನಾಯಿತರಾದರು. ೧೯೫೦ರಲ್ಲಿ ಸಂಯುಕ್ತ ಮಹಾರಾಷ್ಟ್ರ ಚಳುವಳಿ, ಗೋವಾ ವಿಮೋಚನಾ ಹೋರಾಟ, ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಿದವು. ಜೈಲೂ ಸೇರಬೇಕಾಯಿತು. ೧೯೬೧ರಲ್ಲಿ ಸಮಾಜವಾದಿ ಪಕ್ಷದಿಂದ ಮುಂಬೈ ಮುನ್ಸಿಪಲ್ ಕೌನ್ಸಿಲರ್ ಆಗಿ ಆಯ್ಕೆಯಾದ ಅವರು, ನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾದಾಗ ಮನೆ ಮನೆಗೆ ನೀರು ಒದಗಿಸುವ ಯೋಜನೆಯೊಂದಕ್ಕಾಗಿ ಹೋರಾಡಿ ಜಯಗಳಿಸಿ 'ಪಾನಿವಾಲಿ ಬಾಯಿ' ಎಂದೇ ಜನರ ನಡುವೆ ಪ್ರಸಿದ್ಧರಾದರು. ಇದರ ಫಲವೋ ಎಂಬಂತೆ ಅವರು ೧೯೭೨ರಲ್ಲಿ ಭಾರಿ ಬಹುಮತದೊಂದಿಗೆ ಮಹಾರಾಷ್ಟ್ರ ವಿಧಾನಸಭೆಗೆ ಆಯ್ಕೆಯಾದರು. ಸಿಕ್ಕಂತಹ ಅಧಿಕಾರವನ್ನು ರೈತರ, ದಲಿತರ, ಮಹಿಳೆಯರ, ಗುಡ್ಡಗಾಡು, ಅಲೆಮಾರಿ ಜನರ ಹಕ್ಕುಗಳ ಹೋರಾಟಗಳಿಗಾಗಿ ಬಳಸಿ ರಾಜ್ಯದ ಜನಪ್ರಿಯ ಸಮಾಜವಾದಿ ನಾಯಕಿ ಎನಿಸಿದರು.

೧೯೭೫ರಲ್ಲಿ ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿದಾಗ ಭೂಗತರಾದ ಮೃಣಾಲ್ ತಾಯಿ, ಭೂಗತರಾಗಿ ನಡೆಸಿದ ಹೋರಾಟದ ಪರಿಣಾಮವಾಗಿ, ನಂತರ ನಡೆದ ಚುನಾವಣೆಯಲ್ಲಿ ಲೋಕಸಭೆಗೆ ಆಯ್ಕೆಯಾದರು. ಆಗ ಜನರ ಬಾಯಲ್ಲಿ "ದಿಲ್ಲೀವಾಲೀ ಪಾನೀ ಮೇ, ಪಾನೀವಾಲೀ ದಿಲ್ಲೀ ಮೇ" ಎಂಬ ಮಾತು ಹರಿದಾಡುತ್ತಿತ್ತು.

೧೯೯೦ರಲ್ಲಿ, ಮುಕ್ತ ಮಾರುಕಟ್ಟೆ ನೀತಿ ಜಾರಿಯಾದಾಗ, ಬಂಡವಾಳಶಾಹಿಗಳಿಂದ ಬಡವರು, ಅಂಚಿಗೆ ತಳ್ಳಲ್ಪಟ್ಟವರಿಗೆ ಆಗುವ ಅನಾನುಕೂಲ, ತೊಂದರೆಗಳ ಬಗ್ಗೆ ಕಳವಳಗೊಂಡ ಅವರು ಆ ನೀತಿಯ ವಿರುದ್ಧ ಹೋರಾಟಕ್ಕಿಳಿದರು. ಹದಗೆಡುತ್ತಿದ್ದ ಆರೋಗ್ಯದ ನಡುವೆಯೂ 'ಎನ್ರಾನ್ ಕಂಪೆನಿ'ಯ ಹುನ್ನಾರದ ವಿರುದ್ಧ, ನರ್ಮದಾ ಅಣೆಕಟ್ಟು ನಿರಾಶ್ರಿತರ ಪರವಾಗಿ, ಹೋರಾಟ, ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಶಾಸನ ಸಭೆಗಳಲ್ಲಿನ ಮಹಿಳಾ ಮೀಸಲಾತಿ ಮಸೂದೆಗಾಗಿ ಚಳುವಳಿ ನಡೆಸಿದರು. 'ಬೃಹನ್ಮುಂಬಯಿ ನಿರ್ಮಾಣ ಅಭಿಯಾನ' ಎಂಬ ಕಾರ್ಯಕ್ರಮದಡಿಯಲ್ಲಿ ಕಡಿಮೆ ಬೆಲೆಯಲ್ಲಿ ಬಡ, ಮಧ್ಯಮ ವರ್ಗದವರಿಗೆ ಕಡಿಮೆ ವೆಚ್ಚದಲ್ಲಿ ವಸತಿ ಕಲ್ಪಿಸುವ ಕಾರ್ಯ ಕೈಗೊಂಡು ಬಿಲ್ಡರ್‌ಗಳ ಕೆಂಗಣ್ಣಿಗೆ ಗುರಿಯಾದರು. ಇಡೀ ಜೀವನವನ್ನು ಜನಪರ ಹೋರಾಟಗಳಿಗೇ ಮೀಸಲಿಟ್ಟ, ಲೋಹಿಯಾ ಅನುಯಾಯಿಯಾಗಿದ್ದ ಮೃಣಾಲ್ ತಾಯಿ, ೨೦೧೨ರ ಜುಲೈ ೧೭ರಂದು ನಮ್ಮನ್ನಗಲಿದರು.

'ಫೈರ್ ಬ್ರಾಂಡ್' ನಾಯಕಿ ಪ್ರಮೀಳಾ ದಂಡವತೆ



೧೯೨೮ರಲ್ಲಿ ಮುಂಬೈನ ಜನಪ್ರಿಯ ವೈದ್ಯರಲ್ಲೊಬ್ಬರಾಗಿದ್ದ ಡಾ. ಜನಾರ್ದನ ಕರಂಡೆಯವರ ಮಗಳಾಗಿ ಜನಿಸಿದ ಪ್ರಮೀಳಾ ಕರಂಡೆ ಹೆಸರಾಂತ ಸಮಾಜವಾದಿ ನಾಯಕ ಪ್ರೊ. ಮಧು ದಂಡವತೆಯವರನ್ನು ವಿವಾಹವಾದ ನಂತರ ಪ್ರಮೀಳಾ ದಂಡವತೆ ಎಂದೇ ಪ್ರಸಿದ್ಧರಾದರು. ಮುಂಬೈನ ಜೆಜೆ. ಕಲಾಶಾಲೆಯ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಮಹಿಳಾ ಹೋರಾಟಗಳಲ್ಲಿ ತೊಡಗಿಕೊಂಡಿದ್ದ ಅವರು ಸಮಾಜವಾದಿಯಾದ ಪತಿಯ ಸಾಹಚರ್ಯದಲ್ಲಿ ದೊಡ್ಡ ಮಟ್ಟದ ಹೋರಾಟಗಾರ್ತಿಯಾಗಿ ದೊಡ್ಡ ಸಮಾಜವಾದಿ ನಾಯಕಿಯಾಗಿಯೂ ಬೆಳೆದರು. ನಾಗರಿಕ ಹಕ್ಕುಗಳ ಜನತಾ ಒಕ್ಕೂಟವೆನಿಸಿರುವ ಪಿಯುಸಿಲ್ ಮತ್ತು ಮಹಿಳಾ ಹಕ್ಕುಗಳ ಅಖಿಲ ಭಾರತ ಹೋರಾಟ ವೇದಿಕೆಯೆನಿಸಿದ 'ಮಹಿಳಾ ದಕ್ಷಾ ಸಮಿತಿ'ಯ ಸ್ಥಾಪಕ ಸದಸ್ಯರಾದ ಪ್ರಮೀಳಾ 'ಫೈರ್ ಬ್ರಾಂಡ್' ಹೋರಾಟಗಾರ್ತಿ ಎಂದೇ ಹೆಸರುವಾಸಿ. ಸತಿ, ವರದಕ್ಷಿಣೆ ಮುಂತಾದ ಸ್ತ್ರೀ ಪೀಡಕ ಪದ್ಧತಿಗಳನ್ನು ವಿರೋಧಿಸಿ ಹಲವು ಚಳುವಳಿಗಳನ್ನು ಸಂಘಟಿಸಿದ ಅವರು ಲಟ್ಟಣಿಗೆ–ತಟ್ಟೆಗಳನ್ನೇ ಬಡಿಯುತ್ತಾ, ವರದಕ್ಷಿಣೆಗಾಗಿ ದೌರ್ಜನ್ಯ ನಡೆಸಿದ ಕುಟುಂಬದ ಎದುರು ನೂರಾರು ಮಹಿಳೆಯರನ್ನು ಸೇರಿಸಿ ನಡೆಸಿದ ಹೋರಾಟದ ಮಾದರಿ ರಾಷ್ಟ್ರದ ಗಮನ ಸೆಳೆದಿತ್ತು.

೧೯೬೮ರಿಂದ ೧೯೭೩ರವರೆಗೆ ಮುಂಬೈ ನಗರ ಸಭೆಯ ಸದಸ್ಯರಾಗಿ, ನಂತರ ೧೯೮೦ರಿಂದ ೮೪ರವರೆಗೆ ಲೋಕಸಭಾ ಸದಸ್ಯರಾಗಿದ್ದ ಪ್ರಮಿಳಾ ದಂಡವತೆ ಜನಪ್ರತಿನಿಧಿಯಾಗಿ ಈ ಎರಡೂ ಅಧಿಕಾರ ಸ್ಥಾನಗಳನ್ನು ಬಳಸಿದ್ದು ಜನರ, ವಿಶೇಷವಾಗಿ ಮಹಿಳೆಯರ ನಾಗರೀಕ ಹಕ್ಕುಗಳ ರಕ್ಷಣೆ ಮತ್ತು ಬಲವರ್ಧನೆಗಾಗಿಯೇ. ಇಂತಹ ಹೋರಾಟದ ಬದುಕಿನ ನಡುವೆಯೇ ಅವರು ೨೦೦೧ರ ಕೊನೆಯ ದಿನ ಹೃದಯಾಘಾತದಿಂದ ಕೊನೆಯುಸಿರೆಳೆದರು.

(ಸಂಗ್ರಹಾನುವಾದ: ಮಂಜುಳಾ ಎಂ. ರಾಜು)

ನನ್ನ ನೆಚ್ಚಿನ ಪುರುಷ ಯಾರು? ಏಕೆ?

ಹೆಣ್ಣು ಮತ್ತು ಗಂಡು ಒಂದಾಗಲೆಂದೇ ಬೇರಾದ ಎರಡು ಪ್ರಾಕೃತಿಕ ವಿಂಗಡಣೆಗಳೆಂದು ಜೀವ (ವಿಕಾಸ) ಶಾಸ್ತ್ರಜ್ಞರು ಹೇಳುತ್ತಾರೆ.. ಇವೆರಡರ ನಡುವಣ ಆಕರ್ಷಣೆ ಹಲವು ನೆಲೆಗಳದ್ದು. ಈ ಆಕರ್ಷಣೆಗಳ ವೈವಿಧ್ಯಗಳ ಸಂಕಥನವೇ ಈ ಜೀವಜಗತ್ತಿನ ಇತಿಹಾಸ ಕಥನವೂ ಹೌದು. ನಾಗರೀಕ ಮಾನವ ಈ ಆಕರ್ಷಣೆಗಳ ಕಥನವನ್ನು ಸಂಬಂಧಗಳ ಕಥನಗಳನ್ನಾಗಿಯೂ ಕಟ್ಟುತ್ತಾ ಬಂದಿದ್ದಾನೆ. ಈ ಕಥನಗಳಲ್ಲಿ ಕೆಲವು ಅಸಮಾನತೆ, ಶೋಷಣೆ ಇತ್ಯಾದಿ ಪರಿಕಲ್ಪನೆಗಳನ್ನಾಧರಿಸಿದ ವಿಷಮತೆಗಳೂ ಸೇರಿಕೊಂಡು ಕಥನ ಸಂಕೀರ್ಣವಾಗಿದೆ. ಹೀಗೆ ಮಹಿಳೆ ಮತ್ತು ಪುರುಷ ಪರಸ್ಪರ ಕುತೂಹಲದ ಸಂಬಂಧಗಳನ್ನೇ ಉಳಿಸಿಕೊಂಡು, ಬೆಳೆಸಿಕೊಂಡು ಬಂದಿದ್ದರೂ, ಪರಸ್ಪರಾವಲಂಬನೆ ಬದುಕಿನ ಅವಿಭಾಜ್ಯ ಅಂಗವಾಗಿರುವುದರಿಂದ ಪರಸ್ಪರರಲ್ಲಿ ಹಲವು ನಿರೀಕ್ಷೆಗಳು ಈ ಸಂಕೀರ್ಣ ಕಥನದಲ್ಲಿ ಗೂಡು ಕಟ್ಟುತ್ತಾ ಬಂದಿವೆ.

ನಮ್ಮ ಈ ಮಹಿಳಾ ಸಂಚಿಕೆಯಲ್ಲಿ ಈ ಕುತೂಹಲದ, ನಿರೀಕ್ಷೆಗಳ ಸಂಕೀರ್ಣ ಕಥನವನ್ನು ಹೆಣ್ಣಿನ ಕಡೆಯಿಂದ ಇಣುಕಿ ನೋಡುವ ಒಂದು ಪುಟ್ಟ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ನಮ್ಮ ನಡುವಿನ ಕೆಲ ಆಯ್ದ ಪ್ರಜ್ಞಾವಂತ ಮಹಿಳೆಯರನ್ನು 'ನಿಮ್ಮ ನೆಚ್ಚಿನ ಪುರುಷ ಯಾರು? ಏಕೆ?' (ಆತ ಪುರಾಣ-ಇತಿಹಾಸಗಳಿಂದ ಹಿಡಿದು ವೈಯಕ್ತಿಕ ವರ್ತಮಾನದವರೆಗೆ ಎಲ್ಲಿಯಾದರೂ ಇರಬಹುದಾದ ವಿಶಾಲ ಆಯ್ಕೆಯ ಅವಕಾಶ ನೀಡಿ!) ಎಂಬ ಪ್ರಶ್ನೆ ಕೇಳಿ, ಆಕೆ ಗಂಡು ಜಗತ್ತಿನಿಂದ ಮುಖ್ಯವಾಗಿ ನಿರೀಕ್ಷಿಸುವ ಗುಣಗಳನ್ನು ಗುರುತಿಸುವ ಪ್ರಯತ್ನವಿದು. ಅದು ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದನ್ನು ಓದುಗರೇ ಹೇಳಬೇಕು. ಏಕೆಂದರೆ ಇಲ್ಲಿನ ಬಹುಪಾಲು ಆಯ್ಕೆಗಳು ಕೆಲವರಿಗೆ ವಿಚಿತ್ರವಾಗಿ ಕಂಡು, ಅಭ್ಯಾಸಕ್ಕೂ ಯೋಗ್ಯವೆನಿಸಬಹುದು! ಈ ಮಧ್ಯೆ ಇಲ್ಲಿ ದಾಖಲಿಸಬೇಕಾದ ಒಂದು ಸಂಗತಿ ಎಂದರೆ, ನಮ್ಮ ನಡುವಿನ ಇಬ್ಬರು ಹೆಸರಾಂತ ಸ್ತ್ರೀವಾದಿಗಳು ಈ ಪ್ರಶ್ನೆಗಳಿಗೆ ಉತ್ತರಿಸಲು ತಮಗೆ ಬಿಡುವಿಲ್ಲ ಎಂದರೆಂಬುದು!! -ಸಂ.

ಸಹೃದಯಿ ಅಪ್ಪ..... ನಿಜಕ್ಕೂ ನನ್ನ ಹೀರೋ!



ಮಹಿಳಾ ದಿನಾಚರಣೆ ವಿಶೇಷಾಂಕಕ್ಕೆ "ನಿಮ್ಮ ಮೆಚ್ಚಿನ ಪುರುಷ; ಯಾರು? ಏಕೆ?"ಎಂಬ ವಿಷಯದ ಬಗ್ಗೆ ಬರಹವೊಂದನ್ನು ಬರೆದುಕೊಡಬೇಕು ಎಂದು ಸಂಪಾದಕರು ಹೇಳಿದಾಗ, ಇದಕ್ಕೆ ಬದಲು "ನಿಮ್ಮ ಮೆಚ್ಚಿನ ಮಹಿಳೆ: ಯಾರು? ಏಕೆ?" ಎಂದು ಪುರುಷರನ್ನು ಕೇಳಿದ್ದರೆ ಅದು ಮಹಿಳೆಯರಿಗೆ ನೀಡುವ ನಿಜವಾದ ಕೊಡುಗೆಯಾಗುತ್ತಿತ್ತು ಎಂದೆನ್ನಿಸಿದರೂ ಸಂಪಾದಕರೊಂದಿಗೆ ಚರ್ಚಿಸಿ ಒಪ್ಪಿಸುವ ನಂಬಿಕೆ ಬರಲಿಲ್ಲ! ಮಹಿಳೆಯ ಪ್ರತಿಭೆ, ಸಾಮರ್ಥ್ಯ ಕುರಿತು ಮೆಚ್ಚಿಗೆಯ ಮಾತುಗಳನ್ನಾಡಲು ಹೃತ್ಪೂರ್ವಕತೆ ಇಲ್ಲದ ನಮ್ಮ ಪುರುಷ ಸಂಗಾತಿಗಳು ಮನಸ್ಸು ಬಿಚ್ಚಿ ಮಾತನಾಡಿದ್ದರೆ ಹೆಣ್ಮಕ್ಕಳಿಗೆ ನೂರಾನೆ ಬಲ ಬಂದಂತಾಗುತ್ತಿತ್ತು. ಇರಲಿ...

ಬೇರೆ ಬೇರೆ ಕಾರಣಗಳು, ಗುಣ-ಸ್ವಭಾವಗಳಿಗಾಗಿ ನನ್ನ ಮೆಚ್ಚಿನ ಪುರುಷರು ಹಲವರಿದ್ದರೂ ಆದ್ಯತೆ ಅಪ್ಪನಿಗೇನೇ! ಪಶುವೈದ್ಯಾಧಿಕಾರಿಯಾಗಿದ್ದ ಅಪ್ಪ ಡಾ. ಎಸ್. ಪ್ರಸನ್ನಕುಮಾರ್, ಸೈಕಲ್ಲನ್ನೇರಿ ಹಳ್ಳಿಹಳ್ಳಿಗೆ ಸುತ್ತುವಾಗ ರಜಾದಿನಗಳಲ್ಲಿ ಅವರ ಬೆನ್ನಿಗಂಟುತ್ತಿದ್ದೆ. ಗುಡಿಸಲು ದೊಡ್ಡಮನೆಗಳೆನ್ನದೇ, ಜಾತಿ ಯಾವುದೋ ತಿಳಿಯದೇ ಎಲ್ಲರ ಮನೆಯ ಸಾಕುಪ್ರಾಣಿಗಳಿಗೆ ಗಂಟೆಗಟ್ಟಲೇ ತಾದಾತ್ಮ್ಯತೆಯಿಂದ ಚಿಕಿತ್ಸೆ ನೀಡುತ್ತಿದ್ದರು, ಜೊತೆಗೇ ಮನೆಯವರ ಕಷ್ಟ-ಸುಖಗಳಿಗೂ ಸ್ಪಂದಿಸುತ್ತಿದ್ದರು. ಆ ಮನೆಯವರು ಕೊಟ್ಟ ತಿಂಡಿ-ಕಾಫಿ ಸ್ವೀಕರಿಸಲೂ ನಿರ್ಬಂಧವಿರಲಿಲ್ಲ. ಹಾಗೆ ಅವರು ನಮ್ಮ ಮನೆಗೆ ಬಂದಾಗಲೂ ನಮ್ಮಲ್ಲಿ ಆತಿಥ್ಯ.....ತನ್ನ ಆಸ್ಪತ್ರೆಯ ಸಿಬ್ಬಂದಿಯೊಡನೆ, ಗೆಳೆಯರೊಂದಿಗೆ ಅವರಲ್ಲೊಬ್ಬರೆಂಬ ವರ್ತನೆ. ತನ್ನ ಉಪಕಾರ ಗುಣದಿಂದ ಎಷ್ಟೋ ಬಾರಿ ಟೋಪಿ ಹಾಕಿಸಿಕೊಂಡಿದ್ದರೂ ಋಣಾತ್ಮಕವಾಗಿ ಚಿಂತಿಸದೇ ತನ್ನ ಪರಿಧಿಗೆ ಬರುವ ಜನರ ಕಷ್ಟಗಳಿಗೆ ಸದಾ ಮಿಡಿಯುವ, ಅಪ್ಪನ ನಡೆ ನನಗೆ ಸದಾ ಮೆಚ್ಚುಗೆ. ಜಾತಿ-ಮತ ಭೇದವಾಗಲೀ ಬಡವ-ಶ್ರೀಮಂತರೆಂಬ ತಾರತಮ್ಯವಾಗಲೀ ಎಂದಿಗೂ ನಮ್ಮಲ್ಲಿ ಸುಳಿಯಲೂ ಅವಕಾಶ ಕೊಟ್ಟಿಲ್ಲ. ಅಪ್ಪ ದನಗಳ ಡಾಕ್ಟರ್ ಮಾತ್ರವಲ್ಲಾ ಒಡನಾಡುವ ಜನರ ಆಪ್ತಬಂಧುವೂ. ವರ್ಗವಾಗಿ ಹೊರಟರೆ ಕಣ್ಣೀರುಗರೆಯುತ್ತಿದ್ದ ಜನಸಮೂಹದ ಕಣ್ಣೀರನ್ನು ನೆನೆಸಿಕೊಂಡರೆ ಈಗಲೂ ನನ್ನ ಕಣ್ಣುಗಳಲ್ಲಿ ನೀರಾಡುತ್ತದೆ........ಅಪ್ಪ ತನ್ನ ಈ ೭೭ರ ಹರೆಯದಲ್ಲಿಯೂ ಹಿಂದೆ ಹೇಗಿದ್ದರೋ ಹಾಗೆಯೇ ಈಗಲೂ ಕೂಡ ಎಲ್ಲರೊಂದಿಗೆ..

ಚಿಕ್ಕಂದಿನಲ್ಲಿ ನನ್ನ ಮತ್ತು ತಮ್ಮನನ್ನು ಶಾಲೆಗೆ ಸಿದ್ಧ ಮಾಡುವುದರಿಂದ ಹಿಡಿದು ಆಟವಾಡಿಸುವುದು, ಕುಣಿಸುವುದು, ಪಾಠ ಹೇಳಿಕೊಡುವುದು, ಜ್ವರವೋ ಜಡ್ಡೋ ಆದಾಗ ರಾತ್ರಿಯೆಲ್ಲಾ ಎದ್ದು ನೋಡಿಕೊಳ್ಳುವುದು... ನಮ್ಮ ಹೆಚ್ಚಿನ ದೇಖರೇಖಿಯೆಲ್ಲಾ ಅಪ್ಪನ ಕೆಲಸವೇ. ಈಗಲೂ ಮಕ್ಕಳೊಂದಿಗೆ ಮಕ್ಕಳಾಗಿ ಆಡುವುದು ಅಪ್ಪನಿಗೆ ಪ್ರಿಯ. ಅಂತಹ ಮಗುವಾಗಬಲ್ಲ ಮನಸ್ಸು. ಹಾಸ್ಯದ ಮಾತುಗಳಿಂದ ಎಲ್ಲರನ್ನೂ ನಗಿಸುತ್ತಾ, ನಗುತ್ತಾ, ಸದಾ ಚೈತನ್ಯದ ಬುಗ್ಗೆ. ಯಾವ ಕೆಲಸಕ್ಕೂ ಬೇಸರಿಸದೇ ಅಡುಗೆಮನೆ, ಮನೆವಾರ್ತೆಯ ಎಲ್ಲ ಕೆಲಸವನ್ನೂ ಇದು ಹೆಂಗಸರ ಕೆಲಸ ನಾನು ಮಾಡಬಾರದು ಎಂಬ ಯಾವ ಬಿಮ್ಮು ಇಲ್ಲದೇ ತನ್ನ ಮತ್ತು ಅಪ್ತರ ಮನೆಯಲ್ಲೆಲ್ಲಾ ಪ್ರೀತಿಯಿಂದ ಮಾಡುತ್ತಾರೆ. ಅದಕ್ಕೇ ಅಪ್ಪ ನನ್ನ ಹೆಮ್ಮೆ. ಕೆಲ ವರ್ಷಗಳಿಂದ ಅಮ್ಮ ಮಂಡಿ ಹಾಗೂ ತೊಡೆಯ ಶಸ್ತ್ರಚಿಕಿತ್ಸೆಗೆ ಒಳಗಾಗಿ ಹಾಸಿಗೆಯಲ್ಲಿರುವಂತಾದಾಗ ನರ್ಸ್ ಸೇವೆಯನ್ನೂ ನಿರಾಕರಿಸಿ ಯಾವುದಕ್ಕೂ ಗೊಣಗದೇ ಅಮ್ಮನ ಸೇವೆ ಮಾಡುತ್ತಾ ಮನೆಯನ್ನೂ ಸುಧಾರಿಸುವಾಗ...ಅಪ್ಪ ಗ್ರೇಟ್ ಎನ್ನಿಸುತ್ತದೆ.

ಮೊದಲಿಂದಲೂ ಮನೆಯಿಂದ ಹಿಡಿದು ಜಗತ್ತಿನ ಎಲ್ಲ ವಿಷಯವನ್ನೂ ಗಂಡು-ಹೆಣ್ಣೆಂಬ ಭೇದವಿಲ್ಲದೇ ಒಟ್ಟಿಗೆ ಮನ ಬಿಚ್ಚಿ ಚರ್ಚಿಸಿ ಹಂಚಿಕೊಳ್ಳುವಂತೆ ಕುಟುಂಬ ರೂಪಿಸಿರುವ, ಭಿನ್ನಮತವನ್ನು ಗೌರವಿಸುವ ಅಪ್ಪ ಎಲ್ಲರಂತೆ ನಮಗೂ ಆಪ್ತಸ್ನೇಹಿತ. ಇಂತಹ ಶೇರಿಂಗ್ ಮತ್ತು ಕೇರಿಂಗ್ ಗುಣಗಳು ಪುರುಷರಲ್ಲಿ ಅಪರೂಪವಾದ್ದರಿಂದಲೇ ಅಪ್ಪ ನನಗೆ ಮೆಚ್ಚು.


ಇಂದಿಗೂ ಕಸ ಹುಡುಕಿ ಬಚ್ಚಲೊಲೆಗೆ ಉರಿ ಹಾಕುವ, ತನ್ನ ಕೈ ತೋಟದಲ್ಲಿ ತರಕಾರಿ, ಸೊಪ್ಪು ಬೆಳೆದು ಎಲ್ಲರಿಗೂ ಹಂಚುವ, ಆ ಕೆಲಸಗಳಲ್ಲಿನ ಶ್ರಮವನ್ನೇ ಸಂತೋಷವೆಂದುಕೊಂಡಿರುವ, ಕಟುವಾಗಿ ಮಾತನಾಡಿ ಯಾರನ್ನೂ ನೋಯಿಸದ.... ಸಹೃದಯಿ ಅಪ್ಪ........ನಿಜಕ್ಕೂ ನನ್ನ ಹೀರೋ!



-ರೂಪ ಹಾಸನ

(ಕವಯತ್ರಿ ರೂಪ ಹಾಸನ, ಮಹಿಳಾ ಕಲ್ಯಾಣ ಮತ್ತು ಶಾಲಾ ಶಿಕ್ಷಣ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಸಾಮಾಜಿಕ ಕಾರ್ಯಕರ್ತೆಯೂ ಹೌದು)

ನಾನು ಪುಟ್ಟೇಗೌಡರ ಹಿರೀ ಸೊಸೆ!



ಹೆಣ್ಣುಮಕ್ಕಳಿಗೆ "ನೆಚ್ಚಿನ ಪುರುಷ ಯಾರು, ಯಾಕೆ' ಎಂಬ ಪ್ರಶ್ನೆ ಎದುರಾದರೆ ಸಹಜವಾಗಿ ಮೊದಲು ತಂದೆ, ನಂತರ ಪತಿಯ ಆಯ್ಕೆಯೇ ಉತ್ತರವಾಗುತ್ತದೆ. ಅವರ ಬಗ್ಗೆಯೇ ಬರೆಯುವುದು ತೀರಾ ವೈಯಕ್ತಿಕ ಮತ್ತು ಮುಜುಗರದ ಸಂಗತಿ ಎನಿಸಿ ಅವರಿಬ್ಬರಾಚೆಗೆ ಯೋಚಿಸಿದಾಗ ಅನಾಯಾಸ ನನ್ನ ಕಣ್ಮುಂದೆ ಬಂದು ನಿಂತವರು ನನ್ನ ಮಾವ. ನನ್ನ ತಂದೆಯ

ನಿಷ್ಠುರತೆ, ಗಂಡನ ತಾಳ್ಮೆಯ ಸ್ವಭಾವಗಳೆರಡೂ ನನಗೆ ನನ್ನ ಮಾವನಲ್ಲಿ ಎದ್ದು ಕಾಣುವ ಗುಣಗಳು. ಆ ಕಾರಣಗಳಿಗಷ್ಟೆ ನನಗವರು 'ನೆಚ್ಚಿನ ಪುರುಷ'ನಾಗಿಬಿಟ್ಟಿಲ್ಲ. ಆ ಗುಣಗಳಾಚೆಗೂ ಅವರದ್ದೇ ಕೆಲವು ವಿಶೇಷತೆಗಳಿವೆ.

ಅಕ್ಷರ ವಂಚಿತ ಬಾಲ್ಯ. ಬದುಕಿನುದ್ದಕ್ಕೂ ಎದುರಾದ ಬಹಳಷ್ಟು ಏಳು ಬೀಳುಗಳು, ಆರ್ಥಿಕ ಮುಗ್ಗಟ್ಟು, ಈ ಎಲ್ಲವನ್ನೂ ಸಮಚಿತ್ತದಿಂದ ಅವರು ಸ್ವೀಕರಿಸಿರುವ ಪರಿ ಅವರ ಬದುಕಿನಲ್ಲಿ ಈಗಲೂ ಪ್ರತಿಫಲಿಸುತ್ತದೆ. ಸ್ವಾಭಿಮಾನದ ಹುರುಪು; ಒಂದಿಷ್ಟೂ ಕುಗ್ಗಿರದ ಜೀವನ ಪ್ರೀತಿ; ಉತ್ಸಾಹ ನನ್ನನ್ನು ಸದಾ ಎಚ್ಚರಿಸುತ್ತಿರುತ್ತದೆ.

ಮಕ್ಕಳೆಲ್ಲರೂ ತಕ್ಕಮಟ್ಟಿಗೆ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಂಡ ಕಾಲದಲ್ಲೂ ಅವರು ತಮ್ಮ ಕನಿಷ್ಠ ಅವಶ್ಯಕತೆಯನ್ನು ಬಿಟ್ಟು ಒಂದಿನಿತೂ ಆಚೀಚೆ ಆದ್ಯತೆಗಳನ್ನು ಹೆಚ್ಚಿಸಿಕೊಂಡಿಲ್ಲ; ಬದಲಿಸಿಕೊಂಡೂ ಇಲ್ಲ. ಒಂದು ಬಿಳಿಯ ಮಾಸಲು ಮೇಲಂಗಿ, ಬಿಳಿಯದೇ ತುಂಡು ಪಂಚೆ ಅಂದೂ ಇಂದೂ ಎಂದೂ. ಹೊರ ಹೊರಟರಷ್ಟೆ ಪಂಚೆ, ತುಂಬು ತೋಳಿನ ಅಂಗಿ. ಎಲ್ಲೇ ಹೋದರೂ ಬರಿಗಾಲೇ ಚಪ್ಪಲಿ. ಚಿಕ್ಕ ವಯಸ್ಸಿನಲ್ಲಿ ಕೊಂಡ ಚಪ್ಪಲಿಯನ್ನು ಯಾರೋ ಕದ್ದರಂತೆ. ತದನಂತರದಲ್ಲಿ ಎಂದೂ ಮೆಟ್ಟನ್ನು ಮೆಟ್ಟಿದವರಲ್ಲ.

ಅವರ ನಿತ್ಯದ ಕೆಲಸ ಕಾರ್ಯಗಳ ಪಟ್ಟಿ ಎಂಥದೇ ಸಂದರ್ಭದಲ್ಲೂ ವ್ಯತ್ಯಯವಾಗುವುದಿಲ್ಲ. ಮುಂಜಾನೆ ಅಂಗಳದ ಕಸ ಗುಡಿಸುವುದರಿಂದ ಪ್ರಾರಂಭವಾದರೆ ನಂತರ ಮಧ್ಯಾಹ್ನದವರೆಗೆ ಕೊಟ್ಟಿಗೆಗೆ ಶಿಫ್ಟ್ ಆಗುತ್ತದೆ. ದೈನಂದಿನ ಒಡನಾಡಿಗಳಾದ ಎಮ್ಮೆ, ದನ ಕರುಗಳ ಆರೈಕೆ; ಮೇಯಲು ಅಟ್ಟುವುದು; ಮತ್ತೆ ಕರೆತಂದು ಕಟ್ಟುವುದು; ಅವುಗಳೊಂದಿಗೆ ಸಂವಾದಿಸುವುದು; ಜಮೀನಿನಿಂದ ಹುಲ್ಲು ಕೊಯ್ದು ತಂದು ಹಾಕುವುದು. ಅವರದ್ದೇ ಒಂದು ಪ್ರಪಂಚ. ಪ್ರಾಣಿ ಪ್ರೀತಿ ನನ್ನ ಮತ್ತು ಅವರ ಸಮಾನ ಆಸಕ್ತಿ ವಿಷಯ. ಅದುವೇ ನಮ್ಮ ನಡುವೆ ಪ್ರತಿ ಭೇಟಿಯಲ್ಲೂ ತಪ್ಪದೇ ನಡೆಯುವ ಚರ್ಚೆಯ ಪ್ರಮುಖ ಅಜೆಂಡಾ. ಊರಿಗೆ ಹೋದಾಕ್ಷಣ ನನ್ನ ಮೊದಲ ಮತ್ತು ನೆಚ್ಚಿನ ಕೆಲಸ ನನ್ನ ಮಾವನವರನ್ನು ಅವರ ಕರ್ಮಭೂಮಿಯಾದ ಕೊಟ್ಟಿಗೆಯಲ್ಲಿ ಇಣುಕಿ ಮಾತನಾಡಿಸುವುದು. ನನ್ನೊಳಗಿನ ಪ್ರಾಣಿ ಪ್ರೀತಿಯನ್ನು ಬಲ್ಲವರಂತೆ ಅವರೂ ಅಷ್ಟೇ ಕಾತುರರಾಗಿ ವರದಿ ನೀಡಿ ಮಾತು ಮುಗಿಸುವರು.

ನಾನು ಗಮನಿಸಿದಂತೆ ಅವರಲ್ಲಿ ಕಂಡ ಒಂದೇ ಆಸೆ, ವರ್ಷದಲ್ಲಿ ಒಂದೆರಡು ಬಾರಿ ಹಬ್ಬದ ಸಂದರ್ಭದ ನೆಪ ಮಾಡಿಕೊಂಡು ಒಂದಿಷ್ಟು ಮಂದಿ ನೆರೆ–ಹೊರೆಯ ಆತ್ಮೀಯರನ್ನು ಕರೆದು, ತಾವೂ ಸೇರಿಕೊಂಡು ಮಾಡುವ ಅಡುಗೆಯನ್ನು ಉಣಬಡಿಸುವುದು. ದಿನದ ಕೆಲಸವೆಲ್ಲ ಮುಗಿದ ನಂತರ ಯಾರಾದರು ಮಾತಿಗೆ ಸಿಕ್ಕರೆ ತುಸು ಹರಟೆ. ಇಲ್ಲವೇ ತಾವಾಯಿತು ತಮ್ಮ ಪಾಡಾಯಿತು.

ಸಾಂಪ್ರದಾಯಿಕ ಆಲೋಚನೆಗಳ ಮಧ್ಯೆಯೇ ಬದುಕು ಸಾಗಿದರೂ, ಮನೆಯ ಅಂಗಳದ ತುಂಬಾ ಎಲ್ಲರಿಗೂ ಆತ್ಮೀಯ ಸ್ವಾಗತ; ಒಂದು ಕಪ್ ಚಹ ಕಾಯಂ. ಜಾತಿ ಮೀರಿದ ನಮ್ಮ ಮದುವೆಯನ್ನು; ಸರಳವಾಗಿ ಮದುವೆಯಾದ ರೀತಿಯನ್ನು ಅಷ್ಟೇ ತೆರೆದ ಮನಸ್ಸಿನಿಂದ ಒಪ್ಪಿಕೊಂಡ ಬಗೆ ನನ್ನಲ್ಲಿ ಅವರೆಡೆಗಿನ ಗೌರವ, ಪ್ರೀತಿಯನ್ನು ಇಮ್ಮಡಿಗೊಳಿಸುತ್ತದೆ. ಉದ್ಯೋಗಕ್ಕೆ ಹೋಗುವ ಹಿರಿಯ ಸೊಸೆಯಾದ ನನ್ನನ್ನೂ ಮನೆಯ ಉಳಿದಿಬ್ಬರು ಸೊಸೆಯರನ್ನು ಸರಿಸಮವಾಗಿ ಕಾಣುವ ಅವರ ಮನೋಭಾವ ಖುಷಿಕೊಡುತ್ತದೆ. ಆಧುನಿಕ ಬದುಕಿನ ಓಟದಲ್ಲಿ ಮನೆಯೊಳಗು ಅಷ್ಟಿಷ್ಟು 'ಅನಿವಾರ್ಯ' ಬದಲಾವಣೆಗಳನ್ನು ಕಂಡುಕೊಂಡಿರುವಾಗಲೂ ಅವರು ಅದಕ್ಕೆ ಅಪವಾದದಂತೆ ತೋರುತ್ತಾರೆ. ಜೀವನ ಪ್ರೀತಿ ಬಿಟ್ಟರೆ ಬದುಕಿಗೆ ಇನ್ನಾವುದೂ ಅನಿವಾರ್ಯವಲ್ಲ ಎಂದು ತಮ್ಮ ಅತ್ಯಂತ ಸರಳ ಬದುಕಿನ ರೀತಿಯಲ್ಲಿಯೇ ನನಗೆ ತೋರಿಸಿ ಕೊಟ್ಟವರವರು.


ಅಕ್ಷರ ಕಲಿತು, ಏನೇನನ್ನೋ ಓದಿ ತಿಳಿದುಕೊಂಡರೂ ಕನಿಷ್ಠ ತಿಳುವಳಿಕೆ ಇಲ್ಲದವರಂತೆ ವರ್ತಿಸುವ ದೊಡ್ಡ ಹೆಸರಿನ 'ಸಣ್ಣ' ಜನರ ಮಧ್ಯೆ, ಓದನ್ನರಿಯದ ನನ್ನ ಮಾವ ನನಗೆ ಎದ್ದು ಕಾಣುವ ದೊಡ್ಡ ವ್ಯಕ್ತಿತ್ವ. ಸುಮಾರು ಐವತ್ತರವತ್ತು ಮನೆಯ ಪುಟ್ಟ ಊರಿನಲ್ಲಿ ನಾನು ಪುಟ್ಟೇಗೌಡರ ಹಿರೀಸೊಸೆ. ಬೀಗುತ್ತೇನೆ. ಹೆಮ್ಮೆಯಿಂದ.

–ಎನ್.ಆರ್. ಸ್ನೇಹ



(ಮೈಸೂರಿನ ಎನ್. ಆರ್ ಸ್ನೇಹ, ವೃತ್ತಿಯಿಂದ ಇಂಗ್ಲಿಷ್ ಉಪನ್ಯಾಸಕಿ; ಪ್ರವೃತ್ತಿಯಿಂದ ಭರತನಾಟ್ಯ ಕಲಾವಿದೆ)

ಇಂಥ ಮುತ್ತಜ್ಜ, ನನ್ನ ಆದರ್ಶ-ನೆಚ್ಚಿನ ಪುರುಷ!!



ಬೇಸಿಗೆ ರಜೆಯ ಕಾಲ, ೧೯೬೭ನೇ ಇಸ್ವಿ. ಶಿರ್ಶಿ ಸಮೀಪದ ಅಜ್ಜನ ಮನೆಯಲ್ಲಿ ನಾವು ಮೊಮ್ಮಕ್ಕಳು ಸೇರಿದ್ದ ಸಮಯ. ಒಂದು ದಿನ ಬೆಳಿಗ್ಗೆಯೇ ಒಂದು ರೀತಿ ಉದ್ವೇಗ–ಸಂಭ್ರಮದ ವಾತಾವರಣ. ಆಗ ಶಿರ್ಶಿಗೆ ದೂರ ಎನಿಸಿದ್ದ ಸಿದ್ದಾಪುರದ ಕಿಲಾರದಿಂದ ನಮ್ಮ ಮುತ್ತಜ್ಜ ಗಣೇಶ ಹೆಗಡೆಯವರು ತಮ್ಮ ಮಗಳ ಮನೆಗೆ ಅಂದರೆ ನಮ್ಮ ಅಜ್ಜ–ಅಜ್ಜಿ ಮನೆಗೆ ಬರುವವರಿದ್ದರು.

ಬಾಲ್ಯ ವಿವಾಹ, ಬಹುಬೇಗ ಸಂತಾನವಾಗುತ್ತಿದ್ದ ಆ ಶತಮಾನದಲ್ಲಿ (೧೮೮೫ರಲ್ಲಿ ಮುತ್ತಜ್ಜ ಹುಟ್ಟಿದ್ದು) ಮರಿ ಮಕ್ಕಳನ್ನು ಕಾಣುವುದು ಸ್ವಾಭಾವಿಕವಾಗಿತ್ತು. ಮುತ್ತಜ್ಜನನ್ನು ನೋಡುವ, ಅವರ ಮಾತುಗಳನ್ನು ಕೇಳುವ ಸೌಭಾಗ್ಯ ನಮ್ಮದಾಗಿತ್ತು. ಅವರ ಆದರ್ಶಗಳನ್ನು, ವೈಚಾರಿಕ ಮನೋಭಾವವನ್ನು ಸಾಧ್ಯವಾದ ಮಟ್ಟಿಗೆ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದ್ದು ನಮ್ಮ ಪುಣ್ಯ.

ಅಂದು ರಾತ್ರಿ ಅಜ್ಜನ ಮನೆ ಅಂಗಳದಲ್ಲಿ ಒಂದು ಪುಟ್ಟ ಸಭೆ. ಮುತ್ತಜ್ಜನ ಸನ್ನಿಧಿ, ಅಜ್ಜನ ಅಧ್ಯಕ್ಷತೆ, ಅಜ್ಜನ ಮನೆಯ ಎಲ್ಲ ಸದಸ್ಯರು, ಆಳುಗಳು, ಹಳ್ಳಿಯ ಸುತ್ತಲಿನ ಕೃಷಿಕರು ಸೇರಿದ್ದರು. ಅದಾಗಲೇ ಇಡೀ ಉತ್ತರ ಕನ್ನಡ ಜಿಲ್ಲೆಯಲ್ಲಿ ವಿಧವಾ ವಿವಾಹ, ಬಾಲ್ಯ ವಿವಾಹಗಳ ವಿರೋಧ, ಸ್ತ್ರೀ ಸಮಾನತೆ, ಕೃಷಿಯಲ್ಲಿ ಹೊಸತನ ಮುಂತಾದ ವೈಚಾರಿಕ ಮನೋಭಾವ–ಹೋರಾಟಗಳಿಂದ ಮುತ್ತಜ್ಜ ಪ್ರಸಿದ್ಧರಾಗಿದ್ದರು. ಹಾಗೆಯೇ ಸಂಪ್ರದಾಯ ಶರಣರ ಕೆಂಗಣ್ಣಿಗೂ ಗುರಿಯಾಗಿದ್ದರು. ಕಿಲಾರದಲ್ಲಿ ಅವರೇ ಸಕ್ಕರೆ, ಹಿಟ್ಟು ತಯಾರಿಸುವ ಯಂತ್ರ ಜೋಡಣೆ, ಗುಡ್ಡದಿಂದ ಇಳಿಯುವ ನೀರಿನಿಂದ ವಿದ್ಯುತ್ ಸಂಪಾದನೆಯಿಂದ ಮನೆಯನ್ನು ಬೆಳಗಿಕೊಂಡಿದ್ದವರು.

ಮುತ್ತಜ್ಜ ದುಶ್ಚಟಗಳಿಂದ ದೂರವಿರಲು ಕರೆ ನೀಡಿ, ಕೃಷಿಕರಿಗೆ ಉಪಯೋಗವಾಗುವ ಹಲವಾರು ಮಾಹಿತಿ ನೀಡಿದ್ದರು. ಮೂಢನಂಬಿಕೆಗಳ ವಿರುದ್ಧ ಹೋರಾಡಿದ ಮುತ್ತಜ್ಜ, ಸೂರ್ಯನ ಉಪಾಸಕರು. ಬಾಲ್ಯದಲ್ಲೇ ಕುಮಟಾ ತಾಲ್ಲೂಕಿಗೆ ತೆರಳಿ ಇಂಗ್ಲೀಷ್ ಶಿಕ್ಷಣ ಪಡೆದು, ರಾಷ್ಟ್ರಭಕ್ತಿಯಿಂದ ಅದನ್ನು ನಿರಾಕರಿಸಿ, ಮನೆಯಲ್ಲೇ ಮರಾಠಿ, ಉಪನಿಷತ್, ರುದ್ರ, ಪುರುಷಸೂಕ್ತ, ಜ್ಯೋತಿಷ್ಯ ಅಧ್ಯಯನ ಮಾಡಿದವರು. ತಮ್ಮ ಹೆಣ್ಣು–ಗಂಡು ಮಕ್ಕಳಿಗೆ ಲೋಕಮಾನ್ಯ ತಿಲಕ್–ಗಾಂಧಿ ಸಾಹಿತ್ಯವನ್ನು ಓದುವಂತೆ, ಪ್ರೇರಣೆ ನೀಡಿದವರು. ಹನ್ನೆರಡೂ ಮಕ್ಕಳಿಗೆ ಮರಾಠಿ, ಕನ್ನಡ, ಇಂಗ್ಲೀಷ್ ಜ್ಞಾನ ಬರುವಂತೆ ಮಾಡಿದವರು. ಸಮಾಜ ಪರಿವರ್ತನೆಗಾಗಿ ಹಲವಾರು ಪುಸ್ತಕಗಳನ್ನು ಬರೆದು ಪ್ರಕಟಿಸಿದವರು.

ಮುತ್ತಜ್ಜ ಆಡಂಬರದ ಪೂಜೆಗಳನ್ನು ಒಪ್ಪುತ್ತಿರಲಿಲ್ಲ. ಅವರು ನಂಬಿದ್ದು ಜಗತ್ತಿಗೇ ಬೆಳಕು ನೀಡುವ ಸೂರ್ಯನನ್ನು!. ದಿನಕ್ಕೆ ಮೂರು ಬಾರಿ ಸೂರ್ಯ ಭಗವಾನ್‌ನಿಗೆ ನಮಸ್ಕರಿಸುತ್ತಿದ್ದರು. ಗಾಯತ್ರಿ ಜಪ ನಿತ್ಯ ಮಂತ್ರವಾಗಿತ್ತು. ಗಂಡು –ಹೆಣ್ಣು ಭೇದವಿಲ್ಲದೇ ತನ್ನ ಮಕ್ಕಳು, ಮೊಮ್ಮಕ್ಕಳಿಗೆ ಗಾಯತ್ರಿ ಉಪದೇಶ ಮಾಡುತ್ತಿದ್ದರು. ಆದರೆ ಮುತ್ತಜ್ಜ ೮೬ನೇ ವಯಸ್ಸಿನಲ್ಲಿ ಒಂದು ಸೂರ್ಯೋದಯದ ಹೊತ್ತಿಗೆ ಸೂರ್ಯನಿಗೆ ಕೈ ಮುಗಿಯುವಂತೆ ಜೋಡಿಸಿದ ಹಸ್ತಗಳನ್ನು ಎದೆಯ ಮೇಲಿಟ್ಟುಕೊಂಡು ತೀರಿಕೊಂಡರಂತೆ. ಇಲ್ಲಿಗೆ ಪವಾಡಸದೃಶವಾಗಿ ಬದುಕಿದ ಮುತ್ತಜ್ಜನ ಭೌತಿಕ ದೇಹ ಮರೆಯಾಯ್ತು.

ಮುತ್ತಜ್ಜ ಬಿತ್ತಿದ ಸದ್ಗುಣದ ಬೀಜಗಳು ಅವರ ಸಂತಾನದ ಬಳ್ಳಿಯಲ್ಲಿ ಹೂವುಗಳಾಗಿ ಅರಳಿವೆ, ಹಣ್ಣುಗಳಾಗಿ ಸಮಾಜಕ್ಕೆ ಕೊಡುಗೆ ನೀಡಿವೆ. ಪ್ರಸಿದ್ಧ ಛಾಯಾಗ್ರಾಹಕ ಕೆ.ಎಸ್.ರಾಜಾರಾಮ, ಶಾಲಿನಿ ರಘುನಾಥ ಭಟ್ಟ, ವಿಜಯನಳಿನಿ ರಮೇಶ್ (ಮಹಿಳಾ ಯಕ್ಷಗಾನ ತಂಡ ಕಟ್ಟಿದವಳು) ಇವರೆಲ್ಲ ಮುತ್ತಜ್ಜನ ಮೊಮ್ಮಕ್ಕಳು, ನನ್ನ ಬಂಧುಗಳು!!. ಇಂಥ ಮುತ್ತಜ್ಜ, ನನ್ನ ಆದರ್ಶ–ನೆಚ್ಚಿನ ಪುರುಷ!!

–ವಿಜಯಾ ಶ್ರೀಧರ್



(ಶಿವಮೊಗ್ಗದ ಕರ್ನಾಟಕ ಸಂಘದ ಅಧ್ಯಕ್ಷೆಯಾಗಿದ್ದ ವಿಜಯಾ ಶ್ರೀಧರ್ ಕನ್ನಡದ ಹಿರಿಯ ಲೇಖಕಿಯೂ ಹೌದು)

ಮಾರ್ಟಿನ್ ಲೂಥರ್ ಕಿಂಗ್ ನನ್ನ ಮೆಚ್ಚಿನ ಪುರುಷ



'ನೆಚ್ಚಿನ ಪುರುಷ'ದಲ್ಲಿನ 'ಪುರುಷ' ಪದ ನನ್ನನ್ನು ಪೌರುಷದ ಲೋಕಕ್ಕೆ ಕರೆದೊಯ್ದಿತು. ಅಲ್ಲಿ ಕಾಡಿನಿಂದ ನಾಡಿಗಿಳಿದು, ನಾಡಿನಿಂದ ಅಂತರಿಕ್ಷಕ್ಕೇರುತ್ತಿರುವ ಪೌರುಷದ ಕಥಾನಕದ ಮಹಾಮಹಿಮರು, ನಾವು ನಡೆಯುತ್ತಿರುವ ಹಾದಿ ಇದೇ ಆಗಿರಬೇಕೆಂದು ತರತರದ ದೇವರು, ಧರ್ಮಗಳ ಅವಿಷ್ಕರಿಸಿದ ಮಹಾಮಹಿಮರು.

ತನ್ನ ನಂಬಿದ ಸಂಸಾರಕ್ಕಾಗಿ ಅದರ ಸೌಕರ್ಯಕ್ಕಾಗಿ ತನ್ನ ಇಡೀ ಬದುಕ ಸವೆಸುವ ಸಾಮಾನ್ಯನೂ ಸೇರಿದಂತೆ ಎಲ್ಲರೂ ಕಣ್ಮುಂದೆ ನಿಲ್ಲುತ್ತಾರೆ.

ಚೈತನ್ಯದ ಒರತೆಯಾದ ಈ ಪುರುಷರಲ್ಲಿ ಯಾರು ನನ್ನ ಮೆಚ್ಚಿನ ಪುರುಷ ಎಂದು ಕಣ್ಣಾಡಿಸಿದರೆ... ಬರೀ ಬುದ್ಧಿವಂತನಾಗಿರದೆ ಹೃದಯವಂತನಾದ ಪುರುಷನಿಗೆ ನನ್ನ ಮೆಚ್ಚುಗೆ ಸಲ್ಲುತ್ತದೆ. ಬರೀ ಬುದ್ಧಿವಂತರ ಪಾರಮ್ಯದ ಈ ಜಗತ್ತಿನಲ್ಲಿ ಇಂದು ಸುಖಲೋಲುಪ ಅಂಗವಿಕಲರ, ತಲೆಹಿಡುಕರ ಪರಂಪರೆಯೊಂದು ಕಂಟಕಪ್ರಾಯವಾಗಿ ಪರಿಣಮಿಸುತ್ತಿರುವಾಗ ಹೃದಯ ಮತ್ತು ಬುದ್ಧಿ ಭ್ರಷ್ಟವಾಗಿರದ ಗಾಂಧಿ ಪರಂಪರೆಯ ಅಮೆರಿಕಾದ ನೀಗ್ರೋ ನಾಯಕ ಮಾರ್ಟಿನ್ ಲೂಥರ್ ಕಿಂಗ್ ನನ್ನ ಮೆಚ್ಚಿನ ಪುರುಷ.

"ಮಾನವನೊಬ್ಬ ಅದ್ಭುತ ಸೃಷ್ಟಿ, ಕಾಲದೇಶಗಳನ್ನು ಮೀರುವ ಅಧ್ಯಾತ್ಮ ಮತ್ತು ವಿವೇಕ ಶಕ್ತಿಗಳು ಅವನಲ್ಲಿವೆ" ಎಂದ ಮಾರ್ಟಿನ್ ನನಗೆ ಅಚ್ಚುಮೆಚ್ಚು. ಅವನ ಕನಸಾದ 'ಎಲ್ಲಾ ಮಾನವರೂ ಸಮಾನವಾಗಿ ಸೃಷ್ಟಿಯಾಗಿದ್ದರೆಂಬ ಸತ್ಯವನ್ನು ಗ್ರಹಿಸಿ, ಚರ್ಮದ ಬಣ್ಣವನ್ನು ಪರಿಗಣಿಸದೆ ಅವರ ವ್ಯಕ್ತಿತ್ವದ ಆಧಾರದ ಮೇಲೆ ಮಾನವರ ಗುಣಶೀಲಗಳನ್ನು ನಿರ್ಣಯಿಸಲಿ' ಎಂಬ ಕನಸು ನನ್ನದೂ ಹೌದು.

–ಡಾ. ಅರುಂಧತಿ



(ವೃತ್ತಿಯಿಂದ ವೈದ್ಯರಾದ ತುಮಕೂರಿನ ಅರುಂಧತಿ ಅವರು ವಿದ್ಯಾರ್ಥಿ ದೆಸೆಯಿಂದಲೂ ಗಾಂಧಿ–ಲೋಹಿಯಾ– ಅಂಬೇಡ್ಕರ್‌ರ ವಿಚಾರಗಳಿಂದ ಪ್ರಭಾವಿತರಾಗಿ ಸಮಾಜವಾದಿ ಯುವಜನ ಸಭಾ, ದಲಿತ ಸಂಘರ್ಷ ಸಮಿತಿ ಮುಂತಾದ ಜನಪರ ಸಂಘಟನೆಗಳೊಂದಿಗೆ ಗುರುತಿಸಿಕೊಂಡು ಬಂದವರು)

ಅವರೇ ಇಮ್ರೋಜ್! ಅಮೃತಾ ಪ್ರೀತಂರ ಇಮ್ರೋಜ್!!



ಮೊದಲಿಗೆ ಇದೊಂದು ವಿಚಿತ್ರ ಪ್ರಶ್ನೆ ಎನ್ನಿಸ್ತು. 'ನನ್ನ ಮೆಚ್ಚಿನ ಪುರುಷ' ಅಂದ್ರೆ ಯಾವ ಥರ ಅಂತ ಯೋಚನೆಗಿಟ್ಟುಕೊಂಡಿತು. ನನಗೋ ಬಹಳ ಜನ ಪುರುಷರು ಬಹಳಷ್ಟು ಕಾರಣಗಳಿಗೆ ಇಷ್ಟವಾಗಿದ್ದಾರೆ. ಯಾರ್ಯಾರನೆಂತು ಬಣ್ಣಿಸಲಿ? ಪೌರಾಣಿಕ ಪುರುಷರನ್ನೋ, ಐತಿಹಾಸಿಕ ಪುರುಷರನ್ನೋ, ನನ್ನ ಜೀವನದಲ್ಲಿ ಪ್ರೇರಕ ಶಕ್ತಿಯಾಗಿರುವವರನ್ನೋ, ಓದಿನ ಸುಖವನ್ನು ಹೆಚ್ಚಿಸುವ ಗಂಡು ಪಾತ್ರಗಳನ್ನೋ, ನನ್ನ ಸುತ್ತಮುತ್ತ ಕಾಣುವ ಮಹಾನುಭಾವರನ್ನೋ, ಕನಸಿನಲ್ಲಿ ಬಂದು ಹೋದ ಪುರುಷರನ್ನೋ, ನಿಜದಲ್ಲಿ ಪ್ರೀತಿಸಿ ಮದುವೆಯಾದ ಗಂಡನನ್ನೋ ಯಾರನ್ನು ಆಯ್ಕೆ ಮಾಡಲಿ? ಅಪ್ಪ, ಅಣ್ಣ, ಗುರು, ಗೆಳೆಯ, ಪ್ರೇಮಿ, ಗಂಡ... ಯಾವ ಭಾವ ಹೇಗೆ ಹೆಚ್ಚು ಅಚ್ಚುಮೆಚ್ಚು? ಈ ಎಲ್ಲ ಭಾವಗಳನ್ನು ಹೇಗೆ ತೂಕ ಹಾಕಲಿ? ಪುರುಷ ಜಗತ್ತು ಯಾವತ್ತೂ ತನ್ನ ಕುತೂಹಲದ ಇಬ್ಬಗೆಯ ಪ್ರಶ್ನೆಗಳನ್ನು ಹೆಣ್ಣಿನ ಮನಸ್ಸಿನೊಳಗೆ ಬಿತ್ತುತ್ತಲೇ ಹೋಗುತ್ತಿರುತ್ತದೆಯೋ ಏನೋ....ಕಷ್ಟ, ಕಷ್ಟ.

ಇಂತಿಪ್ಪ ಕಷ್ಟಗಳ ನಡುವೆಯೂ, ಹಲವು ನೆನಪುಗಳಿಂದ ಪುಳಕಗೊಂಡ ನನ್ನ ಮನಸ್ಸು ಸ್ತ್ರೀ ಸ್ವಾತಂತ್ರ್ಯವನ್ನು ಗೌರವಿಸುವ ಗಂಡು ಯಾರಿರಬಹುದು ಎಂದು ಯೋಚಿಸಹತ್ತಿತು. 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ...' ಅಂತ ಅಡಿಗರು ಹೇಳಿದ್ದಾರಲ್ಲ ಹಾಗೆ, ನಾನು ಕಣ್ಣಾರೆ ಕಂಡ ಹಲವು ಮುಖಗಳ ನಡುವೆಯೂ ಸೆಳೆದದ್ದು ಓದಿನಿಂದ ಮನದೊಳಗೆ ಅಚ್ಚೊತ್ತಿದ ಕಾಣದ ಮುಖವೇ.

ಅವರೇ ಇಮ್ರೋಜ್. ಅಮೃತಾ ಪ್ರೀತಂರ ಇಮ್ರೋಜ್. 'ಚಲತಾ ಫಿರತಾ ತಾಜ್ ಮಹಲ್' ಎಂದು ಕರೆಸಿಕೊಂಡ ಇಮ್ರೋಜ್. ರೇಣುಕಾ ನಿಡಗುಂದಿಯವರ 'ಅಮೃತ ನೆನಪುಗಳು' ಪುಸ್ತಕ ಓದ್ತಾ ಓದ್ತಾ ನಾನೇ ರೇಣುಕಾ ಆಗಿ ಅವರೆದುರಿಗಿದ್ದೆ, ನಾನೇ 'ರಸೀದಿ ಟಿಕೆಟ್'ನ ಅಮೃತಾ ಆಗಿದ್ದೆ...... ಅಪ್ಪನಾಗುವ, ಅಣ್ಣನಾಗುವ, ಗೆಳೆಯನಾಗುವ, ಪ್ರೇಮಿಯಾಗುವ, ಗಂಡನೂ ಆಗುವ, ಧರ್ಮ, ಜಾತಿ, ಪಂಥಗಳನ್ನು ಮೀರಿದ ಇಮ್ರೋಜ್ ಅದ್ಭುತವಾದ ವ್ಯಕ್ತಿ. ಪ್ರೇಮಸ್ವರೂಪಿಯೇ ಅವರು ಎನ್ನಿಸುವಂಥಾ ಗುಣ ಅವರದು. ಸಮಾಜದ ಕಟ್ಟುಪಾಡುಗಳಾವುವೂ ಅವರ ನಿರ್ಮಲ ಪ್ರೇಮಕ್ಕೆ ಅಡ್ಡಿಯಾಗಲಿಲ್ಲ. ಅಮೃತಾರನ್ನು ಅವರು ಹೇಗಿದ್ದಾರೋ ಹಾಗೇ ಪ್ರೇಮಿಸುವ, ಒಪ್ಪಿಕೊಳ್ಳುವ ಒಂದು ಅದ್ಭುತವೇ ಎನ್ನಿಸುವಂತಾ ಮನಸ್ಸು ಇಮ್ರೋಜ್‌ರದ್ದು. ಪ್ರಶ್ನೆಗಳನ್ನೇ ಕೇಳದ, ಭಿನ್ನ ದೃಷ್ಟಿಕೋನವನ್ನು ಅತ್ಯಂತ ಸಹಜವಾಗಿ ಗೌರವಿಸುವ, ಅಡುಗೆ ಮನೆಯಲ್ಲೂ ಸಹಕರಿಸುವ, ವಿಶ್ರಾಂತಿಯಲ್ಲಿ ಹರಟೆಗೆ ಸಿಗುವ, ಕಷ್ಟಗಳಲ್ಲಿ ಹೆಗಲೆಣೆಯಾಗುವ, ತನ್ನ ಸ್ವಾತಂತ್ರ್ಯವನ್ನೂ ಕಾಪಿಟ್ಟುಕೊಳ್ಳುವ, ಹೆಣ್ಣನ್ನು ಹೆಣ್ಣೆಂದಲ್ಲದೆ ನನ್ನೊಂದಿಗಿರುವ ನನ್ನಂತದೇ ಮತ್ತೊಂದು ಜೀವ ಎಂದು ತಿಳಿಯುವ, ಆತ್ಮ ಸಖನಾಗುವ ಗಂಡು ಅವರು. ಅಂಥ ಸಂಗಾತಿ ಸಿಗಬೇಕೆಂದು ಬಯಸುವಂಥಾ ಕ್ಯಾರೆಕ್ಟರ್ ಅವರು.

ಇಮ್ರೋಜ್ ನಾನು ಬಹುವಾಗಿ ಮೆಚ್ಚುವ ಪುರುಷರಲ್ಲೊಬ್ಬರು. ಅವರ ನಿಷ್ಕಾಮ ಪ್ರೇಮಕ್ಕೆ ನನ್ನದೊಂದು ಸಲಾಂ. ಅಂಥವರ ಸಂತತಿ ನೂರು ಸಾವಿರವಾಗಲಿ.............. ಅಂಥ ಭಾವಕ್ಕೆ ಸಾವಿರದೇ ಇರಲಿ......



–ರೇಖಾಂಬ ಟಿ.ಎಲ್

(ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಕೆಲಕಾಲ ಉಪನ್ಯಾಸಕಿಯೂ ಆಗಿದ್ದ ಶಿವಮೊಗ್ಗಾದ ರೇಖಾಂಬ ಸಾಹಿತ್ಯ–ಸಂಗೀತಗಳಲ್ಲೂ ಆಸಕ್ತಿ ಹೊಂದಿದವರು)

ಬೃಹದಾಕಾರದ ಹೆಜ್ಜೆಯ ನನ್ನ ದಾದಾ



ನನ್ನ ಅತ್ಯಂತ ನೆಚ್ಚಿನ ಪುರುಷ ಯಾರು ಅಂತ ತುಂಬ ಯೋಚಿಸಿದ ನಂತರವೂ ಮನಸ್ಸಿನಲ್ಲಿ ಗಟ್ಟಿಯಾಗಿ ನಿಂತ ಚಿತ್ರವೆಂದರೆ ನನಗಿಂತ ಸುಮಾರು ಮೂವತ್ತೈದು ವರ್ಷಗಳಿಗೆ ಹಿರಿಯರಾದ, ನಾನು ದಾದಾ ಎಂದು ಕರೆಯುತ್ತಿದ್ದ ನನ್ನ ತಂದೆಯದು. ತಲೆಯಲ್ಲಿ ಗಾಂಧಿ ಟೋಪಿ, ಕಂದು ಬಣ್ಣದ ಕಟ್ಟಿನ ಕನ್ನಡಕ, ಬಿಳೀ ಜುಬ್ಬಾ, ಕಿಸೆಯಲ್ಲೊಂದು ಸಿಲ್ವರ್ ಟಾಪಿನ ಇಂಕು ಪೆನ್ನು. ಧೋತಿಯ ಚುಂಗನ್ನು ಬೆರಳಲ್ಲಿ ತುಸುವೇ ಎತ್ತಿ, ಪಾದಗಳಿಗೆ ಕೊಲ್ಲಾಪುರಿ ಚಪ್ಪಲಿ ಮೆಟ್ಟಿ ಜರಕ್ ಜರಕ್ ಸದ್ದು ಮಾಡುತ್ತ ರಸ್ತೆಯಲ್ಲಿ ನಡೆಯುತ್ತಿದ್ದರೆ, ಎದುರು ಸಿಕ್ಕವರೆಲ್ಲ 'ಗಣಪಯ್ಯಣ್ಣ, ಹೋಗ್ ಬನ್ನಿ' ಅಂತ ಮುಖ ಹಿಗ್ಗಿಸಿ ಅಕ್ಕರೆ ತೋರುವವರೇ.

ಕೆಲ ಕಾಲ ಅಂಗಡಿಯಿಟ್ಟು ವ್ಯಾಪಾರ ನಡೆಸಿದರೂ ನಂತರ ಸ್ವಂತ ಗದ್ದೆಯಲ್ಲಿ ಕೃಷಿಕರಾಗಿಯೇ ಅವರು ತೊಡಗಿಕೊಂಡಿದ್ದರು. ನಾನು ಆರೇಳು ವರ್ಷದವಳಿರುವಾಗ ತಮ್ಮೊಡನೆ ನನ್ನನ್ನೂ ಆಗಾಗ ಗದ್ದೆಗೆ ಕರೆದೊಯ್ಯುತ್ತಿದ್ದರು. ಮಳೆಯಲ್ಲಿ ತೊಯ್ದ ಹಸಿ ಬದುವಿನ ಮೇಲೆ ನಡೆವ ಅವರ ಬೃಹದಾಕಾರದ ಹೆಜ್ಜೆ ಗುರುತಿನ ಮೇಲೆಯೇ ನನ್ನ ಪುಟ್ಟ ಪಾದಗಳನ್ನು ಮೆಲ್ಲಗೆ ಇಡುತ್ತ ಸಮತೋಲನ ಸಾಧಿಸುತ್ತ ನಾನು ಸಾಗುತ್ತಿದ್ದೆ.

ಗಂಡು ಮಕ್ಕಳು ಹುಟ್ಟಿದಾಗಲೆಲ್ಲ ಮುಖ ಆ ಕಡೆ ತಿರುಗಿಸಿ 'ಹೋರಿ ಹುಟ್ಟಿದೆ ಹೋರಿ' ಅಂತ ಕೇಳಿದವರಿಗೆಲ್ಲ ನಿರಾಸೆ ಮೂಡಿಸುತ್ತ, ತೊಟ್ಟಿಲ ಕಂದನ ಬದಿ ಕಣ್ಣು ಹಾಯಿಸದೇ ಬಾಣಂತಿಯ ಆರೋಗ್ಯ ಮಾತ್ರ ವಿಚಾರಿಸಿ ತೆರಳುವ ನನ್ನ ದಾದಾ, ಆಯಿ ಮತ್ತೆ ಮತ್ತೆ ನೆನಪಿಸುವ ಹಾಗೆ, ಐವರು ಅಣ್ಣಂದಿರ ಮೇಲೆ ನಾನು ಹುಟ್ಟುವಾಗ, ಹೆರಿಗೆ ನೋವು ತಿನ್ನುತ್ತಿದ್ದ ನನ್ನ ಆಯಿಯನ್ನು 'ಈ ಸರ್ತಿಯಾದ್ರೂ ಒಂದು ಹೆಣ್ಣು ಹಡಿಯೇ ಮಾರಾಯ್ತೀ'

ಅಂತ ಎಂಥದೋ ಆವೇಶಭರಿತ ದನಿಯಲ್ಲಿ ಅಂದಿದ್ದರಂತೆ. ನಾನು ಭೂಮಿಗೆ ಬರುತ್ತಿದ್ದಂತೆಯೇ ಅತ್ಯುತ್ಸಾಹದಿಂದ ಸ್ಪೆಷಲ್ ಮಿಲ್ಕ್ ಪೇಡಾ ಮಾಡಿಸಿ, ಕುಣಿದಾಡುತ್ತ ಊರ ತುಂಬ ಹಂಚಿದ್ದರಂತೆ.

ಅವರು ನನ್ನನ್ನು ಉತ್ಕಟವಾಗಿ ಹಂಬಲಿಸಿದ್ದು ನಮ್ಮ ಅಜ್ಜಿ ಅಂದುಕೊಂಡ ಹಾಗೆ ಖಂಡಿತಾ ಕನ್ಯಾದಾನದ ಮರ್ಮಕ್ಕಲ್ಲ, ಯಾಕೆಂದರೆ ನಾನು ಪ್ರಕಾಶನನ್ನು ಪ್ರೀತಿಸಿದಾಗ, ನಮ್ಮಿಬ್ಬರ ರೆಜಿಸ್ಟರ್ ವಿವಾಹಕ್ಕೆ ಮೊದಲು ಸಮ್ಮತಿಸಿದವರು ಅವರೇ. ನಂತರ ನಮ್ಮ ಆಯಿ-ಅಜ್ಜಿಯರ ಒತ್ತಡಕ್ಕೆ ಅದು ಸಾಂಪ್ರದಾಯಿಕವಾಗಿಯೂ ನಡೆಯಿತು.

ಅಜ್ಜಿ ಸತ್ತಾಗ ಕಣ್ಣಲ್ಲಿ ಒಂದು ತೊಟ್ಟೂ ನೀರು ಹಾಕದ ನನ್ನ ದಾದಾ, ಐದು ತಿಂಗಳ ಗರ್ಭಿಣಿಯಾದ ನನ್ನನ್ನು ಪ್ರಕಾಶನೊಂದಿಗೆ ಹಳಿಯಾಳದ ಬಾಡಿಗೆ ಮನೆಯಲ್ಲಿ ಬಿಟ್ಟು ಹೋಗುವ ಕ್ಷಣದಲ್ಲಿ, ಪಕ್ಕದ ಮನೆಯ ಇಮಾಮ್ ಶೇಕ್ ದಂಪತಿಯ ಜೊತೆ 'ನಿಮ್ಮ ಮಗಳೇ ಅಂತ ತಿಳೀರಿ' ಅಂತನ್ನುವಾಗ ಉಕ್ಕಿ ಬಂದ ಕಣ್ಣೀರನ್ನು ಮರೆಯಲ್ಲೇ ವರೆಸಿಕೊಂಡಿದ್ದರು.

ಬಹಳ ದಿನಗಳ ಅನಾರೋಗ್ಯದ ನಂತರ ತೀರಾ ಜೀವ ಬಿಡುವಾಗ, ಬದಿಯಲ್ಲೇ ಕೂತ ನಮ್ಮ ಆಯಿಯ ಕಿವಿಗೆ ಬೀಳುವಂತೆ ಕ್ಷೀಣ ಸ್ವರದಲ್ಲಿ ಅವರು 'ಶಾಂತಿ' ಎಂಬ ಒಂದು ಶಬ್ದ ಉಸುರಿದ್ದರಂತೆ. ಇನ್ನೊಂದು ಹೆಣ್ಣಿನ ಹೆಸರು ಕೇಳಿ ಆಯಿ ಒಮ್ಮೆಲೇ ಗಾಬರಿಗೆ ಬಿದ್ದು 'ಶಾಂತಿ? ಯಾವ ಶಾಂತಿ?' ಅಂತ ಅವರ ಮುಖದೆಡೆಗೆ ಬಗ್ಗಿ ಪಿಸುಗುಟ್ಟಿದಳಂತೆ, ಅದರ ಹಿಂದೆಯೇ ಅವರು 'ಸಮಾಧಾನ' ಅಂತ ಉಚ್ಛರಿಸಿದರಂತೆ. ಆಯಿಗೂ ಇದು ಬದುಕಿಗೆ ಸಂಬಂಧಪಟ್ಟ 'ಶಾಂತಿ' ಅಂತ ತಿಳಿದು ಇದ್ದಲ್ಲೇ ಸಮಾಧಾನವಾಗಿತ್ತು. ನನ್ನ ಬದುಕಿಗೆ 'ಶಾಂತಿ -ಸಮಾಧಾನ' ಈ ಎರಡು ಪದಗಳನ್ನು ನೀಡಿದ ನನ್ನ ದಾದಾನ ಆ ಬೃಹದಾಕಾರದ ಹೆಜ್ಜೆಗಳು ನನ್ನನ್ನೀಗಲೂ ಕಾಡುತ್ತಿವೆ.


-ಸುನಂದಾ ಕಡಮೆ



(ಹುಬ್ಬಳ್ಳಿಯಲ್ಲಿ ನೆಲೆಸಿರುವ ಸುನಂದಾ ಕನ್ನಡದ ಗಮನಾರ್ಹ ಕತೆಗಾರ್ತಿ ಮತ್ತು ಕವಯತ್ರಿಯಾಗಿದ್ದಾರೆ)

ಪ್ರೇಮ ಕಥೆ-೧

ಜಾತಿ ಧಿಕ್ಕರಿಸಿದ ಸುಖ-ಸಂತೋಷಗಳು!



ಜಾತಿ ಮೀರಿದ ಪ್ರೀತಿಗೆ ಎಂತಹಾ ಶಕ್ತಿ ಇದೆ ಅಂತ ನನಗೆ ಗೊತ್ತಾಗಿದ್ದೇ ರೋಹಿತ್ ಸಿಕ್ಕ ಮೇಲೆ. ಜಾತಿ ಮೀರುವುದೆಂದರೆ ನಂನಮ್ಮ ಸಂಸ್ಕೃತಿಗಳ ಎಲ್ಲೆ ಮೀರಿ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುವ ಅಪಾಯವನ್ನು ಆಹ್ವಾನಿಸುವುದು ಎಂಬ ಮಾತು ಜಾತಿಯಷ್ಟೇ ಸುಳ್ಳೆಂಬುದು ನನ್ನ ಅನುಭವವೇ ಹೇಳುತ್ತದೆ. ಈ ಅರ್ಥದಲ್ಲಿ ಜಾತಿಯನ್ನು ಮೀರುವುದೆಂದರೆ ಸುಳ್ಳನ್ನು ಧಿಕ್ಕರಿಸಿದಂತೆಯೇ. ನನ್ನ ಈ ಇಂತಹ ನಿರ್ಧಾರದಿಂದ ನನಗೆ ನನ್ನನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಬಲ್ಲ, ನಾನು ಹೇಳುವ ಮುನ್ನವೇ ನನ್ನ ಮನಸ್ಸನಲ್ಲಿರುವುದನ್ನು ಹೇಳಬಲ್ಲ, ಅದನ್ನು ಸಹಾನುಭೂತಿಯಿಂದ ಕಾರ್ಯಗತಗೊಳಿಸಬಲ್ಲ ಸಂಗಾತಿ ನನಗೆ ಸಿಕ್ಕಿದ್ದಾನೆ.

ನಾನು ಮದುವೆಯಾಗುವ ಹೊತ್ತಿಗೆ, ಅದಾಗಲೇ ಶಿಕ್ಷಕ ವೃತ್ತಿಯಿಂದ ನಿವೃತ್ತರಾಗಿದ್ದ ನನ್ನ ತಂದೆ ಬೋಧಿಸುವುದನ್ನೇ ಆಚರಿಸುವ ಮನಸುಳ್ಳವರು, ಬೇರೆ ಜಾತಿಯ ಹುಡುಗನನ್ನ ಪ್ರೀತಿ ಮಾಡಿದ್ದನ್ನ ಗೌರವಿಸಿದ ಅಪ್ಪ 'ತಾಳ್ಮೆಯಿಂದಿರು ಮದುವೆ ಮಾಡ್ತೀನಿ' ಅಂದವರು. ಅಲ್ಲದೇ 'ಜಾತಿ ಇಲ್ಲ ಅಂತ ಭಾಷಣ ಮಾಡ್ತಿದ್ದೆ, ಈಗ ನನ್ನ ಮಗಳಿಗೆ ಅಂತರ್ಜಾತಿ ಮದುವಿ ಮಾಡಿದೀನಿ ಅಂತ ಹೇಳ್ತೀನಿ' ಅಂತನೂ ಹೇಳಿದ್ರು, ಆ ಮಾತನ್ನ ಈಗಲೂ ನೆನೆದು ಪುಳಕಗೊಳ್ಳುತ್ತೇನೆ. ಆದರೆ 'ನಮ್ಮ ಪದ್ಧತಿ, ಆಚಾರ, ವಿಚಾರ, ಊಟ, ಎಲ್ಲಾ ಬೇರೆನೆ, ನಿನಗೆ ಹೊಂದಿಕೊಳ್ಳಲು ಕಷ್ಟ ಆಗುತ್ತಲ್ಲಾ !' ಎಂದಾಗ 'ಹಾಗೇನು ಆಗಲ್ಲ ಬಿಡಪ್ಪ' ಎಂದರೂ ನನ್ನೊಳಗೆ ಆತಂಕ ಇದ್ದದ್ದು ನಿಜ. ಇದೇ ಮಾತನ್ನ ರೋಹಿತ್‌ಗೆ ಕೇಳಿದಾಗ 'ಹಾಗೆಲ್ಲಾ ಏನೂ ಇಲ್ಲ, ಹಬ್ಬಗಳಿಗೆ ಅಪರೂಪಕ್ಕೆ ಊರಿಗ್ ಬಂದ್ ಹೋಗ್ತೀವಿ, ನೀನೇನು ತಲೆ ಕೆಡಸ್ಕೋಬೇಡ' ಎಂದಾಗ ಕೊಂಚ ನಿರಾಳ.

ನನ್ನ ಮನೆಯ ಹಾಗೆಯೇ ಅವರ ಮನೆಯಲ್ಲೂ ಯಾವುದೇ ತಕರಾರು ಇಲ್ಲದೇ ಮದುವೆಗೆ ಒಪ್ಪಿ, ಈಗ ನಮಗೊಬ್ಬಳು ಪುಟ್ಟ ಕಂದ. ಗಂಡನ ಮನೆಯಲ್ಲಿ ನಾನೇನೂ ಅವರಿಗೆ ಹೊಂದಿಕೊಳ್ಳುವ ಪ್ರಮೇಯ ಬರಲೇ ಇಲ್ಲ. ಅವರೇ ನನಗೆ ಹೊಂದಿಕೊಂಡರು ಎಂದರೆ ಉಚಿತ ಎನಿಸುತ್ತದೆ. ಪೂಜೆ ಪುನಸ್ಕಾರಗಳಲ್ಲಿ ನಮ್ಮಿಬ್ಬರಿಗೂ ಆಸಕ್ತಿ ಇಲ್ಲ. ಅವರ ಮನೆಯಲ್ಲಿ ತಿರುಪತಿ ತಿಮ್ಮಪ್ಪನ ಒಕ್ಕಲು, ತಿಮ್ಮಪ್ಪನ ಒಂದು ಹಳೆಯ ಚಿಕ್ಕ ಫೋಟೋ ಬಿಟ್ಟರೆ, ಪ್ರತ್ಯೇಕ ಜಗುಲಿಯಾಗಲೀ, ದೇವರ ಮನೆಯಾಗಲೀ ಇಲ್ಲ. ವಾರಕ್ಕೊಮ್ಮೆ ದೀಪ ಹಚ್ಚುವ ಮಟ್ಟಿಗೆ ಮಾತ್ರ ಭಕ್ತಿ. ಹಾಗಾಗಿ ಆ ಕಷ್ಟ ಕೂಡ ಇಲ್ಲ. ಉತ್ತರ ಕರ್ನಾಟಕದ ನಾನು ಹುಣ್ಣಿಮೆ, ಅಮಾಸ್ಯೆಗೂ ಕರಿಗಡುಬು, ಹೋಳಿಗೆ, ವಡೆ, ತಿಂದು ಅಭ್ಯಾಸ ಇದ್ದವಳಿಗೆ ಇಲ್ಲಿ ಪೂರ್ತಿ ನಿರಾಸೆ, ಇವರ ಮನೆಯಲ್ಲಿ ಹಬ್ಬ ಮಾಡದಿದ್ದರೂ ಹಬ್ಬದ ಹೆಸರಿಲ್ಲಿ ಕುರಿ ಕೋಳಿಯನ್ನು ಹೊಟ್ಟೆಗೆ ಸೇರಿಸ್ತಾನೆ ಇರ್ತಾರೆ!

ನಮ್ಮಿಬ್ಬರು ನಾದಿನಿಯರಲ್ಲಿ ಕಿರಿಯವಳು ವಸುಮತಿ, ಅದಮ್ಯ ಉತ್ಸಾಹದ ಚಿಲುಮೆ. ಒಂದು ಕ್ಷಣವೂ ಸುಮ್ಮನಿರದೇ ಮಾತನಾಡುವ ಸ್ವಭಾವ. ನಮ್ಮನೆ ಬಗ್ಗೆ ನಿನಗೇನೆ ಬೇಸರ ಆದ್ರೂ ನನಗೆ ಹೇಳು ಎನ್ನುವ ಸ್ನೇಹಿತೆಯ ಥರ. ಮೈದುನ ತನ್ನ ಕೆಲಸದಲ್ಲಿ ಬ್ಯುಸಿ ಇದ್ದರೂ ಸಾಹಿತ್ಯದಲ್ಲಿ ಆಸಕ್ತಿ ಇಟ್ಟುಕೊಂಡ ನಿರುಪದ್ರವಿ. ಇನ್ನೊಬ್ಬ ಭಾವ ವಾಸು ಅಂತರ್ಜಾತಿ ವಿವಾಹ ಪ್ರೋತ್ಸಾಹಿಸಬೇಕು ಅನ್ನುವ ಕಾರಣಕ್ಕೆ ಅವರ ಗೆಳೆಯರನ್ನ, ಸಂಬಂಧಿಕರನ್ನ ನಮ್ಮ ಮದುವೆಗೆ ಕರೆತಂದಿದ್ದ ಮತ್ತು ಈಗಲೂ ತಮ್ಮೆಲ್ಲ ಸಾಮಾಜಿಕ ಸಮಾರಂಭಗಳಿಗೆ ವಿಶೇಷ ಆಹ್ವಾನ ನೀಡುವ ವಿಶಾಲ ಹೃದಯಿ. ನಮ್ಮಾವ ನಿವೃತ್ತ ಶಿಕ್ಷಕರಾಗಿದ್ದರೂ ಕೃಷಿಯನ್ನೇ ಪ್ರೀತಿಸುವ ಸಂತ, ಇವೆಲ್ಲಾ ಉದಾಹರಣೆಗಳು ಏಕೆಂದರೆ ಸಂಸ್ಕೃತಿ, ಆಚಾರ ವಿಚಾರಗಳ ಅಡೆತಡೆ, ನಮ್ಮ ಬದುಕಿಗಂತೂ ಆಗಿಲ್ಲ,

ಇನ್ನೊಂದು ವಿಚಾರ. ಇಂದಿರಾಗಾಂಧಿಯ ಕೇಶವಿನ್ಯಾಸದ ಅಭಿಮಾನಿಯಾದ ನಾನು ರೋಹಿತ್‌ಗೆ ಅದನ್ನು ಹೇಳಿದಾಗ 'ಅದ್ಕೇನಂತೆ ಮಾಡಸ್ಕೋ' ಎಂದು ಹೇರ ಕಟ್ ಮಾಡಿಸಿ, ಗಂಡನ ಮನೆಯ ಪುಟ್ಟ ಹಳ್ಳಿಗೆ ಕರೆದುಕೊಂಡು ಹೋದಾಗಲೂ ಓಣಿಯವರಾಗಲೀ, ಅತ್ತೆ-ಮಾವ, ಏನೂ ಅನ್ನದೇ 'ನಿನ್ಗ್ ಇದೇ ಚೆನ್ನಾಗ್ ಕಾಣುತ್ತೆ 'ಅಂತ ಹೇಳಿದ್ದುಂಟು. ನನ್ನ ಸಂಗಾತಿಯ ಸಂಬಂಧಿಕರಾಗಲೀ, ಸ್ನೇಹಿತರಾಗಲೀ ನಮ್ಮನ್ನು 'ಅನ್ಯ'ರಂತೆ ನೋಡಿದ್ದೇ ಇಲ್ಲವೆಂದು ಹೇಳಬಹುದು.

ಗಂಡು ಹೆಣ್ಣು ಎರಡೇ ಜಾತಿ, ಎಂದು ನಂಬಿದ ನಾವು ನಮ್ಮ ಮಗಳ ಜನನ ಪ್ರಮಾಣ ಪತ್ರದಲ್ಲಿ ಜಾತಿ ನಮೂದಿಸಿಲ್ಲ. ಧರ್ಮದ ಕಾಲಂನಲ್ಲಿ ಮಾನವ ಧರ್ಮ ಎಂದು ನಮೂದಿಸಿದ್ದೇನೆ ಎಂದು ರೋಹಿತ್ ನನಗೆ ತಿಳಿಸಿದಾಗ ನನ್ನ ಮಗಳು ಹುಟ್ಟಿದಾಗ ಅದ ಸಂತೋಷಕ್ಕಿಂತ ಹೆಚ್ಚು ಸಂತೋಷ ಪಟ್ಟಿದ್ದೇನೆ. ನಮ್ಮ ಮದುವೆಯ ಬಗ್ಗೆ ಹೆಮ್ಮೆ ಪಟ್ಟಿದ್ದೇನೆ. ನನಗೆ ಬೇಕಿರುವುದು ಪ್ರೀತಿ ಮತ್ತು ಸ್ವಾತಂತ್ರ್ಯ ಮಾತ್ರ. ಅದು ನನಗೆ ಸಿಕ್ಕಿದೆ ಅದಕ್ಕೆ ನಮ್ಮ ಮುಕ್ತ ಪ್ರೀತಿಯೇ ಬಲ. ಇದಕ್ಕಿಂತ ಇನ್ನೇನು ಬೇಕು ಸಂತೋಷದಿಂದಿರಲು?

-ಸುಜಾತ ತಳವಾರ



(ಮೂಲತಃ ಹಾವೇರಿ ಜಿಲ್ಲೆಯುವರಾದ ಸುಜಾತ ಸಮಾಜಕಾರ್ಯ ಮತ್ತು ಕನ್ನಡ ಸಾಹಿತ್ಯದ ಸ್ನಾತಕೋತ್ತರ ಪದವೀಧರರಾಗಿದ್ದು, ಈಗ ಹಾಸನ ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರ ನಿರ್ವಾಹಕಿಯಾಗಿ ಕೆಲಸ ಮಾಡುತ್ತಿದ್ದಾರೆ)

ಪ್ರೇಮ ಕಥೆ-೨

ನೆನಪಿನ ಮರಕ್ಕೆ ಬೊಗಸೆ ನೀರು....



ಹದಿಮೂರು ವರ್ಷಗಳ ಹಿಂದಿನ ಮಾತು.

ನನ್ನ ಬದುಕಿನ ಆಯತಪ್ಪಿ ಕತ್ತಲೆ ಕವಿದಿದ್ದ ದಿನಗಳು....

ಸುಮಾರು ಹದಿನೈದು ವರ್ಷಕ್ಕೂ ಮಿಕ್ಕಿ ನನ್ನೊಂದಿಗೆ ಮೈಸೂರಿನ ರಂಗಾಯಣದಲ್ಲಿ ಗೆಳೆಯನಾಗಿ, ಸಹೋದ್ಯೋಗಿಯಾಗಿ ಬದುಕಿನ ಸಂಗಾತಿಯಾಗಿದ್ದ, ಬೀದರ್‌ನ ಬಸವರಾಜ ಕೊಡಗೆ ಅಕಾಲಿಕ, ಅನಿರೀಕ್ಷಿತ ಸಾವಿಗೆ ಶರಣಾಗಿ.... ನಾನು ಒಬ್ಬಂಟಿಯಾಗಿದ್ದೆ. ನನ್ನ ಮುಂದಿನ ಬದುಕು ದಿಕ್ಕು ತೋಚದಂತಾಗಿತ್ತು. ನನ್ನ ಮನ 'ನಾನೂ ಸಾವಿನ ಮನೆಯ ಕದ ತಟ್ಟಲು' ಹಾತೊರೆಯುತ್ತಿತ್ತು, ಕಣ್ಣಿಗೆ ಕಾಣುವುದು ಬೇಡವಾಗಿತ್ತು, ಕಿವಿಗೆ ಕೇಳುವುದು ಬೇಡವಾಗಿತ್ತು. ದೇಹ ಮನಸ್ಸು ಸಂಪೂರ್ಣ ನಿತ್ರಾಣವಾಗಿತ್ತು.

ಕತ್ತಲು ಕವಿದಿದ್ದ ನನ್ನ ಮನದ ಕೋಣೆಯೊಳಗೆ ಎಲ್ಲರೂ.... ಎಲ್ಲರೂ..... ತಮಗೆ ಆಗಿದ್ದ ದುಃಖ ದುಗುಡವನ್ನು ಅದುಮಿಟ್ಟು, ಬೆಳಕಿನ ಕೋಲು ಬೀರಲು ಪ್ರಯತ್ನಿಸುತ್ತಿದ್ದರು. ಎಲ್ಲರ ಒತ್ತಾಸೆಯಿಂದಾಗಿ, ಸಾವಿನ ಸೂತಕವನ್ನು ಬದಿಗೆ ಸರಿಸಿ ರಂಗಾಯಣಕ್ಕೆ ಮರಳಿ ಬಂದಿದ್ದೆ. ಎಲ್ಲರೊಂದಿಗಿದ್ದರೆ, ಅಷ್ಟಿಷ್ಟಾದರೂ ಸಮಾಧಾನ ಸಾಧ್ಯವಾಗಬಹುದೆಂಬುದು ಸಹಜವಾಗಿಯೇ ಎಲ್ಲರ ಅನಿಸಿಕೆ, ಅಭಿಪ್ರಾಯವಾಗಿತ್ತು. ಘೋರವಾದ ಸಿಡಿಲು ಬಡಿದು ನೆಲಕಚ್ಚಿದ್ದರೂ ಸಹೋದ್ಯೋಗಿಗಳ ಸಲಹೆ, ಸಹಕಾರ, ಪ್ರೀತಿ ವಿಶ್ವಾಸ ಮುಂದಿನ ಹದಿನೈದು-ಇಪ್ಪತ್ತು ದಿನಗಳಲ್ಲೇ ಮತ್ತೆ ಬಣ್ಣ ಹಚ್ಚಿದೆ. ಶೇಕ್ಸ್‌ಪಿಯರ್ ತನ್ನ ನಾಟಕವೊಂದರಲ್ಲಿ ನುಡಿವ ಮಾತಂತೆ, ನುರಿತ ನಟಿಯಂತೆ ನನ್ನೆಲ್ಲಾ ದುಃಖ ದುಗುಡವನ್ನು ಅದುಮಿಟ್ಟು ನಕ್ಕು ನಗಿಸುವ ಪ್ರಹಸನವೊಂದರಲ್ಲಿ ಪಾತ್ರ ಮಾಡಿದೆ. ನಾನೂ ನಕ್ಕೆ; ಮುಂದೆ ಕೂತ ಜನಸ್ತೋಮವನ್ನು ನಕ್ಕು ನಗಿಸಿದೆ.

ಗೆಳೆಯರು, ರಂಗತಂಡಗಳು 'ನೆನಪಿನ ಕಾರ್ಯಕ್ರಮ'ಗಳನ್ನು ಹಮ್ಮಿಕೊಳ್ಳುತ್ತಿದ್ದರಾದರೂ, ನನ್ನವನ ನೆನಪಿಗಾಗಿ ನಾನೇನಾದರೂ ಮಾಡಬೇಕೆಂಬ ಹಂಬಲ ನನ್ನೊಳಗೆ ಹುಟ್ಟತೊಡಗಿತು. ಆ ಹಂಬಲದ ಒಡಲಲ್ಲಿ ಚಿಗುರೊಡೆದದ್ದೇ 'ಏಕವ್ಯಕ್ತಿ ಪ್ರಸ್ತುತಿ'. ಕರ್ನಾಟಕದ ಹಲವು ನಟನಟಿಯರು ಹಲವು ಕಾರಣಗಳಿಗಾಗಿ ಏಕವ್ಯಕ್ತಿ ಪ್ರದರ್ಶನ ಪ್ರಯೋಗ ಮಾಡುತ್ತಿದ್ದುದನ್ನು ನಾನು ಕಂಡಿದ್ದೆ ಕೇಳಿದ್ದೆನಾದರೂ, ನನಗೂ ಒಬ್ಬಂಟಿಯಾಗಿ ಪ್ರದರ್ಶನ ನೀಡಬೇಕೆಂದು ಅನಿಸಿದ್ದು, ನನ್ನವನ ಬಿಡದೇ ಕಾಡುವ ನೆನಪಿನಿಂದಾಗಿ ಮಾತ್ರ. ರಂಗಕರ್ಮ ಮಾಡುತ್ತಲೆ, ರಂಗಕರ್ಮಿಯಾದ ನನ್ನ ಕೈ ಹಿಡಿದು ಬದುಕಿನ ದಾರಿಯನ್ನು ಕ್ರಮಿಸುವ ಮೊದಲೇ ಕೈಬಿಟ್ಟು ಕಣ್ಣು ಮುಚ್ಚಿದ ಪತಿಯ ನೆನಪಿನ ಮರಕ್ಕೆ ರಂಗಕರ್ಮದ ಮೂಲಕವೇ ಬೊಗಸೆ ನೀರೆರೆದೆ. ಅಂದು ನಾನು ನನ್ನ ಸಮಾಧಾನಕ್ಕಾಗಿ ಮಾಡಬಹುದಾಗಿದ್ದುದು ಅಷ್ಟೇ. ಮಾಡಿದೆ. ಅಂದು ನಾನೆರೆದ ಬೊಗಸೆ ನೀರು ನನ್ನೊಳಗೇ ಮುರುಟಿ ಮುದುಡಿ ಹೋಗಿದ್ದ ಬದುಕಿನ ಗಿಡವನ್ನು ನನಗರಿವಿಲ್ಲದಂತೆಯೇ ಚಿಗುರಿಸತೊಡಗಿತ್ತು.

ರಂಗಭೂಮಿಗೆ ಅದೇನು ಶಕ್ತಿ ಇದೆಯೋ....! ಎಷ್ಟೇ ನೋವಾದರೂ, ಎಷ್ಟೇ ದುಃಖವಾದರೂ, ಎಷ್ಟೇ ಸಂಕಟವಾದರೂ ಬದುಕನ್ನು ಗಟ್ಟಿಗೊಳಿಸತೊಡಗುತ್ತದೆ. ಬದುಕುವ ದಾರಿಗೆ ಕೈ ಮರವಾಗುತ್ತದೆ. ಪಿ. ಲಂಕೇಶರ ಕೊನೆಯ ಕಥೆ 'ಎ ಸೂಯಿಸೈಡ್ ನೋಟ್' ಕಥೆಯನ್ನು ನಟರಾಜ ಹೊನ್ನವಳ್ಳಿ ನನಗಾಗಿ ನಿರ್ದೇಶಿಸಿದರು. ರಂಗಾಯಣದ ನಾಟಕಗಳಲ್ಲಿ ನಟಿಯಾಗಿ ನನ್ನ ಪಾಲಿಗೆ ಬಂದ ಪಾತ್ರಗಳನ್ನು ನಿರ್ವಹಿಸುತ್ತಿದ್ದೆನಾದರೂ.... ಈ ಏಕವ್ಯಕ್ತಿ ಪ್ರದರ್ಶನ ಒಂದು ಸವಾಲೇ ಆಗಿತ್ತು. ಸುಮಾರು ಒಂದು-ಒಂದೂ ಕಾಲಿನ ತಾಸಿನಲ್ಲಿ ಏಕಾಂಗಿಯಾಗಿ ನಟಿಸುವುದು, ನಿರಂತರವಾಗಿದ್ದ ಪತಿಯ ನೆನಪಿನಲ್ಲಿ, ದೇಹ, ಮನಸ್ಸನ್ನು ಹುರಿಗೊಳಿಸಿಕೊಂಡು ರಂಗದ ಮೇಲೆ ನಟಿಸುವುದು ಅಂದಿನ ನನಗೆ ಸುಲಭದ ಮಾತಾಗಿರಲಿಲ್ಲ. ಜೊತೆಗೆ, ನನ್ನೊಳಗೆ ಇದು ನಾನು ಮಾಡಲೇಬೇಕಾದ ಕೆಲಸ ಎಂಬ ಹಂಬಲ, ಸವಾಲುಗಳನ್ನು ಸುಲಲಿತವಾಗಿ ಎದುರಿಸುವ ಧೈರ್ಯ ತಂದುಕೊಟ್ಟಿತ್ತು. ಪ್ರದರ್ಶನ ಯಶಸ್ವಿಯಾಯಿತು. ನನ್ನೊಳಗೆ ಏನೋ ಸಮಾಧಾನ, ಸಣ್ಣದೊಂದು ಶಾಂತತೆ. ಬದುಕಿನ ಬಗ್ಗೆ ಭರವಸೆ, ಇಡುವ ಹೆಜ್ಜೆಯ ಬಗ್ಗೆ ದೃಢತೆ, ಪಾತ್ರದಿಂದ ಪಾತ್ರಕ್ಕೆ ಬದುಕುತ್ತಾ ಹೋದಂತೆ ನಾನು ಒಂಟಿಯಲ್ಲ, ಇವರೆಲ್ಲಾ ನನ್ನವರು ಎಂಬ ಸತ್ಯದ ಅರಿವು ಮೂಡಿಸುತ್ತದೆ. ವ್ಯಕ್ತಿತ್ವವನ್ನು ವಿಕಾಸಗೊಳಿಸುತ್ತದೆ. ಈ ರಂಗಭೂಮಿ ಎಂಬ ಅದ್ಭುತ ಮಾಧ್ಯಮದಿಂದಾಗಿಯೇ ಇಂದಿಗೂ ನಾನು ಉಸಿರಾಡುವಂತಾಗಿದೆ. ನನ್ನದೇ ಬದುಕು ಕಟ್ಟಿಕೊಳ್ಳುವಂತಾಗಿದೆ. ನನ್ನ ಈ ಸ್ಥಿತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಹಂಬಲ ಮುಂದೆ ಇನ್ನೂ ಹಲವು ಏಕವ್ಯಕ್ತಿ ಪ್ರಸ್ತುತಿಗಳನ್ನು ಮಾಡಲು ಪ್ರೇರೇಪಿಸಿತು.

ಚಿದಂಬರರಾವ್ ಜಂಬೆಯವರ ನಿರ್ದೇಶನದಲ್ಲಿ ಲಿಂಗದೇವರು ಹಳೆಮನೆ ರಚಿಸಿದ *ವಾನಪ್ರಸ್ಥ*, ಮಂಜುನಾಥ ಬೆಳಕೆರೆಯವರ ನಿರ್ದೇಶನದಲ್ಲಿ ಚಂದ್ರಕಾಂತ ಕುಸನೂರರು ರಚಿಸಿದ *ಸಕ್ಕೂಬಾಯಿ*, ಶಶಿಧರ ಭಾರಿಘಾಟ್ ಅವರ ನಿರ್ದೇಶನದಲ್ಲಿ ಎಸ್. ರಾಮನಾಥ ರಚಿಸಿದ *ಕಸ್ತೂರಬಾ* ನಾಟಕದಲ್ಲಿ ಅಭಿನಯಿಸಿದೆ. ಇಂದು ಬದುಕಿನ ಈ ಹಂತದಲ್ಲಿ ನಿಂತು ನೋಡುವಾಗ ಈ ಏಕವ್ಯಕ್ತಿ ಪ್ರಸ್ತುತಿಗಳು ಇಂದಿನ ನನ್ನನ್ನು ರೂಪಿಸುವಲ್ಲಿ ಎಷ್ಟೆಲ್ಲಾ ಕೆಲಸ ಮಾಡಿದೆ ಎಂದು ಆಶ್ಚರ್ಯವಾಗುತ್ತದೆ. ನಾನು ಆರಿಸಿಕೊಂಡದ್ದು, ಅಭಿನಯಿಸಿದ್ದು ಎಲ್ಲವೂ ಮಹಿಳಾ ಪ್ರಧಾನವಾದ ಭೂಮಿಕೆಗಳೇ. ಮಹಾಭಾರತದ ಕುಂತಿ, ಮನೆಗೆಲಸದ ಸಕ್ಕೂಬಾಯಿ, ಮಹಾತ್ಮನ ಮಡದಿ ಕಸ್ತೂರಬಾ. ಹಲವು ಹೆಣ್ಣುಗಳ ಒಳಹೊಕ್ಕು ಬಂದ ನನಗೆ ಈ ಹೆಣ್ಣುಗಳು, ಬದುಕಿನಲ್ಲಿ ಬಹಳಷ್ಟನ್ನು ಧಾರೆಯೆರೆದಿದ್ದಾರೆ. ಒಂಟಿಯಾಗಿ, ಸ್ನೇಹಮಯವಾಗಿ, ಸಹನೆಯಿಂದ ಗೋಳುಗಳನ್ನು ಅದುಮಿಟ್ಟು ಬದುಕಲು ಕಲಿಸಿದ್ದಾರೆ. ನನ್ನ ನಟನಾ ಸಾಮರ್ಥ್ಯವನ್ನು ಒರೆಗೆಹಚ್ಚಿ, ನನ್ನ ಅಭಿನಯ ಮಿತಿಗಳ ಪರಿಧಿಯನ್ನು ಒಂದಿಷ್ಟಾದರೂ ವಿಸ್ತರಿಸಿಕೊಳ್ಳುವ ಅವಕಾಶ ಮಾಡಿಕೊಟ್ಟಿದ್ದಾರೆ.

ಪ್ರಸ್ತುತ ಕನ್ನಡ ರಂಗಭೂಮಿ ಚರ್ಚೆಯಲ್ಲಿ ಏಕವ್ಯಕ್ತಿ ಪ್ರಸ್ತುತಿಯ ಮಾತು ಬಂದಾಗ ನನ್ನನ್ನು ಗುರುತಿಸಿ ಮಾತನಾಡುವಂತೆ ಮಾಡಿದೆ, ನನ್ನ ಏಕವ್ಯಕ್ತಿ ಪ್ರಸ್ತುತಿಗಳು. ಇನ್ನೊಂದು ಮಾತು: ಕನ್ನಡ ನಾಟಕ ಸಂದರ್ಭದಲ್ಲಿ ಹೆಣ್ಣಿಗೆ ಪ್ರಧಾನ ಪಾತ್ರ, ಪ್ರಮುಖ ಪಾತ್ರಗಳ ಸಂಖ್ಯೆ ಕಡಿಮೆಯೇ.. ಹೆಣ್ಣಿನ ಅಸ್ತಿತ್ವ, ಸಮಾನತೆ, ಬಯಕೆ, ಬೇಗುದಿ, ಕನಸುಗಳ ಕುರಿತಂತೆ ನಾಟಕಗಳೂ ಕಡಿಮೆಯೇ. ಇಂಥ ರಂಗಸಂದರ್ಭದಲ್ಲಿ, ಹೆಣ್ಣಿನ ಬದುಕನ್ನು ಸಮಾಜಕ್ಕೆ ಸಂವಹಿಸಲು ಈ ಏಕವ್ಯಕ್ತಿ ಪ್ರಸ್ತುತಿ ನಿಜಕ್ಕೂ ಒಂದು ಸೂಕ್ತ ವೇದಿಕೆಯೇ. ಒಬ್ಬ ಹೆಣ್ಣಾಗಿ ಹಲವು ಹೆಣ್ಣುಗಳ ಮೂಲಕ ದಿನದಿಂದ ದಿನಕ್ಕೆ ಪ್ರದರ್ಶನದಿಂದ ಪ್ರದರ್ಶನಕ್ಕೆ ನನ್ನನ್ನೇ ನಾನು ಕಂಡುಕೊಳ್ಳುತ್ತಾ, ಹೆಣ್ಣಿನ ಬಯಕೆ, ಬೇಗುದಿಗಳನ್ನು ಅತ್ಯಂತ ಸಮರ್ಥ ಮಾಧ್ಯಮವೊಂದರ ಮೂಲಕ ಅನಾವರಣಗೊಳಿಸುವ ಏಕವ್ಯಕ್ತಿ ಪ್ರಸ್ತುತಿಯ ಪರಿ ನನಗೆ ಬೆರಗು, ಆಶ್ಚರ್ಯವನ್ನು ತರುತ್ತದೆ.

ಅಂದು ನಾನಿದ್ದ ಸ್ಥಿತಿಯಲ್ಲಿ ನನ್ನವನ ನೆನಪಿಗಾಗಿ ನಾನು ಏನಾದರೂ ಮಾಡಬೇಕೆಂಬ ಹಂಬಲದಿಂದಾಗಿ ಏಕವ್ಯಕ್ತಿ ಪ್ರಸ್ತುತಿಯ ಪ್ರಯೋಗಕ್ಕೆ ಕಾಲಿಟ್ಟೆನಾದರೂ, ನಾನಂದುಕೊಂಡ ಉದ್ದೇಶಗಳನ್ನು ಮೀರಿ ಹಲವಾರು ಫಲಗಳನ್ನು ನೀಡಿದೆ. ನನ್ನ ಪ್ರಸ್ತುತಿಯ ಪ್ರತಿಯೊಂದೂ ಈಗಾಗಲೇ ಹಲವಾರು ಪ್ರದರ್ಶನಗಳನ್ನು ಕಂಡಿದ್ದು, ಇಂದಿಗೂ ಪ್ರದರ್ಶನ ಕಾಣುತ್ತಲೇ ಇರುವುದಾದರೂ, ನನ್ನೊಳಗಿನ ನನ್ನನ್ನು ನಾನೇ ಕಂಡುಕೊಳ್ಳುವಂತೆ ಮಾಡಿದ ಏಕವ್ಯಕ್ತಿ ಪ್ರಸ್ತುತಿಯ ಮತ್ತೊಂದು ಹೊಸ ಪ್ರಯೋಗಕ್ಕೆ ನನ್ನ ಮನಸ್ಸು ಹಾತೊರೆಯುತ್ತಿರುವುದು ಈಗ ನನ್ನ ಅರಿವಿಗೆ ಬರುತ್ತಿದೆ.



(ನೀನಾಸಂನಲ್ಲಿ ರಂಗತರಬೇತಿ ಪಡೆದಿರುವ, ಮೂಲತಃ ದಾವಣಗೆರೆಯವರಾದ ಬಿ.ಎನ್. ಶಶಿಕಲಾ, ಈಗ ಮೈಸೂರಿನ ರಂಗಾಯಣದ ರಂಗತಂಡದ ಹಿರಿಯ ಸದಸ್ಯರು)

ಕಾವ್ಯೋದ್ಯಾನ

ಪಯಣದ ಹಾಡು

ಸೂರ್ಯ ದೇವನ ಗಾಡಿ ಹೋಗಿಯಾಯಿತು ಮುಂದೆ.
ಶಬ್ದ ಶಬ್ದವೂ ಮುಗಿದು ನಿಶ್ಶಬ್ಧವಾಗಿ
ಚೋಟುದ್ದ ಹಗಲ ದಳ ಮಡಚಿ ಬಿದ್ದು
ರಾತ್ರಿಯಾಗಿದೆ ಕಪ್ಪು ಹೊದಿಕೆ ಹೊದ್ದು ೧

ಮನೆಯೆಲ್ಲ ಮಲಗಿದೆ, ನಾ ಎದ್ದು ಕುಳಿತಿರುವೆ
ಕಡ್ಡಿ ಗೀರಿದರೆ ಸೈ, ಭಗ್ಗೆನುವೆನೆಂಬ
ಭಾವ ಬೇಗುದಿ ನೂರು ಕಾದಿವೆ
ಬಿಡಿಸಲಾರದ ಕಡು ಕಗ್ಗಂಟುಗಳ ರಾಶಿ
ಎಳೆವೆನೆನೆ ಸರುಗಂಟು ಎಳೆ ಕಾಣದೆ
ಹುಡುಕುತಿಹೆ ಮೊದಲತುದಿ, ಎಲ್ಲಿದೆ?
ಕಗ್ಗಾಡಿನಲಿ ಬಂದು ನಿಂತಂತಿದೆ ೨

ಹೊತ್ತಾಗಿದೆ, ಪಯಣ ಹೊರಡಬೇಕು,
ಬೆಳದಿಂಗಳಿಲ್ಲ ದಾರಿ ಸವೆಯಬೇಕು,
ಮೊದಲು ದೀಪ ಬೇಕು.
ದೀಪ ಹಚ್ಚಿದ ಲಾಟಾನು ಬೆಳಕಿನಲಿ
ಎಣ್ಣೆ ಮುಗಿಯುದರೊಳಗೆ ನಾವು ನಾವೆಲ್ಲರೂ
ಹೆಗಲುಹೆಗಲಿಗೆ ತಾಕಿ ಜಗಳ ನಗೆ ಚಕಮಕಿ
ಸುಖದುಃಖವಾಡುತ್ತ ಸಾಗಬೇಕು,
ಇನ್ನಾದರೂ ಮನವ ನುಡಿಯಬೇಕು, ೩

ತೊರೆಯಲಾರೆವು ಎಂದೂ ಬುದ್ಧನಂತೆ, ಸರಿಯೆ
ನಮ್ಮಮ್ಮ ಒಡಲಿನಲೆ ಎಲ್ಲ ಒಡಲನೂ ಕಾಂಬ
ಸೂತ್ರವಾದರೂ ಬಂಧನದ ಚಂದ ನೆನಪಿಸಬೇಕು ೪

ಬುದ್ಧದೇಗುಲ ದಾಟಿ ಹೃದಯ ದೇಗುಲವೋ
ತಿರುಗ ಮುರುಗವೊ, ಹೇಗೆ, ತಿಳಿಯಬೇಕು
ದೇವದತ್ತ ಮತ್ತು ಹಂಸ ಹಿಂಸೆಯ ಪಾಠ
ಹೆಣ್ಣು ಕಣ್ಣಲ್ಲಿಯೇ ಓದಬೇಕು. ೫

ಸೂರ್ಯದೇವನ ಗಾಡಿ ಓಡಿಯಾಯಿತು ದೂರ
ಇನ್ನು ನಾಳೆಯವರೆಗೂ ಕತ್ತಲ ಹಾಯಬೇಕು ೬

ಕತ್ತಲಲಿ ಮಾಣಿಕ್ಯ ಕಂಡ ಕ್ಷಣಗಳ ಮೆಲ್ಲ
ಕವನದಲಿ ಸಾಲಾಗಿ ಜೋಡಿಸಿಡಬೇಕು
ದೀಪದೊಳಗಿನ ದೀಪ ಆಗಬೇಕು. ೭



–ವೈದೇಹಿ




ಚಿತ್ರ: ರೂಪ ಹಾಸನ

ಆಂಟೊನಿಯೊ ದನಿಯಲ್ಲಿ ಲೋಹಿಯಾಗಾಗಿ ಪ್ರಾರ್ಥನೆ

ಮಹನೀಯರೆ ಮಹಿಳೆಯರೆ
ನೀವೀಗ ವಾರಸುದಾರರು
ಈ ಸುಂದರ ದ್ರಾಕ್ಷಿ ತೋಟಕ್ಕೆ
ಸುವಾಸನೆಯುಕ್ತ ಗಾಳಿಗೆ
ರಸದುಂಬಿ ಬಿರಿವ ಫಲಗಳಿಗೆ

ಸಾವುಮೆಟ್ಟಿದ ದಾರಿಯಲಿ
ಆತ್ಮ ಹಾಕುವ ಹೆಜ್ಜೆ
ಅಯೋಮಯದ ಜಗತ್ತಿನಲಿ
ಅಲ್ಲೋಲಕಲ್ಲೋಲ ಸದ್ಗುಣಿಯ ಪ್ರಾಣ



ಚಿತ್ರ: ರೂಪ ಹಾಸನ



ದಿಕ್ಕೆಟ್ಟ ದರಿದ್ರರೆ ಸುಖಿಗಳು
ನೀವು, ದಶದಿಕ್ಕುಗಳಿಂದ ನೆರವು
ನಿಮಗೆ ಕರುಣೆಯ ಹೊರೆ
ನಿಮ್ಮ ಬೆನ್ನಮೇಲೆ

ಸತ್ತಿದ್ದಾನೆ ಗೆಳೆಯ ವಿದಾಯಕ್ಕು ಸಮಯವಿಲ್ಲದೆ
ನಿಮ್ಮದೇ ಅವನ ಎಲ್ಲ ಸಂಪತ್ತು
ಸೊಕ್ಕಿ ಮೆರೆವ ಅರಸೊತ್ತಿಗೆಯ ತೊಂಡು
ಮೇವಿನ ಸುಖವ ಹಿಡಿಯಿರಿ

ಮೋಚಿಗಳೆ ಕಾರ್ಮಿಕರೆ
ನನ್ನೊಲುಮೆಯ ಬಡ ಹೆಂಗಸರೆ
ಬೆವರ ಬೆಳ್ಳುಳ್ಳಿ ವಾಸನೆಯವರೆ
ಎಲ್ಲಿದ್ದೀರಿ ಬನ್ನಿ, ಹೊತ್ತುಕೊಳ್ಳಿ ಹೊಸ ಆಸ್ತಿ.
ಕನಸುಗಾರನ ಆತ್ಮ ಮಿನುಗುವುದು ದೂರದಲಿ
ಮೊರೆಯುವ ಕಡಲಿನ ಶಬ್ದವ ಆಲಿಸಿ
ಪ್ರಕ್ಷುಬ್ಧತೆಗಾಗಿ, ಮತ್ತೊಮ್ಮೆ ಪ್ರಾರ್ಥಿಸಿ
ಉತ್ತರದ ಬೆಳ್ಳಿಚುಕ್ಕಿಗೆ

–ಆರ್ ತಾರಿಣಿ ಶುಭದಾಯಿನಿ

ಒಂದಾನೊಂದು ಕಾಲದಲ್ಲಿ.....

ಬೆಟ್ಟವಾಗಿದ್ದೆ ಗುಡ್ಡವಾಗಿದ್ದೆ
ಬಗೆದು ಹಾಕಿದರು
ನದಿಯಾಗಿದ್ದೆ ಹೊಳೆಯಾಗಿದ್ದೆ
ಬತ್ತಿಸಿ ಬಗ್ಗಡವಾಗಿಸಿದರು

ಮರವಾಗಿದ್ದೆ ಗಿಡವಾಗಿದ್ದೆ
ಕತ್ತರಿಸಿ ಬಿಸುಟರು
ಮೊಗ್ಗಾಗಿದ್ದೆ ಹೂವಾಗಿದ್ದೆ
ಹೊಸಕಿ ಹಾಕಿದರು

ಇರುವೆಯಾಗಿದ್ದಾಗ
ಮೆಟ್ಟಿ ಮಣ್ಣಾಗಿಸಿದರು
ಮೀನಾಗಿದ್ದಾಗ
ಬಲೆಬೀಸಿ ಹಿಡಿದರು
ಆಮೆಯಾಗಿದ್ದಾಗ
ಚಿಪ್ಪೊಡೆದು ಮಾರಿದರು

ಹಕ್ಕಿ ಇಣಚಿ ಮೊಲ ಜಿಂಕೆ
ಏನೆಲ್ಲ ಆಗಿದ್ದೆ...
ಗೋಣು ಮುರಿದರು
ಹುಲಿ ಸಿಂಹ ಕರಡಿ ಆನೆ
ಅಟ್ಟಾಡಿ ಮಣಿಸಿದರು

ಮರ್ಕಟಮನ ಚಿಗುರಿ
ರೆಂಬೆಕೊಂಬೆ ಹಾರಿ ತೂಗಾಡಿ
ಕೂತು ನಿಂತು ನಡೆದು
ಗೊಂದಲದ ಗೂಡಾಗಿ
ಪಾಡೆ ಹಾಡಾಗಿ ಕಾದಿರುವೆ
ಇಲ್ಲವಾಗಲು ದಿಟವಾಗಿ......



–ಸವಿತಾ ನಾಗಭೂಷಣ




ವಿನಯಾ ಒಕ್ಕುಂದ ಅವರ ಎರಡು ಕತೆಗಳು

ಐದು ಮಿನಿಗತೆಗಳು

(ಕನ್ನಡ ಅಧ್ಯಾಪಕಿಯಾಗಿ ಧಾರವಾಡದಲ್ಲಿ ನೆಲೆಸಿರುವ ಡಾ. ವಿನಯಾ ಕನ್ನಡದ ಗಣ್ಯ ಕತೆಗಾರ್ತಿ, ಕವಯತ್ರಿ ಮತ್ತು ಸಾಹಿತ್ಯ ಚಿಂತಕಿ)

ಬೆರಗು



ಚಿತ್ರ: ರೂಪ ಹಾಸನ

ತುಂಬ ವರ್ಷಗಳ ನಂತರ ಮತ್ತು ಅಚಾನಕ್ಕಾಗಿ ದೈವ ಅವರಿಬ್ಬರನ್ನೂ ಒಟ್ಟಿಗೆ ತಂದಿತ್ತು. ಅದೂ ಇಡೀ ರಾತ್ರಿಯನ್ನು ಮುಂದೆ ಹರವಿ. ಹಗಲ ಹಗೇವಿನಲ್ಲಿ ಎಲ್ಲರೆದುರು ಆಡಿಕೊಂಡ ಮಾತುಗಳಿಗಿಂತ ತೀರಾ ಬೇರೆಯದೇ ಆದ, ಎಂದಿನಿಂದಲೋ ಒಳಗೆ ಕಿಲುಬುಗಟ್ಟಿದ ಏನನ್ನೋ ಎತ್ತಿಹಾಕಿ ಹಗುರವಾಗುವ ಅನೂಹ್ಯ ಭಾವನೆಯೊಂದು ಅವರ ಮನಸ್ಸನ್ನು ತುಂಬಿತ್ತು. ಬೆಳೆದಿದ್ದ ಪಾಚಿಯನ್ನು ಕಿತ್ತೆಸೆದು ತಿಳಿ ತಿಳಿ ನೀರಿನಲ್ಲಿ ಮುಖ ನೋಡಿಕೊಳ್ಳಬೇಕೆಂಬ ಉಮೇದಿಯಂತಹ ಭಾವ ಸುಳಿಯಿತು. "ಮಲಗುತ್ತೀಯೇನೆ ? ರಾತ್ರಿಯಿಡೀ ಪ್ರಯಾಣ. ಮಲಗಿಕೋ. ಮತ್ತೆ ನಾಳೆಯೇ ಹೊರಡಬೇಕಲ್ಲ..." ಅವಳ ಮಾತಿನ ಮಾರ್ದವದಲ್ಲೇ ಜೀವ ತೊಯ್ದು ಹೋಗಿತ್ತು. ಅವಳ ಕೈ ಬೆರಳು ದಟ್ಟ ಕೂದಲುಗಳ ಮೆಲ್ಲಗೆ ನೇವರಿಸುತ್ತಿದ್ದರೆ ಎಂತದೋ ಹಿತ. ಮುರಿದ ಎಲುಬನ್ನು ಕೂಡಿಸಿ ಕಟ್ಟಿದಂತ ನೋವಿನ ಮೆಲುತನವೊಂದು ಕೋಣೆಯಿಡೀ ಆವರಿಸಿಕೊಂಡಿತ್ತು.


ಹಂಚಿಕೊಳ್ಳಲಿಕ್ಕೆ ಎಷ್ಟೆಲ್ಲ ಇತ್ತು – ಮುಖ್ಯ... ಬದಲಾದ ಗಂಡನ ಬಗ್ಗೆ. ಅವನ ಹೊಸ ಸಿಡಿಮಿಡಿಯ ಬಗ್ಗೆ. ಬದಲಾಗಿದ್ದು ಅವನೊಬ್ಬನೆಯೇ? ಎಲ್ಲರೂ ಹೀಗೆಯೇ? ನಾನೂ ಬದಲಾಗಿದ್ದೇನೆಯೇ? ನಡುವಯಸ್ಸಿನ ಉಪದ್ವ್ಯಾಪಿ ಸ್ಥಿತಿಯಲ್ಲಿ ಏನೂ ತೋಚುತ್ತಿಲ್ಲವಲ್ಲ ಅದರ ಬಗ್ಗೆ. ಅವನ ಚಟಗಳು, ನನ್ನ ಕಿರಿಕಿರಿ, ಮಧ್ಯ ಕುಣಿಯುವ ಅನಗತ್ಯ ಗುಮಾನಿಗಳು, ಎಲ್ಲ ಇದ್ದು ದಿಕ್ಕೆಟ್ಟು ಮೊಬೈಲ್‌ನಲ್ಲಿ ಮುಖ ಹುದುಗಿಸಿ ಆಸರೆ ಹುಡುಕುವ ಮಕ್ಕಳು... ಹೀಗೆ ... ಬಹುಶ: ಇಬ್ಬರಿಗೂ. ದರಿದ್ರ ದಣಿವು. ಮಾತಾಡಿಕೊಳ್ಳಲು ಅಲ್ಲ ಮಾತು ಆರಂಭಿಸಲೂ ಆಗಲಿಲ್ಲ.

ಬೆಳಗಾಯಿತು. ಎಂದಿನಂತಲ್ಲದ ಬೆಳಗು. ಅವಳ ಕೈ ಬೆರಳುಗಳು ಇನ್ನೂ ಇವಳ ನೆತ್ತಿಯಲ್ಲೇ ನಿದ್ದೆ ಹೋದ ಬೆಳಗು. ಹೊದಿಕೆಗಳನ್ನು ಮಡಚುತ್ತ ಹೇಳಿದಳವಳು. "ನೋಡು, ಸಣ್ಣ ಪುಟ್ಟದ್ದಕ್ಕೆಲ್ಲ ತಲೆ ಕೆಡಿಸಿಕೊಳ್ಳಬೇಡ. ಧೈರ್ಯಗೆಡಲೂ ಬೇಡ. ಎಲ್ಲವೂ ನಿನ್ನ ಕೈಯೆಳೆಯಲ್ಲೇ ಹೆಣೆದುಕೊಂಡಿವೆಯೆಂಬ ಭ್ರಮೆ ಬೇಡ. ನಿಂಗೆ ನಿನ್ನ ಬಗ್ಗೆಯೂ ನಿಗಾ ಇರಲಿ. ಮಕ್ಕಳಿನ್ನು ಸಣ್ಣವು..." ಹಿಡಿದಿದ್ದ ಹೊದಿಕೆಯನ್ನು ಜೋರಾಗಿ ಜಾಡಿಸಿದಳು... ಗಾಂಧಾರಿಯ ಸಂಗತಿ ಗೊತ್ತಿದ್ದ ಮೇಲೂ ಕಣ್ಣಿಗೆ ಪಟ್ಟಿ ಬಿಗಿದುಕೊಂಡರೆ ಆದದ್ದೇನೂ? ಹೋದದ್ದೇನೂ? ಹುಚ್ಚುತನ ಸಾಕುಮಾಡು. ಎಲ್ಲ ಸರಿಯಾಗುತ್ತದೆ."

ಥೇಟ್ ಅಮ್ಮನಂತಹದೇ ದನಿ. ಆಳಕ್ಕೆ ತಾಕಿದ ದನಿ. ತಾನೀಗ ಹಗ್ಗದಾಟ ಆಡುವ ಗೋಲಗುಪ್ಪದಂತಹ ಪುಟ್ಟ ಮಗು. ಮೀನು ಮಾಡುತ್ತಿರುವ ಅಮ್ಮನ ಕೈಗೆ ನೀರು ಹಾಕಲು ಹೋಗಿ ಚೆಲ್ಲಿ ಬೈಸಿಕೊಂಡು ಪೆಚ್ಚು ನಗುವ ಅವಳೇ. ಏನೆಲ್ಲ ದಾಟಬಲ್ಲೆ. ಏನೆಲ್ಲ ಏಗಬಲ್ಲೆ – ಜೀವದ ಅದ್ಯಾವ ಮೂಲೆಯಿಂದಲೋ ತ್ರಾಣವೊಂದು ಉಕ್ಕಿದ ಉಲ್ಲಾಸ. "ಏಯ್, ಕೊಡಿಲ್ಲಿ ನಿನ್ನ ಕೈ ಕೊಡಿಲ್ಲಿ. ಏನಿದೆ ಅದರಲ್ಲಿ ಅಂತದ್ದು. ನೋಡಿಯೇ ಬಿಡುವ ಮಾರಾಯ್ತಿ. ಈ ಲೋಕದ ಯಾವ ಡಾಕ್ಟರರ ಔಷಧಿಗಿಂತಲೂ ಹೆಚ್ಚಿಂದು..." ಗುಲು ಗುಲು ಹರಡಿದ ನಗೆಗೆ ಕಣ್ ತೆರೆದ ಮಕ್ಕಳು ತಂತಮ್ಮ ಅವ್ವಂದಿರನ್ನು ಬಲು ಬೆರಗಿನಿಂದ ನೋಡಿದರು.

ಜೊತೆ

ಅವಳೂ ನೋಡಿದಳು. ಅವನ ನೋಟದ ಎಳೆ ಹಿಡಿದು. ಥೇಟ್ ಅಮೃತ ಶಿಲೆಯಂತಹ ಹಾಲು ಬಿಳಿ ಬೆನ್ನು. ಕುಸುರಿಗಟ್ಟಿದ ಬ್ಲೌಸು. ಸ್ಟೈಲಾಗಿರುವ ಬಾಬ್ ಕೂದಲು. ವಾಹ್ ಚೆಲುವೇ.



ಚಿತ್ರ: ಎಚ್.ಎಸ್. ರಾಮುನಗೌಡ

ಅವನು ಕೆಕ್ಕರಿಸಿದ. ಇವಳು ತನ್ನ ನೋಟವನ್ನೂ ಬ್ಯಾನ್ ಮಾಡಬೇಕೇ? ಸಿಡಿಮಿಡಿ. ಈಗಲೇ ಹೀಗಾದರೇ ಇಡೀ ಬದುಕು ಏಗುವುದು ಹೇಗೆ?

ಏನೋ ಹೊಳೆಯಿತು. ಸುತ್ತಲ ಜನರನ್ನು ಅಲಕ್ಷಿಸಿದ. ಹುಬ್ಬುಗಂಟಿಕ್ಕಿದ. 'ಏನಾಯ್ತೀಗ?' ಹಲ್ಲು ಕಡಿದ. ಅವಳಿಗೆ ಹೊಟ್ಟೆಯಲ್ಲೇನೋ ಕಲೆಸಿದಂತೆ ಭಯವಾಯಿತು. ಯಾಕೆ ತಿಳಿಯಲಿಲ್ಲ. ಎತ್ತಿಕೊಂಡ ಕೈಗೂಸಿನ ಗಲ್ಲಕ್ಕೆ ಅವಳ ಬಿಸಿ ಉಸಿರು ತಾಕಿತು. ಅದು ಅಪ್ಪನ ಕೈಗೆ ತನ್ನ ಗೆಜ್ಜೆ ಕಾಲ್ಗಳನ್ನು ತಾಕಿಸಿತು. ಅವ ಕೂಸೆತ್ತಿಕೊಂಡ. ಅವಳು ಬಹಳ ಹೊತ್ತು ಪೆದ್ದಿಯಂತೆ ನಿಂತಿದ್ದಳು. ಅವನು ಗುಂಪಿನಲ್ಲಿದ್ದ. ಕೂಸು ಹಸಿವಿಗೆ ಕುಸುಕುಸು ಹಚ್ಚಿತು. ಗಂಭೀರವಾಗಿ ಬಂದು ಅವಳ ಕೈಗೆ ಅಪರಿಚಿತನಂತೆ ಕೂಸು ದಾಟಿಸಿದ. ಚಿಂತೆ ಎನಿಸಿತು. ಹಾಲೂಡಿಸತೊಡಗಿದ್ದಳು. ಹಾಲು ಸರಾಗ ಬರದೆ ಕಣ್ಣೀರಿಂದ ಉಪ್ಪಾಗಿತ್ತೋ ಏನೋ? ಕೂಸು ಜೋರಾಗಿ ಕಚ್ಚಿತು. ಅವಳು 'ಹಾ' ಎಂದು ಒಳಗೆ ಚೀರಿದಳು. ಸಣ್ಣಗೆ ರಕ್ತವೂ ಒಸರಿತ್ತು. ಅವನು ದಡಬಡಿಸಿ ಬಂದ. ಕೂಸೆತ್ತಿಕೊಂಡ. ಅವಳ ನೆತ್ತಿ ಸವರಿದ. ಅವ್ವನಂತೆ ಅಪ್ಪನಂತೆ ...

ಬಿಟ್ಟು ಬಂದ ಎಷ್ಟೆಲ್ಲ ಸಂಬಂಧಗಳಂತೆ. ಅವರು ಯುಗದ ಆದಿಯಿಂದಲೂ ಜೊತೆಗಿದ್ದಾರೆ. ಅಂತ್ಯವಿಲ್ಲದ ಹಾದಿಯಲ್ಲಿ ನಡೆಯುತ್ತ..

ಸುಮಂಗಲಾ ಅವರ ಮೂರು ಕತೆಗಳು



(ಬೆಂಗಳೂರಿನ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿರುವ ಸುಮಂಗಲಾ ಕನ್ನಡದ ಗಮನಾರ್ಹ ಕತೆಗಾರ್ತಿಯಲ್ಲೊಬ್ಬರು.)

ವಿವೇಕಾನಂದರ ಆತ್ಮ ಸಂಚಾರ



ಸ್ವಾಮಿ ವಿವೇಕಾನಂದರ ಆತ್ಮ ಹಿಂಗೇ ಅಲೆದಾಡುತ್ತ ಒಮ್ಮೆ ವಡೋದರದಲ್ಲಿ ಕಚೇರಿಯೊಂದರ ಒಳಗೆ ಇಣುಕಿತು. ಅಲ್ಲಿ ಕಪಾಟೊಂದರಲ್ಲಿ ಕಂಡ ಫೈಲೊಂದನ್ನು ಎತ್ತಿಕೊಂಡು, 'ಅರೆ, ಯಾರೋ ಚುನಾವಣೆಗೆ ನಿಂತ ಅಭ್ಯರ್ಥಿಯ ಅಫಿಡೆವಿಟ್ಟಿನ ಹಂಗೆ ಕಾಣುತ್ತದೆಯಲ್ಲ' ಎಂದು ಅಕ್ಷರ ಕೂಡಿಸಿಕೊಂಡು ಓದಿತು. ಯಾಕೋ ಕಣ್ಣುಗಳನ್ನು ನಂಬಲಾಗಲಿಲ್ಲ. ಎಷ್ಟೇ ಆಗಲಿ ಆತ್ಮ ನೋಡಿ, ಹಿಂಗಾಗಿ ತಟ್ಟನೆ ಎಲ್ಲಿಗೆ ಬೇಕಾದರೂ ಹೋಗಬಲ್ಲದು. ಗುಜರಾತಿನ ಚುನಾವಣಾಧಿಕಾರಿ ಕಚೇರಿಯನ್ನು ಹುಡುಕಿಕೊಂಡು ಹೋಗಿ, ದಶಕದ ಹಿಂದಿನ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ ಅದೇ ಅಭ್ಯರ್ಥಿಯ ಅಫಿಡೆವಿಟ್ ಹುಡುಕಿ, ನೋಡಿತು. ಅರೆ, ಇಲ್ಲೆಲ್ಲ ಹೆಂಡತಿ ಜಾಗ ಖಾಲಿಯಿದೆ, ಮತ್ತೆ ವಾರಣಾಸಿಯ ಅಫಿಡೆವಿಟ್ಟಿನಲ್ಲಿ ಮದುವೆಯಾಗಿದೆ ಅಂತ ಇದೆಯಲ್ಲ... ಹಂಗಾರೆ ಮದುವೆಯಾಗಿದ್ದಾದರೂ ಯಾವಾಗ? ಆತ್ಮಕ್ಕೆ ತಲೆ ಕೆಟ್ಟು ಹೋಯಿತು. ಮತ್ತೆ ಪೇಪರುಗಳನ್ನು ಹುಡುಕಿ ಓದಿ, ಸುಸ್ತಾಗಿ ಕೂತುಬಿಟ್ಟಿತು!

'ಮಾರಾಯ... ನೀನು ಹೆಂಡತಿ ಬಿಟ್ಟು ಹೋಗಿದ್ದಕ್ಕೆ ಭಾರೀ ಘನ ಉದ್ದೇಶಗಳಿರಬಹುದು, ಆದರೆ ಮದುವೆಯಾಗಿದೆ ಎಂದು ಮೊದಲೇ ನಿಜ ಹೇಳಿದ್ದರೆ ಏನಾಗ್ತಿತ್ತು... ದಯಮಾಡಿ ನನ್ನನ್ನು ನನ್ನ ಪಾಡಿಗೆ ಬಿಟ್ಟು ಬಿಡು. ಸುಖಾಸುಮ್ಮನೆ ನಿನ್ನ ರೋಲ್ ಮಾಡೆಲ್ ನಾನು ಅಂತ್ಹೇಳಿ ನನ್ನ ಮಾನವನ್ನೂ ಹರಾಜಿಗಿಡಬೇಡಪ್ಪ' ಎಂದು ಒಂದು ಆ ಅಭ್ಯರ್ಥಿಗೆ ಪತ್ರ ಬರೆಯಿತು.

ಆದರೆ ಪತ್ರವನ್ನು ವಾರಣಾಸಿಗೆ ಕಳಿಸುವಷ್ಟರಲ್ಲಿ ಅಭ್ಯರ್ಥಿ ಆಯ್ಕೆಯಾಗಿ, ನವದೆಹಲಿಯ ನಂ. ೭, ರೇಸ್‌ಕೋರ್ಸ್ ರಸ್ತೆಯ ಬಂಗಲೆಯಲ್ಲಿ ವಿರಾಜಮಾನವಾಗಿಯಾಗಿತ್ತು. ಪತ್ರ ವಿಳಾಸದಾರರು ಇಲ್ಲ ಎಂದು ವಿವೇಕಾನಂದರ ಆತ್ಮಕ್ಕೆ ಮರಳಿಹೋಯಿತಂತೆ!

ಪ್ರಾಣಿ ಸಂವಾದ–೧




ಕೊಟ್ಟಿಗೆಯಲ್ಲಿದ್ದ ಎಮ್ಮೆಗೆ ನಿಜಕ್ಕೂ ಬೇಜಾರಾಯಿತು.

“ಏನೇ, ದಿನಾ ಬೆಳಗ್ಗೆ ನಿಂಗೆ ಅರಿಶಿಣ, ಬಾಳೆಲೆಯಲ್ಲಿ ಅಕ್ಕಿ ತಿನ್ನಕ್ಕೆ ಕೊಡ್ತಾರೆ, ದೀಪಾವಳಿಯಲ್ಲಂತೂ ನಿಂಗೆ ಪೂಜೆ ಮಾಡಿ, ಏನೇನೋ ಕಟ್ಟಿ, ತಿನ್ನಕ್ಕೆ ಎಲ್ಲ ಕೊಡ್ತಾರೆ. ನೋಡು, ಈಗ ನಿಮ್ಮನ್ನು ಯಾರೂ ತಿನ್ನಬಾರದು ಅಂತ ಹೆಂಗೆ ಭಾರತೀಯ ಖಾಕಿ ಬರ್ಮುಡಾಗಳೆಲ್ಲ ಒಂದಾಗಿದ್ದಾರೆ, ನಿಂದೇ ವಳ್ಳೆ ಛಾನ್ಸು ಮಾರಾಯ್ತಿ” ಎಂದು ಪಕ್ಕದಲ್ಲಿದ್ದ ಹಸು ಗಂಗೆಗೆ ಹೇಳಿತು.

“ಅಯ್ಯೋ ಸುಮ್ನಿರು ಮಾರಾಯ್ತಿ... ಅರಿಶಿಣ, ಕುಂಕುಮ, ಪೂಜೆ ತಗಂಡು ಏನು ಮಾಡ್ತೀಯ... ನಿನ್ನ ಲಕ್ಕು ನೋಡು... ನೀನು ಮಂದ ಹಾಲು ಕೊಡ್ತೀಯ, ಬೆಳ್ಳಗೆ ಛಲೋ ತುಪ್ಪ ಆಗುತ್ತೆ ಅಂತ ನಿಂಗೆ ಹಿಂಡಿ ನೆನೆಸಿ ಕೊಡದೇನು, ಹಸೀಹುಲ್ಲು ತಂದು ಹಾಕದೇನು, ವಳ್ಳೆ ಅಕ್ಕಚ್ಚು ಕೊಡದೇನು... ಆಹಾಹಾ ಏನು ಬಡಿವಾರ... ನನಗೆ ಎಲ್ಲಿದೆ ಮಾರಾಯ್ತಿ ಈ ಸೌಭಾಗ್ಯವೆಲ್ಲ... ಗೋಮೂತ್ರ, ಗೋಮಯ ಅಂತೆಲ್ಲ ಇವು ಮಡಿಯಾಗಕ್ಕೆ ಮಾತ್ರ... ಎಷ್ಟ್ ಅಂದ್ರೂ ಎಮ್ಮೆ ಹಾಲಿನ ಹಂಗಲ್ಲ, ದನದ ಹಾಲು ಒಂಥರಾ ಕೊನಸು ಅಂತ ಹೇಳದು ಬೇರೆ...” ಎಂದು ಅಲವತ್ತುಕೊಂಡಿತು.

ಪ್ರಾಣಿ ಸಂವಾದ–೨



‘ಎಲ್ಲಿಗೆ ಹೋಗಿದ್ದೆ ಮರೀ?’

‘ಇಲ್ಲೇ ಅಮ್ಮಾ, ಮೈದಾನದ ಹತ್ರ... ಅದೇ ಖಾಕಿ ಬರ್ಮುಡಾದವ್ರು ಏನೋ ಪರೇಡ್ ಮಾಡ್ತಿದ್ದರಲ್ಲ ಅಲ್ಲಿ... ಭಾಷಣನೂ ಮಾಡ್ತಿದ್ದರಮ್ಮ’

‘ಅಯ್ಯೋ... ಅದೆಲ್ಲ ನಮಗ್ಯಾಕೆ ಮರೀ’

‘ವರಾಹವತಾರ ಅಂತೆಲ್ಲ ಅವರು ಏನೋ ಹೇಳ್ತಿದ್ದರಮ್ಮ... ಮತ್ತೆ ನಮಗ್ಯಾಕೆ ಯಾರೂ ಆ ಸಂಸ್ಕೃತ ಹೆಸರಿಂದ ಕರಿಯಲ್ಲ, ಯಾಕೆ ಎಲ್ರೂ ನಮಗೆ ಹಂದಿಹಂದಿ ಅಂತ ಬೈಯ್ತಾರಮ್ಮ?’

‘ಯಾಕಂದ್ರೆ... ಹಾಂ... ಯಾಕಂದ್ರೆ ನಾವು ಈಗ ಸುಸಂಸ್ಕೃತರಲ್ಲದವರ ಗಲೀಜು ತಿಂದು, ಎಲ್ಲ ಕ್ಲೀನು ಮಾಡ್ತೀವಲ್ಲ ಅದಕ್ಕೇ’

‘ಮತ್ತೆ ಬೆಳಗ್ಗೆ ಹಳೇ ಪೇಪರು ತಿಂತಾ ನೋಡಿದೆ ಅಮ್ಮಾ, ಹಸೂನ ಯಾರೂ ಕೊಲ್ಲಬಾರದು ಅಂತ ಪ್ರತಿಭಟನೆ ಅಂತೆ, ಯಾರೋ ಹಸೂನ ತಿಂದರು ಅಂತ ಅವರನ್ನೂ ಕೊಂದರಂತೆ, ಹಂಗಾರೆ ವರಾಹಗಳನ್ನೂ ತಿನ್ನಬಾರದು ಅಂತ ಕಾನೂನು ಬರುತ್ತಾ ಅಮ್ಮ’

‘ಹಸೂ ವಿಚಾರವೇ ಬೇರೆ... ಮತ್ತೆ ಆ ಪುರಾಣಗಳ ವರಾಹವೇ ಬೇರೆ ಮಗುವೇ, ನಾವು ಅವರ ವರಾಹಗಳಲ್ಲ, ನಾವು... ನಾವು ಬರೀ ಹಂದಿ!’

ಕನ್ನಡ ಲೇಖಕರು ‘ಕಂಡ’ ಹೆಣ್ಣು : ಒಂದು ನೋಟ

–ಡಾ. ಎಂ.ಎಸ್. ಆಶಾದೇವಿ

ಲೇಖಕರು ಹೆಣ್ಣನ್ನು ಬಗೆವ ಬಗೆಯ ಬಗ್ಗೆ ಚರ್ಚಿಸುವುದು, ಅದರಲ್ಲಿ ಇರಬಹುದಾದ ವಿವಿಧ ಮಾದರಿಗಳನ್ನು ಗುರುತಿಸುವುದು ಕುತೂಹಲದ ಸಂಗತಿಯಾಗಬಹುದಾಗಲಿ, ಶೈಕ್ಷಣಿಕ ಅಗತ್ಯದ ಸಂಗತಿಯಾಗಬಹುದಾಗಲಿ ಸಂತೋಷದ ಸಂಗತಿ ಖಂಡಿತಾ ಅಲ್ಲ. ಸಾಹಿತ್ಯದ ವಿದ್ಯಾರ್ಥಿಯಾಗಲಿ, ಮಹಿಳಾ ಸಂಕಥನದ ವಿದ್ಯಾರ್ಥಿಯಾಗಲಿ ಇಬ್ಬರಿಗೂ ನಿರಾಸೆ ನಿರೀಕ್ಷಿತವಾದದ್ದು. ಆದರೆ ಇದು ಅನಿವಾರ್ಯ ಕರ್ತವ್ಯವೂ ಹೌದು. ಏನೆಲ್ಲ ಎಷ್ಟೆಲ್ಲ ಪ್ರಯತ್ನಗಳ ನಂತರವೂ ಹೆಣ್ಣು ತನ್ನನ್ನು, ತನ್ನ ವ್ಯಕ್ತಿತ್ವವನ್ನು , ಅಭಿವ್ಯಕ್ತಿಯ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುವ ಸವಾಲನ್ನು ಎದುರಿಸುತ್ತಿರುವ ಅವಳ ಹೋರಾಟವು ಜನಮನ್ನಣೆಯನ್ನಿರಲಿ ಬೌದ್ಧಿಕ ವರ್ಗದಿಂದಲೂ ಸಂಪೂರ್ಣ ಸಹಮತವನ್ನು ಇನ್ನೂ ಪಡೆದಿಲ್ಲ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಪರಂಪರೆಯಲ್ಲಿ ಹೆಣ್ಣನ್ನು ಗ್ರಹಿಸಿರುವ ಮತ್ತು ಚಿತ್ರಿಸಿರುವ ಪರಿಯನ್ನು ಗಮನಿಸುವುದು ಹೆಣ್ಣಿನ ಹೋರಾಟಕ್ಕೆ ನಾವು ಪಡೆಯಬಹುದಾದ ನೈತಿಕ ಸಮರ್ಥನೆಯೂ ಆಗುತ್ತದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೆಣ್ಣನ್ನು ಕಂಡಿರುವ ಬಗೆಯನ್ನು ಸ್ಥೂಲವಾಗಿ ನಾಲ್ಕು ಮಾದರಿಗಳಲ್ಲಿ ಗಮನಿಸಬಹುದು. ಒಂದು ಅವಳನ್ನು ವಸ್ತು ವಿಶೇಷವಾಗಿ ಬಳಸಿಕೊಂಡಿರುವ ಮಾದರಿ, ಇನ್ನೊಂದು ಅವಳನ್ನು ಸೋದ್ದಿಶ್ಯವಾಗಿ ಅವಳ ಅನನ್ಯ ವ್ಯಕ್ತಿತ್ವವಾಗಿ ಗುರುತಿಸಲು ನಡೆಸುವ ಪ್ರಯತ್ನದ ಮಾದರಿ, ಮತ್ತೊಂದು ಕಲಾಭಿವ್ಯಕ್ತಿಯ ಉತ್ಕಟತೆಯಲ್ಲಿ ತಮ್ಮ ವ್ಯಕ್ತಿಗತ ನಿಲುವುಗಳನ್ನು ಮೀರಿ ಹೆಣ್ಣನ್ನು ಅವಳ ನಿಜದಲ್ಲಿ ಗುರುತಿಸಿರುವ ಕ್ರಮ ಮತ್ತು ನಾಲ್ಕನೆಯದು ತಮ್ಮ ಸಂವೇದನೆಯಲ್ಲಿಯೇ ಹೆಣ್ಣನ್ನು ಒಂದಾಗಿಸಿಕೊಂಡಿರುವ ಲೇಖಕರ ಮಾದರಿ.

ಮೊದಲನೆಯ ಮಾದರಿಗೆ ಅಕ್ಷರಶಃ ನೂರಾರು ಉದಾಹರಣೆಗಳನ್ನು ಕೊಡಬಹುದು. ಅಥವಾ ಉದಾಹರಣೆಗಳ ಅಗತ್ಯವೇ ಇಲ್ಲ ಎನಿಸುವಷ್ಟು ಪರಿಚಿತವಾದ ಮಾದರಿ ಇದು. ಹೆಣ್ಣಿನ ಜಘನ– ನಿತಂಬಗಳು, ಕುಚ ದ್ವಯಗಳು, ಕಣ್ಣು ಕಮಲದ, ಮುಖ ಕಮಲದ, ಪಾದ ಕಮಲದ, ಸಂಪಿಗೆಯ ಮೂಗಿನ ಹಾವಿನಂತಹ ಜಡೆಯ, ಕಾಮನಬಿಲ್ಲಿನ ಹುಬ್ಬಿನ, ಅಪೂರ್ವ ಸೌಂದರ್ಯದಿಂದ ಲೋಕವನ್ನೇ ಕಂಗೆಡಿಸುವ ಸುಂದರಿಯರ ದೊಡ್ಡ ಮೆರವಣಿಗೆಯನ್ನೇ ತೆಗೆಯಬಹುದು. ‘ತರುಣಿಯರು ಪರಿಮಳದ ಜಂಗಮ ಭರಣಿಯರು’ ಎನ್ನುತ್ತಾನಲ್ಲ ಕುಮಾರವ್ಯಾಸ. ಅದು ಕೇವಲ ಅವರು ಪೂಸಿಕೊಂಡಿರಬಹುದಾದ ಸುಗಂಧ ದ್ರವ್ಯದ್ದಲ್ಲ, ಅದು ಅವರ ಒಟ್ಟೂ ಅಸ್ತಿತ್ವವನ್ನು ಈ ಪಿತೃಸಂಸ್ಕೃತಿ ಗ್ರಹಿಸುತ್ತಿರುವ ಬಗೆಗೆ ಒಂದು ರೂಪಕ. ಹೆಣ್ಣಿನ ‘ವಾಸನಾಮಯ’ ಅಸ್ತಿತ್ವದ ಬಗ್ಗೆ ಮಾತ್ರ ನೋಟ ನೆಟ್ಟಿರುವ ಲೋಕದೃಷ್ಟಿಯನ್ನೂ ಅದನ್ನೇ ತಮ್ಮ ಕಾವ್ಯದ ರಸಘಟ್ಟಗಳಲ್ಲಿ ಒಂದಾಗಿಸಿಕೊಳ್ಳಲು ಉದ್ದಕ್ಕೂ ತವಕಿಸುತ್ತಿರುವ ಲೇಖಕ ಗಣವನ್ನೂ ಕುಮಾರವ್ಯಾಸನ ಮಾತುಗಳ ಮೂಲಕವೇ ಸಂಕ್ಷಿಪ್ತವಾಗಿ ನಾವು ಹೇಳಿಬಿಡಬಹುದು. ಕುಚ ಮತ್ತು ಜಘನಗಳ ಭಾರದಲ್ಲಿ ಬಳುಕುವ ಹೆಣ್ಣಿನ ಬಡ ನಡುವನ್ನು ಚಿತ್ರಿಸದ ಹಳಗನ್ನಡದ ಕವಿಗಳು ಅಪರೂಪವೆಂದೇ ಹೇಳಬೇಕು. ಹೆಣ್ಣು ಕಾವ್ಯದ ಮುಖ್ಯ ಪಾತ್ರಗಳಲ್ಲಿ ಒಂದಾಗಿರುವ ಹೊತ್ತಿನಲ್ಲಿಯೂ ಆ ಪ್ರಾಮುಖ್ಯತೆ ಅವಳ ಬೌದ್ಧಿಕ ನೆಲೆಯದಾಗಿರುವುದು ಅಪರೂಪ. ಅವಳು ಗಂಡಿನ ಧೀರೋದಾತ್ತ . ಸಾಹಸಿ ಬದುಕಿನ, ಅವನ ಆರೋಹಣ ಪರ್ವದ ಅನುಚರಳೋ, ಅದಕ್ಕೆ ಒದಗುವ ಅಡ್ಡಿಯೋ, ಅವನ ಲೌಕಿಕದ ಭ್ರಮೆಗಳನ್ನ ಕಳೆಯುವ ಪರಿಕರವೋ ಆಗಿ ಬಳಕೆಯಾಗಿರುವುದೇ ಹೆಚ್ಚು.


ಬಹು ಪ್ರಸಿದ್ಧವಾದ ಪಂಪನ ‘ನೀಲಾಂಜನಾ ನೃತ್ಯ ಪ್ರಸಂಗ’ವನ್ನೇ ನೋಡಿ. ’ನಾರೀರೂಪದ ಯಂತ್ರಂ ಚಾರುತರಂ ನೋಡೆ ನೋಡೆ ಕರಗಿ’ ಹೋಗುವುದು ಯಾಕಾಗಿ? ತನ್ನ ಅಲೌಕಿಕ ಸೌಂದರ್ಯದಿಂದ, ನರ್ತನ ಪ್ರತಿಭೆಯಿಂದ ರಂಗವನ್ನೂ ಜನಾಂತರಂಗವನ್ನೂ ಪ್ರವೇಶಿಸಿ ಸಮ್ಮೋಹಿಸಿದ ನೀಲಾಂಜನೆಯು ತನ್ನ ಆಯಸ್ಸು ಮುಗಿದ ಕೂಡಲೇ ಸಾಯುವುದರ ಮೂಲಕ ವೃಷಭದೇವನಿಗೆ ಬದುಕಿನ, ಸೌಂದರ್ಯದ, ಯೌವನದ ನಶ್ವರತೆಯ ಅರಿವನ್ನು ಮೂಡಿಸಲು ಅವಳ ಬಳಕೆಯಾಗುತ್ತಿದೆ. ಯಾರು ಈ ತನಕ ಮಧು ಭಾಂಡವಾಗಿ ಕಾಣಿಸುತ್ತಿದ್ದಳೋ ಅವಳೇ ಈಗ ಬದುಕಿನ ಕ್ಷಣಿಕತೆಯ ಸಂಕೇತವೂ ಆಗುತ್ತಾಳೆ. ಎಂದರೆ, ನೀಲಾಂಜನೆಗೆ ಅವಳದೇ ಆದ ಅಸ್ತಿತ್ವವೋ, ವ್ಯಕ್ತಿತ್ವವೋ ಯಾವುದೂ ಇಲ್ಲ. ಅವಳು ಗಂಡಿನ ಬದಲಾಗುತ್ತಿರುವ ಆಶೋತ್ತರಗಳ ಸಂಕೇತವಾಗಿ ಮಾತ್ರ ಬಳಕೆಯಾಗುತ್ತಿದ್ದಾಳೆ. ನೀಲಾಂಜನೆಯನ್ನು, ಅವಳ ದೈಹಿಕ ಸೌಂದರ್ಯವನ್ನು ವರ್ಣಿಸುವುದೂ ಬೇಕು, ಏಕೆಂದರೆ ಅದು ಕಾವ್ಯದ ‘ಸೊಗಸ’ನ್ನು ಹೆಚ್ಚಿಸುತ್ತದೆ, ಅದೇ ಹೊತ್ತಿಗೆ ಅವಳು ಸಾಯುವುದರ ವಿವರಗಳೂ ಬೇಕು, ಆದಿ ದೇವನ ಆರೋಹಣ ಪರ್ವವನ್ನು ಆರಂಭಿಸುವುದಕ್ಕೆ.ಗಂಡಿನ ಬದುಕಿನ ಆನುಷಂಗಿಕ ಪಾತ್ರವಾಗಿ ಹೆಣ್ಣಿದ್ದಾಳೆಯೇ ಹೊರತು, ಅವಳು ಗಂಡು ಗೆಲ್ಲಬಹುದಾದ, ಗೆಲ್ಲಬೇಕಾದ ಸವಾಲಾಗಿದ್ದಾಳೆಯೇ ಹೊರತು, ಬದುಕಿನ ಘನತೆ, ಅರ್ಥಪೂರ್ಣತೆಯನ್ನು ಹೆಚ್ಚಿಸಬಲ್ಲ ‘ವ್ಯಕ್ತಿತ್ವ’ವಾಗಿ ಅಲ್ಲ.

ಕುಮಾರವ್ಯಾಸನನ್ನು ಎರಡನೆಯ ಮಾದರಿಗೆ ಎಂದರೆ, ಕಲಾವಿದನೊಬ್ಬ ಕಲೆಯ ಮಾಂತ್ರಿಕ ಘಳಿಗೆಯಲ್ಲಿ ತನ್ನ ಅಕಾರಣ ಪುರುಷಾಹಂಕಾರವನ್ನು ಮೀರಿಕೊಳ್ಳುವ ಮಾದರಿಗೆ ಉದಾಹರಣೆಯಾಗಿ ನೋಡಬಹುದು. ತನ್ನ ಕಾವ್ಯದ ಆರಂಭದಲ್ಲಿ ಅವನು ಕೊಡುವ ಹೆಣ್ಣಿನ ಚಿತ್ರಕ್ಕೂ ದ್ರೌಪದಿ ಮತ್ತು ಕಾವ್ಯದ

ಕೊನೆಯಲ್ಲಿ ಅವನು ಹೆಣ್ಣು ಮತ್ತು ಅವಳ ದುರಂತವನ್ನು ಕಟ್ಟಿಕೊಡುವ ಕ್ರಮಕ್ಕೂ ಅಪಾರ ವ್ಯತ್ಯಾಸವಿದೆ. ಮನೆಯೊಂದ ಹೊರಗೆ ಹೋಗಿ ಸಾಮಾಜಿಕ ಬದುಕನ್ನು ಕಟ್ಟಿಕೊಳ್ಳಲು ಯತ್ನಿಸುವ 'ಹೆಣ್ಣುಗಳನ್ನು ಹತ್ತನು ಹಡೆದೊಡೆಯು ವರ್ಜಿಸುವುದುತ್ತಮ ಪುರುಷರುಗಳೆಂದ' ಎನ್ನುವ ಕುಮಾರವ್ಯಾಸನೇ ದ್ರೌಪದಿಗೆ ಕೊಡುವ ಆವರಣ ಆಶ್ಚರ್ಯ ಹುಟ್ಟಿಸುತ್ತದೆ. 'ಸ್ತ್ರೀಮತವನುತ್ತರಿಸಲಾಗದೆ ಧರ್ಮಶಾಸ್ತ್ರದೊಳ್' ಎನ್ನುವ ಮಾತಾಗಲಿ 'ಇನ್ನು ನಾರಿಯರು ಹುಟ್ಟದೆಯಿರಲಿ ಎನ್ನವೊಲು ಭಂಗಿತರು ಭುವನದೊಳಗೆ' ಎನ್ನುವ ಉದ್ಗಾರವಾಗಲೀ ಕಲಾವಿದನೊಬ್ಬ ಅವನ ಧ್ಯಾನಸ್ಥ ಮತ್ತು ಏಕಾಗ್ರ ಘಳಿಗೆಯಲ್ಲಿ ಕಾಣುವ ಪರಮ ಸತ್ಯಗಳಂತೆ ಕಾಣಿಸುತ್ತವೆ. ಅವನ ಕಾವ್ಯದ ಕೊನೆಯಲ್ಲಿ ಹೆಣ್ಣುಮಕ್ಕಳು ಅರಸೊತ್ತಿಗೆಯ ಸ್ವಾರ್ಥ ಮತ್ತು ಅಧಿಕ್ಕಾರಕ್ಕಾಗಿ ತಮ್ಮ ಬದುಕು ಮೂರಾಬಟ್ಟೆಯಾದುದನ್ನು ಶಪಿಸುತ್ತಾ ಅರಮನೆಯ ಕಡೆಗೆ ಮಣ್ಣು ತೂರುವ ಸಂದರ್ಭವೂ ಇದನ್ನು ಸಮರ್ಥಿಸುತ್ತದೆ. ಅಪ್ಪಟ ಕಾವ್ಯವೆನ್ನುವುದು ಗಂಡು ಹೆಣ್ಣಿನ ನಡುವಿನ ಕೃತಕ ಶ್ರೇಣೀಕರಣವನ್ನು ಅದರ ಮಾಂತ್ರಿಕ ಘಳಿಗೆಯಲ್ಲಾದರೂ ಮೀರಿಕೊಳ್ಳುವ ಸಾಧನವಾಗುತ್ತದೆ. ಈ ಅಂಶವೂ ಹೆಣ್ಣಿನ ಹೋರಾಟದ ನೈತಿಕತೆಯನ್ನು ಬಲಪಡಿಸುತ್ತದೆ.

ಆಧುನಿಕ ಸಂದರ್ಭದಲ್ಲಿ ಶಿವರಾಮ ಕಾರಂತರು ಮೂರನೆಯ ಮಾದರಿಯನ್ನು ಪ್ರತಿನಿಧಿಸುತ್ತಾರೆ. ಲೇಖಕ ಮತ್ತು ವ್ಯಕ್ತಿಗತ ನೆಲೆಗಳೆರಡರಲ್ಲೂ ಹೆಣ್ಣಿನ ವಿಷಯವನ್ನು ಸದಾ ಮುನ್ನೆಲೆಯಲ್ಲಿಟ್ಟುಕೊಂಡ ಅಪರೂಪದ ವ್ಯಕ್ತಿತ್ವ ಕಾರಂತರದ್ದು. ಅವರ ಮೊದಲನೆಯ ಕೃತಿ 'ಸರಸಮ್ಮನ ಸಮಾಧಿ'ಯಿಂದ ಹಿಡಿದು 'ಕೇವಲ ಮನುಷ್ಯರು' ಕಾದಂಬರಿಯ ತನಕವೂ ಉದ್ದಕ್ಕೂ ಇದನ್ನು ನಾವು ಕಾಣಬಹುದು. ಹೆಣ್ಣಿನ ಪ್ರಶ್ನೆಯನ್ನು ಸಮುದಾಯ ಪ್ರಜ್ಞಾಪೂರ್ವಕವಾಗಿಯೇ ನಿಭಾಯಿಸಬೇಕು ಎಂದು ನಂಬಿದವರು ಕಾರಂತರು. ಆದ್ದರಿಂದಲೇ ಹೆಣ್ಣಿನ ಜೈವಿಕತೆ ಮತ್ತು ಲೈಂಗಿಕ ಸ್ವಾತಂತ್ರ್ಯವನ್ನು ಕುರಿತಂತೆ ಇವರು ಎತ್ತುವ ಪ್ರಶ್ನೆಗಳು ರಾಜಕೀಯ ಪ್ರಶ್ನೆಗಳ ವಿಸ್ತಾರವನ್ನು ಪಡೆಯುತ್ತವೆ. ದೇಹವೆನ್ನುವುದು ಗಂಡಿಗೆ ಎಷ್ಟು ನಿಜವೋ ಹೆಣ್ಣಿಗೂ ಅಷ್ಟೇ ನಿಜ ಮತ್ತು ಇದನ್ನು ಹೆಣ್ಣಿನ ಮಟ್ಟಿಗೆ ಮಾತ್ರ ನಿಯಂತ್ರಿಸುವುದು ಅಸಹಜ ಎನ್ನುವುದನ್ನು, ಈ ಅಸಹಜ ನಿಲುವಿನಿಂದ ಮೊದಲು ಗಂಡು ಬಿಡುಗಡೆ ಪಡೆಯಬೇಕು ಎನ್ನುವುದನ್ನು ಬುದ್ಧಿ ಭಾವಗಳೆರಡರಿಂದಲೂ ಪ್ರತಿಪಾದಿಸಿದವರು ಕಾರಂತರು. 'ಮೈಮನಗಳ ಸುಳಿಯಲ್ಲಿ' ಕಾದಂಬರಿ ಈ ದೃಷ್ಟಿಯಿಂದ ಭಾರತದ ಮುಖ್ಯ ಕೃತಿಗಳಲ್ಲೊಂದು. ಸದಾ ಭಾವುಕತೆಯ ನೆಲೆಯಲ್ಲಿ "ನಿನ್ನ ಪ್ರೀತಿಗೆ ಅದರ ರೀತಿಗೆ ಕಣ್ಣ ಹನಿಗಳೆ ಕಾಣಿಕೆ'ಯೆಂದು ಹೇಳುತ್ತಲೇ ಅವಾಸ್ತವ ಕಣ್ಕಟ್ಟಿನಲ್ಲಿ ಹೆಣ್ಣನ್ನು ಬಂಧಿಸಿ, ನಿಯಂತ್ರಿಸುವ ಗಂಡಿನ ಆತ್ಮವಂಚನೆಯನ್ನು ಕಾರಂತರಷ್ಟು ನಿರ್ಭಿಡೆಯಿಂದ ಅನಾವರಣಗೊಳಿಸಿದ ಲೇಖಕರು ಅಪರೂಪ.

ನವೋದಯದ ಸಂದರ್ಭದಲ್ಲಿ ಕುವೆಂಪು, ಬೇಂದ್ರೆ ಮತ್ತು ಪುತಿನ ಹೆಣ್ಣನ್ನು ಆರ್ಷೇಯ ಮೋಹಪಾಶದಿಂದ ಹೊರಗೆ ತರಲು ಯತ್ನಿಸಿದರು. ಆಧ್ಯಾತ್ಮ ಮತ್ತು ಸಾಮಾಜಿಕತೆ ಈ ಎರಡೂ ಬೆರೆತ ನೆಲೆಯಲ್ಲಿ ಕುವೆಂಪು ಹೆಣ್ಣನ್ನು ಗ್ರಹಿಸುತ್ತಾರೆ. ತಮ್ಮ ಕಾವ್ಯದಲ್ಲಿ ಕುವೆಂಪು ಚಿತ್ರಿಸುವ ಹೆಣ್ಣಿಗೂ 'ಸುಬ್ಬಮ್ಮ ಹೆಗ್ಗಡಿತಿ'ಯಲ್ಲಿ ಚಿತ್ರಿಸುವ ಹೆಣ್ಣಿಗೂ ಅಪಾರ ವ್ಯತ್ಯಾಸವಿದೆ. ಇದು ಕುವೆಂಪು ಅವರೊಳಗಿನ ಹೆಣ್ಣಿನ ಚಿತ್ರಗಳ ನಡುವಿನ ಸಂಘರ್ಷವೆಂದೂ ಕಾಣುತ್ತದೆ. ಬೇಂದ್ರೆಯವರಲ್ಲಿ ಇದೊಂದು ಪ್ರಕ್ರಿಯೆ ಎಂಬಂತೆಯೇ ಕಾಣುತ್ತದೆ. 'ಮನದನ್ನೆ'ಯಿಂದ 'ಸಖೀಗೀತ'ದ ತನಕ ಶಾಲ್ಮಲ ನದಿಯಲ್ಲಿ ಬಹಳಷ್ಟು ನೀರು ಹರಿದಿದೆ. 'ಸಖೀಗೀತ'ದ ಹೆಣ್ಣು ಗಂಡಿಗಿಂತ ಎತ್ತರದ ವ್ಯಕ್ತಿತ್ವದವಳು ಎನ್ನುವ ಅರಿವನ್ನೂ ಕಾಣಿಸುತ್ತದೆ. ಪುತಿನರ ಅಹಲ್ಯೆ ಗಂಡಿನ ಅಕಾರಣ ಅಹಂಕಾರದೆಡೆಗೆ ಬೆರಳು ಮಾಡಿ ತೋರಿಸುತ್ತಾಳೆ. ಗಂಡಿನ ಕ್ರೌರ್ಯವನ್ನು ತೋರಿಸುತ್ತಲೇ ಹೆಣ್ಣಿನ ಸಾಧ್ಯತೆಗಳನ್ನೂ ತೆರೆದಿಡುತ್ತಾಳೆ. ಈ ಸಾಧ್ಯತೆಗಳನ್ನು ಮುಕ್ತಮನಸ್ಸಿನಿಂದ ಒಪ್ಪಿಕೊಳ್ಳುವುದರಲ್ಲಿಯೇ ಪುತಿನರ ದೃಷ್ಟಿಕೋನವೂ ಸ್ಪಷ್ಟವಾಗುತ್ತಾ ಹೋಗುತ್ತದೆ. ದುರ್ದಮ್ಯವಾದ ದೇಹ ಮತ್ತು ದೇಹ ಸಖ್ಯಗಳನ್ನು ಅಷ್ಟೇ ತೀವ್ರತೆಯಲ್ಲಿ ಪುತಿನ ಚಿತ್ರಿಸುತ್ತಾರೆ.



ಕಾರಂತ ಕುವೆಂಪು ಬೇಂದ್ರೆ ಪುತಿನ



ಲಂಕೇಶ್ ಶಾಂತಿನಾಥ ದೇಸಾಯಿ ತೇಜಸ್ವಿ ಅನಂತ ಮೂರ್ತಿ

ಸ್ವಘೋಷಿತ ನವ್ಯರಲ್ಲಿ ಲಂಕೇಶ್ ಮತ್ತು ಶಾಂತಿನಾಥ ದೇಸಾಯರು ಮಾತ್ರ ಈ ಪ್ರಶ್ನೆಯನ್ನು ಘನವಾಗಿ ಎದುರಾದವರು. ದೇಸಾಯರ ಸಂವೇದನೆಯೇ ಆಧುನಿಕವಾದ್ದರಿಂದ ಅವರಿಗೆ ಹೆಣ್ಣನ್ನು ಅವಳ ಸಹಜ ನೆಲೆಗಳಲ್ಲಿ ಗುರುತಿಸುವುದರಲ್ಲಾಗಲೀ ಅವುಗಳೊಂದಿಗೆ ಸಂವಾದ ನಡೆಸುವುದರಲ್ಲಾಗಲೀ ದೊಡ್ಡ ತೊಡಕುಗಳು ಕಾಣಿಸುವುದಿಲ್ಲ. 'ಮುಕ್ತಿ'ಯ ಕಾಮಿನಿಯಾಗಲಿ, ಕ್ಷಿತಿಜದ ಮಂದಾಕಿನಿಯಾಗಲಿ ಹೊಸ ಹೆಣ್ಣಿನ ಸಹಜತೆಯೊಂದಿಗೆ ಕಾಣಿಸುವುದಕ್ಕೆ ಮುಖ್ಯ ಕಾರಣ, ಅವರ ಈ ಆಧುನಿಕ ಸಂವೇದನೆಯೇ ಅನಿಸುತ್ತದೆ. ಲಂಕೇಶರಲ್ಲಿ ಮಾತ್ರ ಇದೊಂದು ಅಸಾಧಾರಣ ಪಲ್ಲಟವಾಗಿ ಬೆಳವಣಿಗೆ ಹೊಂದಿತು. ಸೋದ್ದಿಶ್ಯತೆ ಮತ್ತು ಸಂವೇದನೆ ಎರಡೂ ಅವರಲ್ಲಿ ಅಖಂಡವಾಗಿ ಬೆರೆತಿದ್ದರಿಂದ ಅವರ ಸ್ತ್ರೀಪಾತ್ರಗಳು ಸ್ವಯಂಪ್ರಭೆಯರಾಗಿ ತಮ್ಮ ಉಜ್ವಲತೆಯಿಂದ ಬೆಳಗುತ್ತಾರೆ. ಇದಕ್ಕೆ ಲಂಕೇಶರು ಹೆಣ್ಣನ್ನು ಕುರಿತಂತೆ ಸಾವಯವ ಎನ್ನಬಹುದಾದ ಪ್ರಕ್ರಿಯೆಯೊಂದಕ್ಕೆ ತೆರೆದುಕೊಂಡದ್ದೇ ಕಾರಣವಿರಬೇಕು. ಪತ್ರಿಕೆಯ ಮೂಲಕ ಸಾರ್ವಜನಿಕ, ಸಾಮುದಾಯಿಕ ಮನೋವಿನ್ಯಾಸದೊಂದಿಗೆ ಅವರು ಆರಂಭಿಸಿದ ಮಾತುಕತೆಯೂ ಕಾರಣವಾಗಿ ಕ್ರಾಂತಿಕಾರಕವಾದ ಪಲ್ಲಟವೊಂದಕ್ಕೆ ಇದು ನಾಂದಿಯಾಯಿತು. ಇವರ 'ಕಲ್ಲು ಕರಗುವ ಸಮಯ' ಒಂದು ದಿಕ್ಸೂಚಿಯಂತೆಯೇ ನನಗೆ ಕಾಣಿಸುತ್ತದೆ. ಜಾತಿ ಮತ್ತು ಹೆಣ್ಣು ಎರಡನ್ನೂ ಕುರಿತಂತೆ ಲಂಕೇಶರು ಕನ್ನಡ ಜಗತ್ತಿಗೆ ಹೊಸ ದಾರಿಯೊಂದನ್ನೇ ತೋರಿಸಿದರು. ಇದರ ಮಹತ್ವ ನಮಗೆ ಸ್ಪಷ್ಟವಾಗುವುದು ಅನಂತಮೂರ್ತಿಯವರೊಂದಿಗೆ ಅಥವಾ ತೇಜಸ್ವಿಯವರೊಂದಿಗೆ ಈ ಬೆಳವಣಿಗೆಯನ್ನು ಇಟ್ಟು ನೋಡಿದಾಗ. ಅನಂತಮೂರ್ತಿಯವರಿಗೆ ಕೊನೆಗೂ ಹೆಣ್ಣನ್ನು ಜೀವಕಾಮದಿಂದ ಆಚೆಗೆ ಗ್ರಹಿಸುವುದೇ ಸಾಧ್ಯವಾಗಲಿಲ್ಲ. 'ಸಂಸ್ಕಾರ'ದ ಚಂದ್ರಿಯಿಂದ ಹಿಡಿದು 'ಪಚ್ಚೆ ರೆಸಾರ್ಟ್'ನ ಬಾಗೀರತಿಯ ತನಕ. ತೇಜಸ್ವಿಯವರಿಗೆ ಈ ಸವಾಲು ಮುಖ್ಯ ಎಂದೇ ಅನಿಸಲಿಲ್ಲವೋ, ಅದಕ್ಕೆ ಬೇಕಾದ ತಯಾರಿಯೇ ಇರಲಿಲ್ಲವೋ, ಬದುಕನ್ನು ಅದರ ಅಖಂಡತೆಯಲ್ಲಿಯೇ ನೋಡಲು ಹೊರಟ ಇವರಿಗೆ ಹೆಣ್ಣಿನ ಪ್ರಶ್ನೆ ಅದರಲ್ಲಿಯೇ ಅಂತರ್ಗತವಾಗಿದೆ ಎನಿಸಿಬಿಟ್ಟಿತೋ! ಒಟ್ಟಿನಲ್ಲಿ ಅದು ಮುಖ್ಯ ನೆಲೆಗೆ ಬರಲಿಲ್ಲ. 'ಕಿರಗೂರಿನ ಗಯ್ಯಾಳಿಗಳು' ಗಯ್ಯಾಳಿಗಳಾಗಿ ತಮ್ಮ ಪಾತ್ರವನ್ನು ತುಸು ಬದಲಿಸಿಕೊಂಡು ಮತ್ತೆ ತಮ್ಮ ಸ್ಥಾಪಿತ ಪಾತ್ರಕ್ಕೆ ವಾಪಸಾಗುವವರಂತೆ ಕಾಣಿಸುತ್ತಾರೆ. ಆದರೆ ಲಂಕೇಶರಲ್ಲಿ ಮಾತ್ರ ಈ ಹೆಣ್ಣುಮಕ್ಕಳು ತಮ್ಮ ಆತ್ಮಸೌಂದರ್ಯದಿಂದ ನಮ್ಮ ಗಮನ ಸೆಳೆಯುತ್ತಾರೆ. ರಂಗವ್ವನಾಗಲಿ, ದೇವಿ ಸುಭದ್ರೆಯರಾಗಲಿ, ಶ್ಯಾಮಲೆಯಾಗಲಿ. ಇವರೆಲ್ಲರ ಆತ್ಮವಿಶ್ವಾಸವೇ ನಮ್ಮ ಗಮನ ಸೆಳೆಯುತ್ತದೆ.

ಇತ್ತೀಚಿನ ಲೇಖಕರ ಬಗ್ಗೆ ಮತ್ತೊಮ್ಮೆ ಯಾವಾಗಲಾದರೂ ಚರ್ಚಿಸಬಹುದು. ಒಟ್ಟಿನಲ್ಲಿ ಹೆಣ್ಣನ್ನು ಕುರಿತಂತೆ ಪ್ರೀತಿ, ಕೃತಜ್ಞತೆಗಳು ಅಲ್ಲಲ್ಲಿಯಾದರೂ ಕಾಣಿಸುವಂತೆ ಗೌರವ ಕಾಣಿಸುವುದು ತೀರಾ ಕಡಿಮೆಯೇ. ಹೆಣ್ಣಿನ ಪ್ರಯತ್ನವಿರುವುದು ಇದಕ್ಕಾಗಿ



(ಬೆಂಗಳೂರಿನ ಕಾಲೇಜೊಂದರಲ್ಲಿ ಕನ್ನಡ ಅಧ್ಯಾಪಕಿಯಾಗಿರುವ ಆಶಾದೇವಿಯವರು ಕನ್ನಡದ ಪ್ರಮುಖ ಸಾಹಿತ್ಯ ಚಿಂತಕಿಯರಲ್ಲೊಬ್ಬರಾಗಿದ್ದಾರೆ)

ನಮ್ಮಮ್ಮ : ಹುಟ್ಟು ಹೋರಾಟಗಾರ್ತಿ ಅನಸೂಯಮ್ಮ

ವ್ಯಕ್ತಿ ಚಿತ್ರ

-ಅಖಿಲಾ ವಿದ್ಯಾಸಂದ್ರ



ಅಮ್ಮ, 'ನನ್ನ ಅಮ್ಮ'ನಿಗಿಂತ 'ನಮ್ಮಮ್ಮ' ಆಗಿದ್ದೇ ಹೆಚ್ಚು. ನಮ್ಮ ಹಾಗೂ ಸುತ್ತಮುತ್ತಲಿನ ಹಳ್ಳಿಯ ನಮ್ಮ ಓರಿಗೆಯ ಬಹುತೇಕ ಎಲ್ಲಾ ಮಕ್ಕಳಿಗೂ ಮತ್ತು ಯಾವುದೋ ಸಾಮಾಜಿಕ-ಕೌಟುಂಬಿಕ ಸಮಸ್ಯೆಗಳಿಂದ ಬಂದು ಸಮಸ್ಯೆಗೆ ಸಮಾಧಾನ ದೊರಕುವವರೆಗೆ ಅರಳಾಳುಸಂದ್ರದ ನಮ್ಮ ಮನೆಯಲ್ಲೇ ಉಳಿಯುತ್ತಿದ್ದ ಎಲ್ಲ ಹೆಣ್ಣುಮಕ್ಕಳಿಗೂ ಅಮ್ಮ ಅಮ್ಮನೇ ಆಗಿದ್ದರು.

ಅಮ್ಮ ನಮ್ಮ ತಂದೆ ಸೋಮಲಿಂಗಯ್ಯನವರ ಎರಡನೇ ಪತ್ನಿಯಾಗಿ(ಮೊದಲ ಪತ್ನಿಯ ನಿಧನಾನಂತರ) ಕನಕಪುರದಿಂದ ಚನ್ನಪಟ್ಟಣದ ಸಮೀಪದ ಅರಳಾಳುಸಂದ್ರ ಎಂಬ ಹಳ್ಳಿಗೆ ಬಂದಾಗ, ಊರಿನಲ್ಲಿ ಪಟೇಲನ ಉಪಟಳ ಅತಿಯಾಗಿತ್ತು. ಸ್ತ್ರೀಪೀಡನೆ, ಭೂ ಒತ್ತುವರಿ ಇತ್ಯಾದಿಗಳಿಗೆ ಹೆಸರಾಗಿದ್ದ ಇಂತಹ ಪಟೇಲನನ್ನು ಎದುರಿಸಲು ಕಾಲ ಕೂಡಿಬಂದದ್ದು ರಾಜ್ಯದಲ್ಲಿ 'ಉಳುವವನಿಗೇ ಭೂಮಿ' ಕಾನೂನು ಜಾರಿಯಾದಾಗ. ಸ್ವಲ್ಪ ಪ್ರಜ್ಞಾವಂತರಾಗಿದ್ದ ಸಮಾಜವಾದಿ ವಿಚಾರಗಳ ಪರಿಚಯವಿದ್ದ ನಮ್ಮ ತಂದೆ ನನ್ನ ಅಮ್ಮ ಅನುಸೂಯಮ್ಮನವರ ಪ್ರೋತ್ಸಾಹ-ಸಹಕಾರಗಳೊಂದಿಗೆ ಊರಿನ ಗೇಣಿದಾರರ ಪರವಾದ ಗಾಂಧಿ ಮಾರ್ಗದ ಅಹಿಂಸಾತ್ಮಕ ಹೋರಾಟ ಆರಂಭಿಸಿದರು. ಇಂತಹ ಹೋರಾಟದಲ್ಲಿ ಪಟೇಲನ ಕಡೆಯಿಂದ ನಡೆದ ಹಿಂಸಾಚಾರವೊಂದರಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟು, ಅಪ್ಪಾಜಿಗೂ ತುಂಬಾ ಪೆಟ್ಟು ಬಿದ್ದು ಪ್ರಜ್ಞೆ ಕಳೆದುಕೊಂಡಾಗ ಅವರು ಸತ್ತಿದ್ದಾರೆಂದು ತಿಳಿದು ಹಲ್ಲೆಕಾರರು ಬಿಟ್ಟುಹೋದರಂತೆ. ಆ ಸಂದರ್ಭದಲ್ಲಿ ಅಮ್ಮ ಸಂಪೂರ್ಣ ಮುಂದಾಳತ್ವ ವಹಿಸಿ ಊರಿನ ಇತರರ ಸಹಾಯದಿಂದ ಗಾಯಗೊಂಡ ಎಲ್ಲರನ್ನೂ ಆಸ್ಪತ್ರೆಗೆ ಸೇರಿಸಿ ಗೇಣೀದಾರರ ಮನೆಯವರಿಗೆಲ್ಲ ಧೈರ್ಯ ತುಂಬಿ ಪೋಲೀಸು, ಆಸ್ಪತ್ರೆ, ಕೋರ್ಟು, ಎಲ್ಲ ಕಡೆಯೂ ಗಮನ ಹರಿಸಿ ಹೋರಾಟ ಮುಂದುವರೆಯುವಂತೆ ನೋಡಿಕೊಂಡರು. ಅಲ್ಲಿಂದ ಆರಂಭವಾದ ಅಮ್ಮನ ಸಾಮಾಜಿಕ ಹೋರಾಟದ ಬದುಕು ಹಲವು ಹಂತಗಳನ್ನು ದಾಟಿ ಅಪ್ಪ ನಿಧನರಾದ ಅನೇಕ ವರ್ಷಗಳ ನಂತರವೂ ಬೆಳೆದು ಮುಂದುವರೆಯುತ್ತಲೇ ಇದೆ! ನಮ್ಮಮ್ಮನ ಈ ಹೋರಾಟದ ಬದುಕಿನ ವಿವರಗಳನ್ನು ನೋಡಿದಾಗ ನನಗೆ 'ನಮ್ಮಮ್ಮ'ನ ಬಗ್ಗೆ ನಿಜವಾಗಿಯೂ ಹೆಮ್ಮೆ ಎನಿಸುತ್ತದೆ.

ಊರಿನಲ್ಲಿನ ಗೇಣಿ ಹೋರಾಟದ ಯಶಸ್ಸಿನ ನಂತರ ಸ್ವಲ್ಪ ವಿದ್ಯಾವಂತೆಯೂ, ತವರಿನಲ್ಲಿ ಕಂಡಿದ್ದ ಸ್ತ್ರೀ ಶೋಷಣೆಯ ವಿರುದ್ಧದ ಕೆಚ್ಚಿನಿಂದಲೂ ಅಮ್ಮ ಊರಿನಲ್ಲಿ ಊರ ಮಹಿಳೆಯರನ್ನು ಸೇರಿಸಿ 'ಶಾರದಾ ಮಹಿಳಾ ಸಂಘ'ವನ್ನು ಕಟ್ಟಿ ಅದರ ಮೂಲಕ ಹೆಣ್ಣುಮಕ್ಕಳಿಗೆ ಆರೋಗ್ಯದ, ಸ್ವಾವಲಂಬನೆಯ ಮತ್ತು ಅನ್ಯಾಯಗಳ ವಿರುದ್ಧ ಹೋರಾಡುವ ಕೆಚ್ಚನ್ನು ಕಲಿಸಿದರು. ವಯಸ್ಕರ ಶಿಕ್ಷಣ ಶಾಲೆಯನ್ನು ತೆರೆದು ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಜಾಗೃತಿ ಮೂಡಿಸಿದರು. ಇದರ ಜೊತೆಗೇ ಸರ್ಕಾರದಲ್ಲಿದ್ದ ಒಳ್ಳೆಯ ಅಧಿಕಾರಿಗಳನ್ನು ಸಂಪರ್ಕಿಸಿ ಊರಿನ ದಲಿತರು ಮತ್ತು ನಿರ್ಗತಿಕರಿಗೆ ನಿವೇಶನ ಸಿಗುವಂತೆ ಮಾಡಿ, ಊರ 'ಹೊಲಗೇರಿ' ಊರೊಳಗೇ ಲೀನವಾಗಿ ಊರು ನಿಜವಾದ ಅರ್ಥದಲ್ಲಿ ಜಾತ್ಯತೀತವಾಗುವಂತೆ ಮಾಡಿದರು. ಆ ಕಾಲದಲ್ಲಿ ಇದೇನೂ ಸಾಮಾನ್ಯ ಸಾಧನೆಯಾಗಿರಲಿಲ್ಲ. ಈಗ ಅಮ್ಮ ನಮ್ಮ ಊರ ಎಲ್ಲರಿಗೆ, ವಿಶೇಷವಾಗಿ ಮಹಿಳೆಯರಿಗೆ ಬೇಕಾದವಳಾಗಿದ್ದಳು.

ಅಮ್ಮ ನಿಜವಾಗಿ ತನ್ನ ನಾಯಕತ್ವ ಗುಣವನ್ನು ಮೆರೆದದ್ದು, ಹಸಿರು ಕ್ರಾಂತಿಯ ಹಾವಳಿಗೆ ಸಿಕ್ಕಿ ಗ್ರಾಮೀಣ ರೈತರು ಬ್ಯಾಂಕುಗಳಿಂದ ಸಾಲಸೋಲ ಮಾಡಿ ಆ ಸಾಲ ತೀರಿಸಲಾಗದೆ ಬ್ಯಾಂಕಿನವರಿಂದ ಅವಮಾನಕರ ಮನೆ ಜಪ್ತಿಯನ್ನು ಎದುರಿಸಬೇಕಾಗಿ ಬಂದಾಗ. ಬ್ಯಾಂಕಿನವರು, ಸರ್ಕಾರಿ ಅಧಿಕಾರಿಗಳು ಸಾಲ ವಸೂಲಿ, ಜಪ್ತಿಗೆಂದು ಬಂದಾಗ ಊರ ಗಂಡಸರೆಲ್ಲ ಊರು ಬಿಟ್ಟು ಓಡಿ ಹೋಗುತ್ತಿದ್ದರು. ಮನೆಯಲ್ಲಿ ಹೆಂಗಸರು-ಮಕ್ಕಳು ಮಾತ್ರ. ಇದನ್ನೆಲ್ಲ ಪದೇ ಪದೇ ನೋಡಿ ರೋಸಿ ಹೋಗಿದ್ದ ಅನುಸೂಯಮ್ಮ ಒಂದು ಬೆಳಿಗ್ಗೆ ಅಧಿಕಾರಿಗಳು ಹಳ್ಳಿಗೆ ಮನೆ-ಮನೆ ಜಪ್ತಿಗೆಂದು ಬಂದಾಗ ಊರ ಹೆಂಗಸರನ್ನೆಲ್ಲ ಸಂಘಟಿಸಿ ಅವರನ್ನೆಲ್ಲ ತಂತಮ್ಮ ಮನೆ ಬಾಗಿಲ ಬಳಿ ಕೂರಿಸಿ ಅಧಿಕಾರಿಗಳು ಮನೆ ಸಾಮಾನುಗಳನ್ನು ಜಪ್ತಿ ಮಾಡಲು ಮನೆಯೊಳಕ್ಕೆ ಪ್ರವೇಶಿಸದಂತೆ ತಡೆದರು. ಆದರೆ ಮಹಿಳೆಯರನ್ನು ಅಲ್ಲಿಂದ ಜಾಗ ಖಾಲಿ ಮಾಡಿಸಲು ವಿಫಲರಾದ ಅಧಿಕಾರಿಗಳು ಹಠಕ್ಕೆ ಬಿದ್ದು ಭದ್ರ ಕಾವಲಿಲ್ಲದ ಒಂದು ಮನೆಯನ್ನು ಹಿಂದಿನ ಬಾಗಿಲಿಂದ ಪ್ರವೇಶಿಸಿದರು. ಇದನ್ನು ತಿಳಿದ ಅಮ್ಮ ಕೂಡಲೇ ಕಾರ್ಯಪ್ರವೃತ್ತರಾದರು. ಆ ಮನೆಯೊಳಕ್ಕೆ ಒಣ ಮೆಣಸಿನ ಕಾಯಿ ಘಾಟು ತುಂಬಿಸಿ ಎಲ್ಲ ಕಿಟಕಿ ಬಾಗಿಲುಗಳನ್ನೂ ಎಳೆದು ಭದ್ರ ಮಾಡಿದರು! ಒಳಗಿದ್ದ ಅಧಿಕಾರಿಗಳು ಗಾಬರಿಯಾದರು. ಪಾಪ ಕೆಮ್ಮಿ ಕೆಮ್ಮಿ, ಕಣ್ಣು-ಮೂಗಲ್ಲೆಲ್ಲಾ ನೀರು ತುಂಬಿಕೊಂಡು ವಾಂತಿ ಬರುವ ಹಾಗಾಗಿ, 'ಅಯ್ಯೋ, ನಮ್ಮನ್ನು ಬಿಟ್ಟುಬಿಡಿ ಇನ್ನೊಮ್ಮೆ ನಿಮ್ಮ ಊರಿಗೆ ಬರುವುದೇ ಇಲ್ಲ' ಎಂದು ಬೇಡಿ, ಪ್ರಮಾಣ ಮಾಡುವವರೆಗೂ ಇವರು ಅವರನ್ನು ಹೊರಗೆ ಬಿಟ್ಟಿರಲಿಲ್ಲವಂತೆ. ನಂತರ ನಮ್ಮೂರಿನಲ್ಲಿ ಜಪ್ತಿ ನಡೆಯಲೇ ಇಲ್ಲ!

ಅಮ್ಮನ ಹೋರಾದ ಬದುಕಿಗೆ ಒಂದು ತಾತ್ವಿಕ ತಳಹದಿ ಒದಗಿದ್ದು ರಾಷ್ಟ್ರದ ಪಕ್ಷಾತೀತ ಸಮಾಜವಾದಿಗಳು ೧೯೮೦ರಲ್ಲಿ ಪುನರ್‌ಸಂಘಟಿತರಾಗುವ ಒಂದು ಪ್ರಯತ್ನವಾಗಿ ಕಿಷನ್ ಪಟ್ನಾಯಕ್ ಅವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ 'ಸಮತಾ ಸಮಾವೇಶ'ದ ಸಂದರ್ಭದಲ್ಲಿ. ಈ ಸಮಾವೇಶದ ಸ್ಫೂರ್ತಿಯಲ್ಲಿ ರವಿವರ್ಮ ಕುಮಾರ್ ಮತ್ತವರ ಕೆಲವು ಗೆಳೆಯರು ಲೋಹಿಯಾ ವಿಚಾರಗಳ ಪ್ರಚಾರಕ್ಕಾಗಿ 'ಲೋಹಿಯಾ ಸಮತಾ ವಿದ್ಯಾಲಯ'ವೊಂದನ್ನು ಸ್ಥಾಪಿಸಲು ಉದ್ದೇಶಿಸಿ, ಅದಕ್ಕಾಗಿ, ಹೋರಾಟಗಳ ಕೇಂದ್ರವಾಗಿದ್ದ ನಮ್ಮೂರು ಅರಳಾಳುಸಂದ್ರವನ್ನು ಆಯ್ದುಕೊಂಡರು. ಅಲ್ಲಿ ಒಂದಿಷ್ಟು ಅರಣ್ಯಭೂಮಿಯನ್ನು ಕೊಂಡು ಒಂದು ಸಣ್ಣ ಷೆಡ್ ಹಾಕಲಾಯಿತು. ಶಾಲೆಗೆ ಹೋಗದ ಹಳ್ಳಿ ಮಕ್ಕಳ ಅನೌಪಚಾರಿಕ ವಿದ್ಯಾಭ್ಯಾಸ ಮತ್ತು ಸಣ್ಣಪುಟ್ಟ ಕುಟೀರ ಕೈಗಾರಿಕೆಗಳೂ ಆರಂಭವಾದವು. ಸಾಮಾಜಿಕ ಬದ್ಧತೆಯ ಕೆಲವು ಯುವಕರು ಇಲ್ಲಿ ಕಾರ್ಯಕರ್ತರಾಗಿ ದುಡಿಯಲೂ ಬಂದರು. ನಮ್ಮಮ್ಮನೇ ಅದರ ಸೂತ್ರಧಾರಿಣಿ. ಅಲ್ಲಿ ಹಲವು ಸಮಾಜವಾದಿ ಅಧ್ಯಯನ ಶಿಬಿರಗಳು ನಡೆದವು. ಆಗಲೇ ಅಮ್ಮ ನಿಜವಾಗಿ ಗಾಂಧಿ-ಲೋಹಿಯಾ-ಅಂಬೇಡ್ಕರ್ ವಿಚಾರಗಳನ್ನು ಮನದಟ್ಟು ಮಾಡಿಕೊಂಡದ್ದು ಅನಿಸುತ್ತದೆ. ನಾನಾಗ ಪುಟ್ಟ ಮಗು. ನಾನು ಏಳನೇ ತರಗತಿಯವರೆಗೂ ಆ ವಾತಾವರಣದಲ್ಲೇ ಇದ್ದು ಕಲಿತು ಬೆಳೆದೆ.

ಇದೇ ಹೊತ್ತಿಗೆ ನರಗುಂದ ನವಲುಗುಂದ ಗೋಲೀಬಾರ್ ಪರಿಣಾಮವಾಗಿ ರೈತ ಹೋರಾಟದ ಗಾಳಿ ಉತ್ತರ ಕರ್ನಾಟಕ, ಶಿವಮೊಗ್ಗ, ಮೈಸೂರು, ಬೆಂಗಳೂರುಗಳನ್ನು ಆವರಿಸಿಕೊಳ್ಳುತ್ತಿತ್ತು. ಆ ಹೊತ್ತಿಗೆ ಪರಿಚಯವಾಗಿದ್ದ ಕಡಿದಾಳು ಶಾಮಣ್ಣ ಮತ್ತು ಇತರ ಸಮಾಜವಾದಿಗಳ ದಾರಿಯಲ್ಲಿಯೇ ೧೯೮೦ರಲ್ಲಿ ಅಮ್ಮ ಮತ್ತು ಅಪ್ಪಾಜಿ ರೈತ ಸಂಘ ಸೇರಿದರು. ಅಮ್ಮ, ರೈತಸಂಘದಲ್ಲಿ ಮೊದಲ ಮಹಿಳಾ ರಾಜ್ಯ ಸಂಚಾಲಕಿಯಾಗಿ ರೈತ ಹೋರಾಟದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದು ಈಗ ಇತಿಹಾಸ.

ರೈತ ಚಳುವಳಿಯ ಭಾಗವಾಗಿ ಅಮ್ಮ ಭಾಗವಹಿಸಿದ ಮೊದಲ ಕಾರ್ಯಕ್ರಮ ಬಹುಶಃ 'ಸ್ಥಳೀಯ ಸಂಪನ್ಮೂಲಗಳು ಸ್ಥಳೀಯ ಬಳಕೆಗೇ' ಕರೆಯ ಮೇರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಡೆದಿದ್ದ ಕಲ್ಲುಗಣಿ ಉದ್ಯಮದ ವಿರುದ್ಧದ ಪ್ರತಿಭಟನೆ. ಈ ಪ್ರತಿಭಟನೆ ಬೃಹದಾಕಾರವಾಗಿ ಬೆಳೆದು ಬಳ್ಳಾರಿ ಸೆರೆಮನೆ

ಸೇರಿದ ನೂರಾರು ಚಳುವಳಿಕಾರರಲ್ಲಿ ಅಮ್ಮನೂ ಒಬ್ಬಳು. ಅಲ್ಲಿಂದಾಚೆ ಅಮ್ಮ ಭಾಗವಹಿಸಿದ ಪ್ರತಿಭಟನೆ, ಧರಣಿ, ಜಾಥಾಗಳು ಎಷ್ಟೋ! ಒಂದಿಷ್ಟು ಒಣಭೂಮಿ ಬೇಸಾಯದ ಹೊರತಾಗಿ ಮನೆಯ ಕಡೆ ಹೆಚ್ಚು ಅನುಕೂಲವಿಲ್ಲದಿದ್ದರೂ, ರೈತ ನಾಯಕರ ಯಾವುದೇ ಕರೆಯನ್ನೂ ನಿರಾಕರಿಸದೆ ಎಲ್ಲಂದರಲ್ಲಿಗೆ ಮನೆಯಿಂದಲೇ ಚಪಾತಿ, ಚಟ್ನಿಪುಡಿ ಕಟ್ಟಿಕೊಂಡು ಹೊರಟುಬಿಡುತ್ತಿದ್ದರು. ಒಂದೆರಡು ದಿನ ಹೆಚ್ಚಿಗೆ ಇರಬೇಕಾಗಿ ಬಂದಾಗ ಬಾಳೆಹಣ್ಣು–ಕಡ್ಲೆಕಾಯಿ ತಿಂದು ದಿನ ದೂಡಿದ್ದೂ ಉಂಟು.

ಅಮ್ಮನನ್ನು ಬಿಟ್ಟರೆ ಬೇರಾವುದೇ ಹೆಣ್ಣುಮಗಳು ರೈತಸಂಘದ ಹೋರಾಟದ ಮುಂಚೂಣಿಯಲ್ಲಿರಲ್ಲ. ಆ ಸಮಯದಲ್ಲಿ ಮಂಡ್ಯದ ಸುನಂದ ಜಯರಾಂರವರನ್ನು ಅಮ್ಮ ತಮ್ಮ ಜೊತೆಗೆ ಸೇರಿಸಿಕೊಂಡು ಹುರಿದುಂಬಿಸಿ ಅವರನ್ನೂ ಮುಂಚೂಣಿಗೆ ತರುವಲ್ಲಿ ಶ್ರಮಿಸಿ ಯಶಸ್ವಿಯಾದರು. ಅಮ್ಮ ರೈತ ಸಂಘದಲ್ಲಿದ್ದಾಗಲೇ ದಲಿತ ಸಂಘರ್ಷ ಸಮಿತಿಯ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದರು. ಕೆಲವೆಡೆ ಎರಡೂ ಸಂಘಟನೆಗಳು ಒಟ್ಟಿಗೆ ಸೇರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದವು. ಇವುಗಳಲ್ಲಿ ಮುಖ್ಯವಾದದ್ದು ಸರಳ ಮತ್ತು ಅಂತರ್‌ಜಾತೀಯ ವಿವಾಹಗಳ ಆಯೋಜನೆ. ಅಮ್ಮ ಇಂತಹ ನೂರಾರು ವಿವಾಹಗಳನ್ನು ನಡೆಸಿದ್ದಾರೆ. ಈಗಲೂ ನಡೆಸುತ್ತಿದ್ದಾರೆ. ಅಮ್ಮನ ಈ ಕೆಲಸ ನಮಗೂ ಸ್ಫೂರ್ತಿಯಾಗಿದೆ.

ರೈತ ಚಳುವಳಿಯ ಭಾಗವಾಗಿ ಅಮ್ಮ ಅನೇಕ ಬಾರಿ ಪೋಲಿಸ್ ದೌರ್ಜನ್ಯಕ್ಕೂ ಒಳಗಾಗಿದ್ದುಂಟು. ಆಗ ಪೋಲೀಸರನ್ನು ದಿಟ್ಟವಾಗಿ ಪ್ರಶ್ನಿಸುತ್ತಿದ್ದ ಅಮ್ಮ ಅದರಿಂದಾಗಿಯೇ ಇನ್ನೂ ಹೆಚ್ಚು ದೌರ್ಜನ್ಯವನ್ನು ಎದುರಿಸಬೇಕಾಗಿ ಬರುತ್ತಿತ್ತು. ಒಮ್ಮೆ ತುಮಕೂರು ಜೈಲಿನಲ್ಲಿದ್ದಾಗ ಅಲ್ಲಿ ಅರೆಹುಚ್ಚಿ ಸ್ಥಿತಿಯಲ್ಲಿದ್ದ ಮಹಿಳಾ ಕೈದಿಯ ಮೇಲೆ ನಡೆಯುತ್ತಿದ್ದ ಅಮಾನುಷ ಹಲ್ಲೆಯನ್ನು ಪ್ರತಿಭಟಿಸಿ ಮೇಲಧಿಕಾರಿಗಳವರೆಗೂ ಅಮ್ಮ ದೂರು ಒಯ್ದು ಆಕೆಗೆ ನ್ಯಾಯ ಒದಗಿಸಿದ್ದೂ ಉಂಟು. ರಾಜ್ಯಾದ್ಯಂತ ಓಡಾಡಿ ೧೯೮೭ರಲ್ಲಿ ಉ.ಕನ್ನಡದ ಹಳಿಯಾಳದಲ್ಲಿ ಸುಮಾರು ಎಪ್ಪತ್ತು ಸಾವಿರ ಜನ ಮಹಿಳೆಯರನ್ನು ಸೇರಿಸಿ ರೈತ ಮಹಿಳಾ ಸಮಾವೇಶವನ್ನು ಆಯೋಜಿಸಿದ್ದು ಅಮ್ಮನ ಸಂಘಟನಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿತ್ತು. ವಿಪರ್ಯಾಸವೆಂದರೆ, ಆ ಸಮಾವೇಶದ ವೇದಿಕೆಯ ಮೇಲೆ ಇದ್ದವರೆಲ್ಲ ಪುರುಷ ನಾಯಕರೇ. ಇದನ್ನು ಯಾರೋ ಗಮನಿಸಿದಾಗ ಅಮ್ಮನನ್ನೂ ವೇದಿಕೆಗೆ ಕರೆಯಲಾಯಿತಂತೆ! ಬಹುಶಃ ಇದೇ ರೈತ ಸಂಘದ ಉನ್ನತ ನಾಯಕತ್ವದ ಕೆಟ್ಟ ಕಣ್ಣು ಅಮ್ಮನ ಮೇಲೆ ಬೀಳಲೂ ಕಾರಣವಾಯಿತೇನೋ!

ಎಂಬತ್ತರ ದಶಕದ ಕೊನೆಯ ವರ್ಷಗಳಲ್ಲಿ ರಾಜ್ಯದಲ್ಲಿ ಪರ್ಯಾಯ ರಾಜಕೀಯ ಶಕ್ತಿ ನಿರ್ಮಾಣ ಮಾಡುವ ಚರ್ಚೆ ಆರಂಭವಾಗಿ, ರೈತ, ದಲಿತ ಸಂಘಗಳು, ಲಂಕೇಶರ 'ಪ್ರಗತಿ ರಂಗ' ಹಾಗೂ ಭಾಷಾ ಮತ್ತು ಪರಿಸರ ಚಳುವಳಿಕಾರರು ಒಟ್ಟುಗೂಡಿ ಒಂದು ರಾಜಕೀಯ ಪಕ್ಷ ರಚಿಸುವ ಪ್ರಸ್ತಾಪವಾದಾಗ ಅಮ್ಮ ಆ ಪ್ರಸ್ತಾಪಕ್ಕೆ ಸಾರ್ವಜನಿಕವಾಗಿ ಬೆಂಬಲ ವ್ಯಕ್ತಪಡಿಸಿದರು. ಅದೇ ನೆಪವಾಗಿ ಅಮ್ಮನನ್ನು ಕಡಿದಾಳು ಶಾಮಣ್ಣ ಮತ್ತು ಇತರ ಹಲವಾರು ನಾಯಕರು ಮತ್ತು ಕಾರ್ಯಕರ್ತರೊಂದಿಗೆ ರೈತ ಸಂಘದಿಂದ ಉಚ್ಚಾಟಿಸಲಾಯಿತು.

ನಮ್ಮಮ್ಮ ಆ ಉಚ್ಚಾಟನೆಯನ್ನು ಸ್ವೀಕರಿಸಲಿಲ್ಲ. 'ನಾನು ರೈತಸಂಘ ಶುರುವಾಗುವ ಮೊದಲಿನಿಂದಲೂ ರೈತ ಹೋರಾಟಗಾರ್ತಿ. ರೈತಸಂಘದಿಂದ ತೆಗೆದುಹಾಕಲು ಅದೇನು ಯಾರದೇ ಸ್ವಂತ ಆಸ್ತಿಯಲ್ಲ' ಎಂದು ಘೋಷಿಸಿದರು. ಸಮಾನ ಮನಸ್ಕರೊಡನೆ ಸೇರಿ ಇನ್ನೊಂದು ಸಂಘಟನೆಯನ್ನು ಕಟ್ಟಿ ಬೆಳೆಸಬಹುದಿತ್ತಾದರೂ, ಅಮ್ಮ ಸಹನೆಯಿಂದ ಕಾದರು. ಮೂಲ ರೈತ ಸಂಘ ಹೋಳಾಗುತ್ತಾ ಹೋಗಿ ಅದರ ನಾಯಕರೂ ಸಾವಿಗೀಡಾದ ಮೇಲೆ ಮತ್ತೆ ರೈತ ಸಂಘವನ್ನು ಪುನರ್‌ಸಂಘಟಿಸುವ ಕೆಲವರ ಪ್ರಯತ್ನದೊಂದಿಗೆ ಅಮ್ಮನೂ ಈಗ ಕೈಜೋಡಿಸಿದ್ದಾರೆ. ಅದು ಏನಾಗುವುದೋ ಕಾದು ನೋಡಬೇಕು.

ಆದರೆ ಇದೆಲ್ಲದರ ಮಧ್ಯೆ ಸುಮ್ಮನಿರದೆ ತಮ್ಮ ಊರಿನ ಸುತ್ತಮುತ್ತ ಸಾಮಾಜಿಕ ಜಾಗೃತಿಯ ಕೆಲಸಗಳನ್ನು ಅಮ್ಮ ಮುಂದುವರೆಸಿದ್ದಾರೆ. ಸಹಾಯ–ಸಲಹೆ ಬೇಡಿ ಬಂದ ಅಸಹಾಯಕ ಮಹಿಳೆಯರಿಗೆ ಆಶ್ರಯ ನೀಡಿ, ಧೈರ್ಯ ತುಂಬಿ ಕಳಿಸುತ್ತಿದ್ದಾರೆ. ರೈತ ಮತ್ತು ಗ್ರಾಮೀಣ ಸಮಸ್ಯೆಗಳನ್ನು ಕುರಿತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಿಗೆ ಹೋಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ಈಗಲೂ, ಗಾಂಧಿ–ಲೋಹಿಯಾ–ಅಂಬೇಡ್ಕರ್ ವಿಚಾರಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳೆಂದರೆ ತುರ್ತು ಮನೆ ಕೆಲಸಗಳಿದ್ದರೂ ಬಿಟ್ಟು ಹೊರಟುಬಿಡುತ್ತಾರೆ! ಅಮ್ಮ ಇದೆಲ್ಲದರ ಮಧ್ಯೆ ಅನಾರೋಗ್ಯಪೀಡಿತರಾಗಿದ್ದ ನನ್ನ ತಂದೆಯನ್ನು ಅವರ ಅಂತ್ಯದವರೆಗೆ ನೋಡಿಕೊಳ್ಳುವ ಜವಾಬ್ದಾರಿಯ ಮಧ್ಯೆಯೇ ತನ್ನಿಬ್ಬರ ಮಕ್ಕಳ ಜೊತೆಗೆ ಓರ್ವ ಸಾಕು ಮಗಳನ್ನೂ ಪೋಷಿಸಿ ಬದುಕಿನಲ್ಲಿ ನೆಲೆ ನಿಲ್ಲುವಂತೆ ಮಾಡಿದ್ದಾರೆ. ಈ ನಮ್ಮಮ್ಮನಿಗೊಂದು ದೊಡ್ಡ ಸಲಾಂ! ಇಂತಹ 'ನಮ್ಮಮ್ಮ'ಗಳು ಈ ನಾಡಿನಲ್ಲಿ ಹೆಚ್ಚಾಗಲಿ!!

ಅಂದಹಾಗೆ ಅಮ್ಮನ ಈ ಸಾಧನೆಗಳನ್ನು ಗುರುತಿಸಿ ಕರ್ನಾಟಕ ಸರ್ಕಾರ ಮೂರು ವರ್ಷಗಳ ಹಿಂದೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ!



(ಬೆಂಗಳೂರಿನಲ್ಲಿ 'ಅನೇಕ' ಎಂಬ ಮಾನವ ಹಕ್ಕುಗಳ ಸ್ವಯಂಸೇವಾ ಸಂಸ್ಥೆಯಲ್ಲಿ ಕಾನೂನು ತರಬೇತಿಗಾರ್ತಿಯಾಗಿರುವ ಅಖಿಲಾ, ರಾಷ್ಟ್ರ ಮಟ್ಟದ ಸಮಾಜವಾದಿ ಸಂಘಟನೆಯಲ್ಲೂ ತೊಡಗಿಕೊಂಡಿದ್ದಾರೆ.)

ವಿಚಾರ

ಶಬರಿಮಲೆ ವಿವಾದದ ಸುತ್ತಮುತ್ತ...

–ಡಾ. ಸುಶಿ ಕಾಡನಕುಪ್ಪೆ



ಕೇರಳದ ಶಬರಿಮಲೆ ದೇವಸ್ಥಾನವು ೧೦ ರಿಂದ ೫೦ ವರ್ಷದೊಳಗಿನ ಮಹಿಳೆಯರಿಗೆ ದೇವಸ್ಥಾನದ ಪ್ರವೇಶವನ್ನು ಪಾರಂಪರಿಕವಾಗಿ ನಿಷೇಧಿಸಿದೆ. ಇದು ಲಿಂಗ ತಾರತಮ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಮಹಿಳೆಯರು ಯಾವುದರಲ್ಲೂ ಪುರುಷರಿಗಿಂತ ಕಡಿಮೆಯಿಲ್ಲವೆಂದು ಸಾಬೀತಾಗಿರುವ ಇಂದಿನ ಆಧುನಿಕ ದಿನಗಳಲ್ಲೂ ಮಹಿಳೆಯರ ಜೈವಿಕ ಕ್ರಿಯೆಯನ್ನು ನೆಪವಾಗಿಸಿ ದೇವಸ್ಥಾನಗಳಿಗೆ ಪ್ರವೇಶ ನಿಷೇಧಿಸಿರುವುದು ಧಾರ್ಮಿಕ ನಂಬಿಕೆಗಳ ಹೆಸರಿನ ಮೌಢ್ಯವೇ ಆಗಿದೆ.

ಶಬರಿಮಲೆ ದೇವಸ್ಥಾನವಷ್ಟೆ ಅಲ್ಲದೆ ನಮ್ಮ ದೇಶದ ಇತರೆ ಪ್ರಮುಖ ದೇವಸ್ಥಾನಗಳಲ್ಲೂ ಮಹಿಳೆಯರ ಪ್ರವೇಶದ ಬಗ್ಗೆ ಹಲವು ಬಗೆಯ ನಿಷೇಧಗಳಿವೆ. ರಾಣಕ್ ಪುರದ ಜೈನ್ ದೇವಸ್ಥಾನ, ಅಸ್ಸಾಮಿನ ಪಟಬೌಸಿ ಸತ್ರ ದೇವಸ್ಥಾನಗಳೂ ಮಹಿಳೆಯರ ಋತುಸ್ರಾವವನ್ನು ಕಾರಣವಾಗಿಟ್ಟುಕೊಂಡು ಪ್ರವೇಶವನ್ನು ನಿರ್ಬಂಧಿಸಿವೆ. ಹಾಗೆಯೇ, ಕೇರಳದ ಪದ್ಮನಾಭಸ್ವಾಮಿ ದೇವಸ್ಥಾನ ಮಹಿಳೆಯನ್ನು ಗರ್ಭಗುಡಿಗೆ ಸೇರಿಸುವುದಿಲ್ಲ. ಪುಷ್ಕರದ ಕಾರ್ತಿಕೇಯ ದೇವಸ್ಥಾನದಲ್ಲಿ ಮಹಿಳೆಯರ ಸನ್ನಿಧಿಯಿಂದ ಕಾರ್ತಿಕೇಯನ ತಪಸ್ಸಿಗೆ ಭಂಗ ಉಂಟಾಗುತ್ತದೆ ಎಂಬ ನಂಬಿಕೆಯಿದ್ದು ಮಹಿಳೆಯು ದೇವಸ್ಥಾನಕ್ಕೆ ಪ್ರವೇಶಿಸಿದರೆ ಕಾರ್ತಿಕೇಯನು ಆಕೆಯನ್ನು ಕಲ್ಲಾಗಿಸುವ ಶಾಪ ಕೊಡುತ್ತಾನೆಂದು ಅವರನ್ನು ದೂರವಿಡಲಾಗಿದೆ. ಹಾಗೇ ಮುಂಬಯಿಯ ಸುಪ್ರಸಿದ್ಧ ಹಾಜಿ ಅಲಿ ದರ್ಗಾದಲ್ಲಿ ಮಹಿಳೆಯರಿಗೆ ಸಮಾಧಿಯ ಬಳಿ ಪ್ರವೇಶವಿಲ್ಲ. ಜುಮ್ಮಾ ಮಸೀದಿಯಲ್ಲೂ ಪ್ರವೇಶಕ್ಕೆ ಹಲವು ರೀತಿಯ ನಿಷೇಧಗಳಿವೆ. ಮಸೀದಿಗೆ ಬರುವ ಗಂಡಸರು ಮಹಿಳೆಯರಿಂದ ಪ್ರಚೋದನೆಗೊಳಗಾಗುತ್ತಾರೆಂಬ ಕಾರಣಗಳನ್ನು ಕೊಟ್ಟಿರುವುದೂ ವರದಿಯಾಗಿದೆ!

ಬಹುಶಃ ನಮ್ಮ ದೇಶದ ಚರ್ಚುಗಳಲ್ಲಿ ಮಾತ್ರ ಗಂಡು ಹೆಣ್ಣು ಇಬ್ಬರಿಗೂ ದೇವರ ದರ್ಶನಕ್ಕೆ ಸಮಾನ ಅವಕಾಶವಿರುವುದೆಂದು ಕಾಣುತ್ತದೆ.

ಹಾಜಿ ದರ್ಗಾವು ೨೦೧೨ರಲ್ಲಿ ಜಾರಿಗೆ ತಂದ ಸಮಾಧಿಯ ಬಳಿ ಮುಸ್ಲಿಮ್ ಮಹಿಳೆಯರ ಪ್ರವೇಶ ನಿಷೇಧವನ್ನು ಪ್ರಶ್ನಿಸಿ ಭಾರತೀಯ ಮುಸ್ಲಿಮ್ ಮಹಿಳಾ ಆಂದೋಲನ ಸಂಘವು ಮಹಾರಾಷ್ಟ್ರ ಹೈಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿತ್ತು. ಮಹಾರಾಷ್ಟ್ರ ಸರ್ಕಾರವು ಈ ವಿಚಾರವಾಗಿ ಮುಂಬಯಿ ಹೈಕೋರ್ಟಿಗೆ ಲಿಂಗ ತಾರತಮ್ಯಕ್ಕೆ ಆಸ್ಪದ ಕೊಡದಂತೆ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದೆ. ಸುಪ್ರೀಮ್ ಕೋರ್ಟಿನಲ್ಲಿ ಕೇರಳದ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಪ್ರವೇಶ ನಿಷೇಧವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ವಿಚಾರಣೆಯ ತೀರ್ಪಿನ ಮೇಲೆ ತನ್ನ ತೀರ್ಪನ್ನು ನಿರ್ಧರಿಸುವುದಾಗಿ ಮಹಾರಾಷ್ಟ್ರ ಹೈಕೋರ್ಟ್ ತಿಳಿಸಿದೆ. ಹಾಗೇ ಔರಂಗಾಬಾದ್‌ನ ಹೈಕೋರ್ಟಿನಲ್ಲಿ ಶನಿ ಶಿಂಗ್ಣಾಪುರ ದೇವಸ್ಥಾನದಲ್ಲಿ ಮಹಿಳೆಯರ ಪ್ರವೇಶ ನಿಷೇಧದ ವಿಚಾರಣೆಯು ಬಾಕಿ ಉಳಿದಿದೆ.

ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮಹಿಳೆಯರಿಗೆ ಪ್ರವೇಶ ವಿವಾದ ಕುರಿತು ಸುಪ್ರೀಮ್ ಕೋರ್ಟ್ ಲಿಂಗ ತಾರತಮ್ಯವೇಕೆ ಎಂದು ಪ್ರಶ್ನಿಸಿದೆ. ಪುರುಷ ಮತ್ತು ಮಹಿಳೆಯರ ನಡುವೆ ದೇವರಿಗೆ ಭೇದ ಇಲ್ಲ ಎಂದಾದರೆ ದೇವಸ್ಥಾನಗಳಲ್ಲಿ ತಾರತಮ್ಯ ಯಾಕೆ ಎಂದು ಅದು ಕೇಳಿರುವುದು ಸ್ವಾಗತಾರ್ಹ. ಈ ವಿಚಾರವನ್ನು ಸಂವಿಧಾನದ ಚೌಕಟ್ಟಿನೊಳಗೆ ಪರಿಶೀಲನಗೆ ಒಳಪಡಿಸುವುದಾಗಿ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರ ನೇತೃತ್ವದ ಪೀಠವು ಹೇಳಿದೆ. ಶಬರಿಮಲೆ ದೇವಸ್ಥಾನ ಪ್ರವೇಶದ ವಿಚಾರವಾಗಿ ವ್ಯಕ್ತವಾಗಿರುವ ಸುಪ್ರೀಮ್ ಕೋರ್ಟಿನ ನಿಲುವು ಹಾಜಿ ದರ್ಗಾ ಮತ್ತು ಶನಿ ಶಿಂಗ್ಣಾಪುರ ದೇವಸ್ಥಾನದ ವಿಚಾರಣೆಗಳಿಗೆ ನಿರ್ಣಾಯಕವಾಗಿ ಪರಿಣಮಿಸಬಹುದು. ಕಾದು ನೋಡಬೇಕಿದೆ.

ಮಹಿಳೆಯರಿಗೆ ದೇವಸ್ಥಾನದ ಪ್ರವೇಶದ ವಿಷಯ ಅಷ್ಟೊಂದು ಮುಖ್ಯವೇ? ದೇವಸ್ಥಾನದ ಪ್ರವೇಶ ಲಿಂಗ ತಾರತಮ್ಯವನ್ನು ಹೋಗಲಾಡಿಸುವುದೆ? ಈ ಪ್ರಶ್ನೆಗಳನ್ನು ಈಗ ಕೇಳಲಾಗುತ್ತಿದೆ. ಆದರೆ ಸಮಾಜದಲ್ಲಿ ಗಂಡು ಹೆಣ್ಣಿಗೆ ಸಮಾನ ಅವಕಾಶವನ್ನು ಪ್ರತಿಪಾದಿಸುವ ನಮ್ಮ ಸಂವಿಧಾನವಿರುವಾಗ, ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶ ಒಂದು ಸಾಂಕೇತಿಕ ರೂಪದಲ್ಲಿ ಮುಖ್ಯವೆನಿಸುತ್ತದೆ. ಧಾರ್ಮಿಕ ನಂಬಿಕೆಯಲ್ಲಿ ಜೀವಿಸುತ್ತಿರುವ ನಮ್ಮ ಸಮಾಜದಲ್ಲಿ ಮಹಿಳೆಯರ ಅಸ್ತಿತ್ವದ ಪ್ರಶ್ನೆ ಬಂದಾಗ ಅವಳ ವ್ಯಕ್ತಿತ್ವದ ಸ್ವರೂಪವನ್ನು ನಿರ್ಧರಿಸುವ ಹಕ್ಕನ್ನು ಧರ್ಮ ತನ್ನದಾಗಿಸಿಕೊಂಡಿರುವುದನ್ನು ನಾವು ಗಮನಿಸಬಹುದು. ಧರ್ಮದ ನಿರ್ಧಾರಗಳಿಗೆ ಯಾವುದೇ ವೈಜ್ಞಾನಿಕ ಪುರಾವೆಗಳ ಅಗತ್ಯವಿರುವುದಿಲ್ಲ. ಭಾರತದ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೇ ಸಮಾನ ಹಕ್ಕುಗಳನ್ನು ಕೊಟ್ಟಿರುವಾಗಲೂ ಧಾರ್ಮಿಕ ಸಂಸ್ಥೆಗಳು ಇದಕ್ಕೆ ವಿರುದ್ಧವಾಗಿ ಕೆಲಸ ಮಾಡಿವೆ.

ಸಂವಿಧಾನದ ೨೬ನೇ ಪರಿಚ್ಛೇದದ ಪ್ರಕಾರ ಒಂದು ಸಂಸ್ಥೆಯು ತನ್ನ ಧಾರ್ಮಿಕ ಕಾರ್ಯಸೂಚಿಗಳನ್ನು ತನ್ನ ಇಚ್ಛೆಯಂತೆ ರೂಪಿಸಿಕೊಳ್ಳುವ ಮೂಲಭೂತವಾದ ಹಕ್ಕನ್ನು ಪಡೆದಿರುತ್ತದೆ, ನಿಜ. ಆದರೆ ಧರ್ಮದ ಹೆಸರಿನಲ್ಲಿ ರೂಪಿಸಿರಬಹುದಾದ ಯಾವುದೇ ನಿಯಮಗಳು ಮಹಿಳೆಯರ ಸಮಾನ ಹಕ್ಕುಗಳಿಗೆ ಧಕ್ಕೆ ಬರುವಂತಿದ್ದರೆ ಅದು ಕಾನೂನು ಬಾಹಿರವಾಗುತ್ತದೆ. ಆದ್ದರಿಂದಲೇ ಈಗ ವಿವಾದದಲ್ಲಿರುವ ದೇವಸ್ಥಾನದ ಪ್ರವೇಶ ನಿಷೇಧದ ಕೇಸುಗಳು ಪ್ರಮುಖವಾಗುತ್ತವೆ. ಈ ಎಲ್ಲಾ ಧಾರ್ಮಿಕ ಸಂಸ್ಥೆಗಳಲ್ಲೂ ಮೂಲಭೂತವಾಗಿ ಲಿಂಗ ಸಮಾನತೆಯನ್ನು ನಿರಾಕರಿಸಲಾಗಿದೆ. ಈ ಒಂದು ಕಾರಣದಿಂದಲೇ ಮಹಿಳೆಯರಿಗೆ ದೇವಸ್ಥಾನ ಪ್ರವೇಶ ದೊರಕಿಸುವುದು ಲಿಂಗ ಸಮಾನತೆಯ ಹೋರಾಟಕ್ಕೆ ಸಾಂಕೇತಿಕವಾಗಿ ನೆರವಾಗುತ್ತದೆ. ದೇವರ ಸನ್ನಿಧಿಯಿಂದಲೇ ಪುರುಷರಿಗೆ ಸಮಾನರು ಎಂದು ತೋರಿಸುವ ಯಾವುದೇ ಅವಶ್ಯಕತೆಯು ಮಹಿಳೆಗಿಲ್ಲ. ಏಕೆಂದರೆ ಜೀವ ವಿಕಾಸದ ಹಾದಿಯನ್ನು ಅಧ್ಯಯನ ನಡೆಸಿರುವ ಜೈವಿಕ ವಿಜ್ಞಾನವು ಪುರುಷ ಮತ್ತು ಮಹಿಳೆಯಲ್ಲಿ ಲಿಂಗವನ್ನು ಗುರುತಿಸುವ ವಂಶವಾಹಿನಿಯನ್ನು ಬಿಟ್ಟರೆ ಇಬ್ಬರ ಡಿಎನ್‌ಎಗಳಲ್ಲಿ ಮತ್ತ್ಯಾವ ವ್ಯತ್ಯಾಸವೂ ಇಲ್ಲವೆಂದು ಪುರಾವೆಗಳ ಸಮೇತ ತೋರಿಸಿಕೊಟ್ಟಿದೆ.

(ಬೆಂಗಳೂರಿನ ದಂತ ವೈದ್ಯ ಕಾಲೇಜೊಂದರಲ್ಲಿ ಅಧ್ಯಾಪಕಿಯಾಗಿರುವ ಸುಶಿ ಅವರು ತಮಿಳ್ನಾಡಿನಲ್ಲಿರುವ ರಾಜೀವ ಗಾಂಧಿ ಯುವಜನ ಅಭಿವೃದ್ಧಿ ರಾಷ್ಟ್ರೀಯ ಸಂಸ್ಥೆಯ ಜೀವನ ಕೌಶಲಗಳ ಸಲಹಾಕಾರ್ತಿಯೂ ಆಗಿದ್ದಾರೆ)



೨ನೇ ಪುಟದಿಂದ)

ಸಾರ್ಥಕ ಶಿಕ್ಷಣವೆಂದೋ ಕರೆಯಬಹುದೇ, ನನಗೆ ಸಂದೇಹವಿದೆ. ಆದರೆ ಶಿಕ್ಷಣ ಕ್ಷೇತ್ರವನ್ನು ವ್ಯಾಪಾರ ವಲಯ ಎಂದು ಪರಿಗಣಿಸಿ ಅದನ್ನು ಮುಕ್ತ ಮಾರುಕಟ್ಟೆಗೆ ತೆರೆದಿಡುವುದರಿಂದ ಭಾರತದ ಶಿಕ್ಷಣ ವ್ಯವಸ್ಥೆ ಇನ್ನಷ್ಟು ಅಧೋಗತಿಗೆ ತಳ್ಳಲ್ಪಡುವುದರಲ್ಲಿ ಯಾವ ಅನುಮಾನವೂ ಇಲ್ಲ.

ಪಟ್ನಾಯಕ್‌ರವರು ಪ್ರಸ್ತಾವಿಸಿರುವಂತೆ ಶಿಕ್ಷಣ ಕ್ಷೇತ್ರವನ್ನು ಪ್ರಾಥಮಿಕ, ಮಾಧ್ಯಮಿಕ, ಉನ್ನತ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಇತರೆ ಎಂದು ಐದು ಭಾಗಗಳಾಗಿ ವಿಭಜಿಸಲಾಗಿದೆ. ಮುಕ್ತ ಮಾರುಕಟ್ಟೆಯ ಫಲವಾಗಿ ನಾಳೆಯ ದಿನ ಇಲ್ಲಿಗೆ ಬರಲಿರುವ ವಿದೇಶೀ ಖಾಸಗಿ ಕಂಪೆನಿಗಳು ಅಥವಾ ಬಂಡವಾಳಿಗರು ಇದರಲ್ಲಿ ಮೊದಲು ಮೂರು ವಲಯದಲ್ಲೂ ಬಂಡವಾಳ ಹೂಡುತ್ತಾರೆ. ಆಗ ಬರೇ ಶಿಕ್ಷಣ ಮಾತ್ರವಲ್ಲ, ದೇಶಭಾಷೆಗಳಿಗೂ ಇದು ಕುಠಾರಪ್ರಾಯವಾಗುತ್ತದೆ. ಬಡವ ಬಲ್ಲಿದರ ಅಂತರ ಇನ್ನಷ್ಟು ಜಾಸ್ತಿಯಾಗುತ್ತದೆ. ನಮ್ಮ ನಮ್ಮ ಊರಿನ ಶಾಲೆಗಳೊಳಗೆ ನಮಗೇ ಅರಿವಿಲ್ಲದಂತೆ ಪುಟ್ಟ ಪುಟ್ಟ ಡೆನ್ಮಾರ್ಕ್‌ಗಳು, ಪುಟ್ಟ ಪುಟ್ಟ ಇಸ್ರೇಲ್‌ಗಳು ಹುಟ್ಟಿಕೊಳ್ಳುತ್ತವೆ. ಉನ್ನತ ಶಿಕ್ಷಣದ ಪರಿಸ್ಥಿತಿಯಂತೂ ದಿಕ್ಕಾಪಾಲಾಗುತ್ತದೆ.

ಶಿಕ್ಷಣವನ್ನು ಪಡೆಯುವುದು ಅರಿವನ್ನು ಹೊಂದುವುದಕ್ಕೆ, ಅರಿವನ್ನು ವಿಸ್ತರಿಸುವುದಕ್ಕೆ ಮತ್ತು ಅರಿವನ್ನು ಹಂಚುವುದಕ್ಕೆ ಎಂದು ಗೊತ್ತಿರದ ನಮ್ಮ ಪ್ರಭುತ್ವಗಳಿಂದ ನಾವು ಏನನ್ನು ನಿರೀಕ್ಷಿಸಲು ಸಾಧ್ಯ.

–ಡಾ. ನಿತ್ಯಾನಂದ ಬಿ.ಶೆಟ್ಟಿ, ತುಮಕೂರು

ನನ್ನ ವಿಳಾಸ ಬದಲಾದ ಕಾರಣ ಡಿಸೆಂಬರ್ ಸಂಚಿಕೆ ತಡವಾಗಿ ತಲುಪಿದರೂ ಸಂತೋಷವನ್ನುಂಟುಮಾಡಿತು. ಒಂದು ತಿಂಗಳು ಪತ್ರಿಕೆಯನ್ನು ಕಾಣದಿರಲು ನನ್ನ ಜ್ಞಾನ ಕವಾಟ ಮುಚ್ಚಿದಂತೆಯೇ ಸರಿ. ನಾನು ಯಾವ ಗುಂಪಿಗೆ ಸೇರಲು ಇಚ್ಛಿಸದಿದ್ದರೂ, 'ಹೊಸ ಮನುಷ್ಯ'ನ ಜೊತೆ ಇರಲು ಇಚ್ಛಿಸುವೆ.

–ಡಾ. ಡಿ.ಬಿ. ರಾಮಚಂದ್ರಾಚಾರ್, ಮೈಸೂರು

ಆಕಾಶವಾಣಿ ಕುರಿತ ಲೇಖನಗಳು ಅರ್ಥಪೂರ್ಣವಾಗಿದ್ದವು. ಪತ್ರಿಕೆ ಕನ್ನಡ ಅಂಕಿಗಳನ್ನು ಬಳಸುವುದನ್ನು ಕಂಡು ತುಂಬ ಸಂತೋಷವಾಯಿತು.

– ಮಾ. ಮ. ಹೂಗಾರ, ಇಂಡಿ

Statement about Ownership and other particulars about News paper 'Hosa Manushya'

FORM 1V

1. Place of Publication : Shimoga
2. Printers name : D.S. Nagabhushana
   Nationality : Indian
   Address : HIG-5, 'Nudi', Kallalli Extn, Vinoba Nagara Shimoga-577204
3. Publishers Name: D.S.Nagabhushana
   Nationality : Indian
   Address : Same as above
4. Editor's name : D.S.Nagabhushana
   Nationality : Indian
   Adddress : Same as above
5. Name of Individuals who own the News paper : D.S.Nagabhushana,
   Address : Same as above

I, D.S.Nagabhushana hereby declare that the particulars given above are true to the best of my knowledge and belief.

Shimoga
31.3.2016

Sd/-
D.S.Nagabhushana


ಭಾಷೆ-ಸಂಸ್ಕೃತಿ-ವಿಚಾರ ಇತ್ಯಾದಿ

ತಾಯ್ನುಡಿಯ 'ನೆನಪು' ಮತ್ತು ಎರಡು ಪುಸ್ತಕಗಳು

ಫೆಬ್ರುವರಿ ೨೧ ವಿಶ್ವ ತಾಯ್ನುಡಿ ದಿನವಂತೆ. ವಿಶ್ವದಲ್ಲಿ, ವಿಶೇಷವಾಗಿ ಪೂರ್ವದ ವಸಾಹತುಶಾಹಿಗೊಳಪಟ್ಟಿದ್ದ ಪೂರ್ವದ ದೇಶಗಳಲ್ಲಿ, ನಿರ್ದಿಷ್ಟವಾಗಿ ಭಾರತದಲ್ಲಿ ತಾಯ್ನುಡಿಗಳು ಸಾರ್ವತ್ರಿಕ ಬಳಕೆಯಿಂದ ದೂರವಾಗಿ ಬಡಕಲಾಗುತ್ತಾ ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿರುವಂತೆ ಈ ವಿಶ್ವ ತಾಯ್ನುಡಿ ದಿನಾಚರಣೆಯ ಜೋರು ಹೆಚ್ಚಾಗುತ್ತಿದೆ. ಇದೊಂದು ವಿಪರ್ಯಾಸ. ಈ ವಿಪರ್ಯಾಸ ಎದ್ದು ಕಂಡಿದ್ದು ಈ ವರ್ಷದ ಈ ದಿನವನ್ನು ನಮ್ಮ ಕರ್ನಾಟಕದಲ್ಲಿ ಒಂದು ಪ್ರಮುಖ ಪತ್ರಿಕೆ ಮತ್ತು ಕೆಲ ಬುದ್ಧಿಜೀವಿಗಳು ವಿಜೃಂಭಣೆಯಿಂದ ಆಚರಿಸಿದ ಪರಿಯಲ್ಲಿ. ಕರ್ನಾಟಕದಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತಾ, ಮಾತೃ/ಜನಭಾಷಾ ಶಿಕ್ಷಣ ಮಾಧ್ಯಮ ಕಡ್ಡಾಯ ಸಾಧ್ಯವಿಲ್ಲ ಎಂದು ನಮ್ಮ ನ್ಯಾಯಾಲಯಗಳು ಹೇಳುತ್ತಾ ಹೋದಂತೆ ಈ ಪತ್ರಿಕೆ ಮತ್ತು ಈ ಬುದ್ಧಿಜೀವಿಗಳು ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಲು ಸೂಚಿಸಿದ ಮಾರ್ಗ: ನಮ್ಮ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷನ್ನು ಕಲಿಸುವುದನ್ನು ಕಡ್ಡಾಯ ಮಾಡುವುದು! ಇದೇನೂ ಇವರ ಸ್ವಂತ ಸಲಹೆಯಾಗಿರಲಿಲ್ಲ. ಅದನ್ನು ಸರ್ಕಾರಕ್ಕೆ 'ಶಿಫಾರ್ಸು' ಮಾಡಿದ್ದು ನಮ್ಮ ಕಾರ್ಪೋರೇಟ್ ಉದ್ಯಮ!

ಆಯಿತು. ಇವರ ಈ ಸಲಹೆ ಜಾರಿಗೆ ಬಂದಾಯಿತಲ್ಲ, ಕನ್ನಡ ಉಳಿಯಿತೇ? ಇದರಿಂದ ಇಂಗ್ಲಿಷ್ ಶಿಕ್ಷಣದ 'ಮಹತ್ವ' ಜನಕ್ಕೆ ಹೆಚ್ಚು ಮನದಟ್ಟಾಗಿ ಕನ್ನಡ ಶಾಲೆಗಳು ಇನ್ನೂ ಹೆಚ್ಚು ವೇಗದಲ್ಲಿ ಮುಚ್ಚುತ್ತಾ ಹೋದವು! ಇಂತಹ ಭಾಷಾ ರಾಜಕಾರಣ ಮಾಡಿದವರೀಗ ತಾಯ್ನುಡಿ ದಿನಾಚರಣೆಯ ಭಾಗವಾಗಿ ಮಾತನಾಡುವುದನ್ನು, ಬರೆಯುವುದನ್ನು ನೋಡಿದರೆ ಜಿಗುಪ್ಸೆಯಾಗುತ್ತಿದೆ. ಕನ್ನಡದ ಭವಿಷ್ಯಕ್ಕೆ ಕೊಳ್ಳಿ ಇಟ್ಟವರ ಜೊತೆ ಸೇರಿಕೊಂಡ ಇವರ ಬುದ್ಧಿಜೀವಿತ್ವಕ್ಕೊಂದಿಷ್ಟು ಬೆಂಕಿ ಹಾಕ ಎನ್ನಬೇಕೆನಿಸುತ್ತದೆ.

'ಶೂದ್ರರಾಗೋಣ ಬನ್ನಿ': ಪ್ರಸನ್ನರ ಮತ್ತೊಂದು ಕರೆ!



'ಚರಕ'ದ ಪ್ರಸನ್ನ ಅವರ ಇತ್ತೀಚಿನ ಪುಸ್ತಕ 'ಶೂದ್ರರಾಗೋಣ ಬನ್ನಿ' ಏಳೆಂಟು ವರ್ಷಗಳ ಹಿಂದಿನ ಇವರ 'ಯಂತ್ರಗಳನ್ನು ಕಳಚೋಣ ಬನ್ನಿ' ಪುಸ್ತಕದ ವಿಸ್ತರಣೆಯೇ ಆಗಿದೆ. ಹಿಂದಿನ ಪುಸ್ತಕದಲ್ಲಿ ಯಂತ್ರ ಮೀಮಾಂಸೆಯನ್ನು ವಿವರಿಸುತ್ತಾ, ಯಂತ್ರ ಸಂಸ್ಕೃತಿ ಹೇಗೆ ಮನುಷ್ಯನ ಬದುಕಿನ ಅಶಾಂತಿಗೆ ಕಾರಣವಾಗಿದೆ ಎಂದು ವಿವರಿಸಿದ ಪ್ರಸನ್ನ ಈ ಪುಸ್ತಕದಲ್ಲಿ ಯಂತ್ರ ಸಂಸ್ಕೃತಿಯ ಜಾಗದಲ್ಲಿ ಶ್ರಮ ಸಂಸ್ಕೃತಿಯನ್ನು ಜಾರಿಗೆ ತರುವ ಅಗತ್ಯ ಮತ್ತು ಮಹತ್ವದ ಬಗ್ಗೆ ಬರೆದಿದ್ದಾರೆ.


ಪಶ್ಚಿಮದ ಆಧುನಿಕ ನಾಗರೀಕತೆಯ ಬಗ್ಗೆ ಒಂದು ನೂರು ವರ್ಷಗಳ ಹಿಂದೆಯೇ ಗಾಂಧಿ ಬರೆದ 'ಹಿಂದ್ ಸ್ವರಾಜ್' ಎಂಬ ವಿಮರ್ಶೆಯಿಂದ ಸ್ಫೂರ್ತಿಗೊಂಡ ಹಲವರು ಪ್ರಸನ್ನ ಅವರಂತೆಯೇ ಹಲವು ಪ್ರಯೋಗಗಳನ್ನೂ ಮಾಡಿದ್ದಾರೆ ಮತ್ತು ಇಂತಹ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಜನ ಓದಿದ್ದಾರೆ. ಆದರೆ ಆಧುನಿಕ ನಾಗರೀಕತೆ ಬಹು ಭರಾಟೆಯಿಂದಲೇ ನಡೆದಿದೆ. ಹಾಗೆಂದ ಮಾತ್ರಕ್ಕೆ ಇಂತಹ ವಿಚಾರಗಳ ಪ್ರಸ್ತುತಿ, ಪ್ರಚಾರ ಬೇಡವೆಂದಲ್ಲ. ಆದರೆ ಜನಸಮೂಹವೇಕೆ ಇಂತಹ ವಿಚಾರಗಳಿಗೆ ಕಿವಿಗೊಡುತ್ತಿಲ್ಲ ಎಂಬ ಪ್ರಶ್ನೆ ಕೇಳಿಕೊಂಡು ಈ ವಿಚಾರಗಳನ್ನು ಪ್ರಸ್ತುತಪಡಿಸಬೇಕಿದೆ.

ಅರಿವಿನ ಜೊತೆಯ ಶ್ರಮದ ಬಗ್ಗೆ ಪ್ರಸನ್ನ ಇಲ್ಲಿ ಬರೆದಿದ್ದಾರೆ. ಅದು ಯಾವ ಅರಿವು? ಆಧುನಿಕ ಅರಿವು ಎನ್ನುತ್ತಾರೆ ಪ್ರಸನ್ನ. ಆದರೆ ಆಧುನಿಕ ನಾಗರೀಕತೆಯನ್ನು ಅದರ ಯಂತ್ರ ಸಂಸ್ಕೃತಿಯಿಂದ ಬೇರ್ಪಡಿಸಿ ಅದರ ಅರಿವಿನ ಭಾಗವನ್ನಷ್ಟೇ ಸಂಸ್ಕರಿಸಿಕೊಳ್ಳುವುದು ಮಾತನಾಡಿದಷ್ಟು ಸುಲಭದ ಕೆಲಸವಲ್ಲ. ಶ್ರಮ ಸಂಸ್ಕೃತಿಯ ಯಶಸ್ಸಿಗೆ ಆಧುನಿಕ ಮ್ಯಾನೇಜ್‌ಮೆಂಟ್ ತಂತ್ರಗಳು ಅಗತ್ಯ ಎನ್ನುವ ಪ್ರಸನ್ನ, ಆ ಮ್ಯಾನೇಜ್‌ಮೆಂಟ್ ತಂತ್ರಗಳು ಆವಿಷ್ಕಾರವಾದದ್ದು ಯಂತ್ರ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಎಂಬುದನ್ನು ಮರೆಯುತ್ತಾರೆ. ಮಧ್ಯವರ್ತಿ ಸಂಸ್ಕೃತಿಯನ್ನು ಟೀಕಿಸುವ ಪ್ರಸನ್ನ ತಮ್ಮ 'ಚರಕ'ದ ಉತ್ಪನ್ನಗಳ ಮಾರಾಟಕ್ಕೆ 'ದೇಸಿ' ಎಂಬ ಮಧ್ಯವರ್ತಿ ಸಂಸ್ಥೆಯನ್ನೇಕೆ ಸ್ಥಾಪಿಸಿಕೊಳ್ಳಬೇಕಾಯಿತು ಮತ್ತು ಅದರ ಮುಖ್ಯ ಕಛೇರಿ ಈಗ ಯಂತ್ರ ಸಂಸ್ಕೃತಿಯ ಒಂದು ವಿಕಾರ ರೂಪದಂತಿರುವ ಬೆಂಗಳೂರಿನಲ್ಲಿಯೇ ಏಕೆ ಸ್ಥಾಪಿಸಿಕೊಳ್ಳಬೇಕಾಯಿತು ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ನನ್ನ ಮೇಲಿನ ಮಾತು ಪ್ರಸನ್ನ ಅವರಿಗೆ ಅರ್ಥವಾದೀತು.

ಈ ಪುಸ್ತಕದ ಶೀರ್ಷಿಕೆಯೂ ಸೇರಿದಂತೆ ಶ್ರಮ ಕುರಿತ ಚರ್ಚೆಯನ್ನು ಈಗ ಭ್ರಷ್ಟಗೊಂಡು ತನ್ನ ಅಳಿದುಳಿದಿದ್ದ ಪ್ರಸ್ತುತತೆಯನ್ನೇ ಕಳೆದುಕೊಂಡಿರುವ ಜಾತಿ ಪದ್ಧತಿಯ ಪರಿಭಾಷೆಗೆ ಇಳಿಸಿರುವುದು ಲೇಖಕರು ಪುಸ್ತಕದುದ್ದಕ್ಕೂ ಟೀಕಿಸುತ್ತಾ ಬಂದಿರುವ ಬುದ್ಧಿವಂತಿಕೆಯ ಪರಿಣಾಮದಂತೆಯೇ ನನಗೆ ಕಂಡಿದೆ. ಜೊತೆಗೆ ಪ್ರಸನ್ನ ಪುಸ್ತಕದ ತುಂಬ ಸಮಾಜವಾದ ಮತ್ತು ಸಮತಾವಾದಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಪರ್ಯಾಯ ಶಬ್ದಗಳಂತೆ ಬಳಸಿರುವುದೂ ಈ ಬುದ್ಧಿವಂತಿಕೆಗೆ ಇನ್ನೊಂದು ಉದಾಹರಣೆಯೇ ಆಗಿದೆ. ಇಂತಹ ಕಡೆಯಲ್ಲೆಲ್ಲ ಅವರ ಗಾಂಧಿ ವಿಚಾರ ಬದ್ಧತೆ ಅನುಮಾನಕ್ಕೀಡಾಗುವಂತಿದೆ.

ಅದೇನೇ ಇರಲಿ, ಪ್ರಸನ್ನ ಶ್ರಮ ಮೂಲಭೂತವಾದದಂತೆ ಕಾಣುವ ಈ ಎಲ್ಲ ಬೌದ್ಧಿಕ ಪ್ರಾಣಾಯಾಮಕ್ಕೆ ಬದಲಾಗಿ ಯಂತ್ರ ಸಂಸ್ಕೃತಿಯನ್ನು ಶ್ರಮ ಸಂಸ್ಕೃತಿಯೊಂದಿಗೆ ಬೆಸೆದು ಅದನ್ನು ಪಳಗಿಸುವ ಬಗೆಗಳ ಬಗ್ಗೆ ಚಿಂತಿಸುವುದು ಹೆಚ್ಚು ಸಾರ್ಥಕ ಕೆಲಸವಾದೀತೆಂದು ನನ್ನ ಅನಿಸಿಕೆ.

ಸಮಾಜವಾದಿಯೊಬ್ಬರ 'ಕೌಟುಂಬಿಕ ವೃತ್ತಾಂತ'



'ಜನಸೇವಕನ ನೆನಪಿನಂಗಳ' ಎಂಬ ತಮ್ಮ ಈ ಪುಸ್ತಕವನ್ನು ಹಿರಿಯ ಸಮಾಜವಾದಿ ಮತ್ತು ಪತ್ರಕರ್ತ ಅಮ್ಮೆಂಬಳ ಆನಂದರು ತಮ್ಮ ಜೀವನ ವೃತ್ತಾಂತ' ಎಂದು ಕರೆದುಕೊಂಡಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಐವತ್ತರ ದಶಕದಲ್ಲೇ ದೊಡ್ಡ ರೈತ ಹೋರಾಟಗಳನ್ನು ಸಂಘಟಿಸಿ ಜಿಲ್ಲೆಯಲ್ಲಿ ಒಂದು ಉಜ್ವಲ ಸಮಾಜವಾದಿ ಆಂದೋಲನಕ್ಕೆ ಕಾರಣರಾದ ದಿನಕರ ದೇಸಾಯಿಯವರು ಆರಂಭಿಸಿದ 'ಜನ ಸೇವಕ' ವಾರಪತ್ರಿಕೆಗೆ ಅದರ ಸ್ಥಾಪನೆಯ ೧೯೫೭ರ ಜನವರಿಯಿಂದ ಹಿಡಿದು ಹದಿನೇಳೂವರೆ ವರ್ಷಗಳ ಕಾಲ ನಡೆದು ಮುಚ್ಚಿದ ದಿನದವರೆಗೆ ಸಂಪಾದಕರಾಗಿ, ಬಹುಕಾಲ ದೇಸಾಯಿಯವರ ಒಡನಾಡಿಯೂ ಆಗಿದ್ದ ಆನಂದರು ಈ ಪುಸ್ತಕದಲ್ಲಿ ಸಮಾಜವಾದಿ ಚಳುವಳಿ ಮತ್ತು ಪತ್ರಿಕೆಯ ಬಗ್ಗೆ ಬರೆದಿರುವುದು ಏಕೋ ಬಹಳ ಕಡಿಮೆ. ಪತ್ರಿಕೆಯ ತುಂಬ ತುಂಬಿರುವುದು ಅವರ ಬಂಧು-ಮಿತ್ರರ, ಸಾರ್ವಜನಿಕ ಸಂಪರ್ಕಗಳ-ಸಾಮಾನ್ಯ ಓದುಗರಲ್ಲಿ ಯಾವುದೇ ಕುತೂಹಲ ಕೆರಳಿಸದಂತಹ-ನೀರಸ ವಿವರಗಳೇ. ಆದರೆ ಪುಸ್ತಕದ ಕೊನೆಯಲ್ಲಿ ಸಮಾಜವಾದಿಗಳ ವರ್ತನೆಯನ್ನು ತುಂಬ ಸರಳವಾಗಿ ಟೀಕಿಸುತ್ತಾ ತಮ್ಮನ್ನು ಸಮಾಜವಾದಿ ಎಂದು ಕರೆದುಕೊಳ್ಳಲು ಮುಜುಗರವಾಗುತ್ತದೆ ಎನ್ನುವ ಆನಂದರಿಗೆ ಸಮಾಜವಾದಿ ಆಂದೋಲನವನ್ನು ಕಟ್ಟಿದ ತಮ್ಮಂತವರೂ ಇದರ ಜವಾಬ್ದಾರಿಯನ್ನು ಸ್ವಲ್ಪವಾದರೂ ಹೊರಬೇಕಾಗುತ್ತದೆ ಎಂಬ ಪರಿವೆ ಮಾತ್ರ ಇದ್ದಂತಿಲ್ಲ. ವಾರಸುದಾರಿಕೆ ಬರೀ ಒಳ್ಳೆಯದಕ್ಕೆ ಮಾತ್ರವಾದರೆ ಕಷ್ಟ ಎಂಬುದನ್ನು ಈ ಹಿರಿಯರಿಗೆ ಹೇಳುವ ಅಗತ್ಯವಿಲ್ಲವೆಂದು ಭಾವಿಸುವೆ.


ಈ ಪುಸ್ತಕ ಸ್ವಲ್ಪ ಮಟ್ಟಿಗೆ ಸಮಾಜವಾದಿ ಆಂದೋಲನದ ಅಧ್ಯಯನ ಮಾಡುವವರಿಗೆ ಸಹಾಯಕವಾಗಬಹುದು. ರಾಜ್ಯದಲ್ಲಿ ಸಮಾಜವಾದಿ ಪಕ್ಷದ ಆರಂಭದ ದಿನಗಳ ಮತ್ತು ಅದನ್ನು ಆಗ ಪೋಷಿಸಿದ ಜನಗಳ ಹಾಗೂ ರಾಜ್ಯದ ಬಹಳಷ್ಟು ಸಮಾಜವಾದಿಗಳಿಗೆ ಗೊತ್ತೇ ಇರದ ಉ.ಕನ್ನಡ ಜಿಲ್ಲೆಯ ಸಮಾಜವಾದಿ ಚಳುವಳಿಯ ಒಂದು ಚಿತ್ರ ಮತ್ತು ಶಂಕರ ಕೇಣಿ, ವಿ.ಜಿ. ನಾಯಕರಂತಹ ಅದರ ನಿಷ್ಠಾವಂತ ಕಾರ್ಯಕರ್ತರ ಸಣ್ಣ ಪರಿಚಯ ಈ ಪುಸ್ತಕದಲ್ಲಿ ಆನುಷಂಗಿಕ ವಿವರಗಳಾಗಿ ದಾಖಲಾಗಿವೆ. ಈ ಕಾರಣಕ್ಕಾದರೂ ಈ ಕೃತಿಯನ್ನು ಒಂದು ಸಮಾಜವಾದಿ ದಾಖಲೆಯಾಗಿ ಸ್ವಾಗತಿಸಬಹುದಾಗಿದೆ.

-ಡಿಎಸ್ಸೆನ್

ಪುಸ್ತಕಾವಲೋಕನ

ಪು: ಮರುಭೂಮಿಯ ಹೂ ಲೇ: ವಾರಿಸ್ ಡೆರಿಸ್ ಕನ್ನಡಕ್ಕೆ : **ಡಾ. ಎನ್. ಜಗದೀಶ ಕೊಪ್ಪ** ಪ್ರ: **ಮಣಿ ಪ್ರಕಾಶನ,** ಬೆಂಗಳೂರು; ೨೦೧೩ ಪುಟ: ೧೭೬ ಬೆಲೆ: **ರೂ. ೧೨೫/-**

ಹೆಣ್ಣಿನ ಧೀಶಕ್ತಿಯ ಕಥನ



"ಮುರವೊಂದಕ್ಕೆ ಒರಗಿ ಆಯಾಸದಿಂದ ನಿದ್ರೆಗೆ ಜಾರಿದ್ದ ನನ್ನನ್ನು ಮುಖಕ್ಕೆ ತಾಗಿದ ಬಿಸಿಯುಸಿರು ನಿದ್ರೆಯಿಂದ ಎಚ್ಚರಿಸಿತು. ಕಣ್ಣು ತೆರೆದಾಗ ನನ್ನ ಮುಂದೆ ಸಿಂಹದ ಮುಖ ಕಾಣಿಸಿತು. ಗಲಿಬಿಲಿಗೊಂಡ ನಾನು ಪೂರ್ಣ ಎಚ್ಚರಗೊಂಡು ಕಣ್ಣಗಲಿಸಿ ನೋಡಿದೆ. ಹೌದು ಅದು ನಿಜ. ಭಯದಿಂದ ಎದ್ದು ನಿಲ್ಲಲು ಯತ್ನಿಸಿದೆ. ಆದರೆ, ಹಲವು ದಿನಗಳಿಂದ ಹೊಟ್ಟೆಗೆ ಏನೂ ತಿಂದಿಲ್ಲದ ಕಾರಣ ನಿಶ್ಶಕ್ತ ಕಾಲುಗಳು ತಂತಾನೆ ನೆಲಕ್ಕೆ ಕುಸಿಯುತೊಡಗಿದವು." ಹೀಗೆ ಆರಂಭಗೊಳ್ಳುವ "ಮರುಭೂಮಿಯ ಹೂ" ಎಂಬ ಆತ್ಮಕಥನ ಇದರೊಂದಿಗೆ ಹಲವು ಸಾಮಾಜಿಕ ಆಘಾತಗಳ ಕಥನವನ್ನೂ ತೆರೆದಿಡುತ್ತದೆ. ಎಷ್ಟೆಲ್ಲ ಅಮಾನುಷ ಆಚರಣೆ, ನಿರ್ಬಂಧಗಳ ನಡುವೆಯೂ ಹೆಣ್ಣಿನ ಧೀಶಕ್ತಿ ಬೆಳಗಿದ ಕಥನವಾಗಿಯೂ ಇದು ಅಷ್ಟೇ ಮುಖ್ಯವಾದುದು.

ಮರುಭೂಮಿಯ ಹೂ ತೊಂಬತ್ತರ ದಶಕದಲ್ಲಿ ಸೂಪರ್ ಮಾಡೆಲ್ ಎನಿಸಿಕೊಂಡಿದ್ದ ವಾರಿಸ್ ಡೆರಿಸ್‌ಳ ಆತ್ಮಕತೆ. ಈಕೆ ಮೂಲತಃ ಆಫ್ರಿಕಾದ ಸೋಮಾಲಿಯಾ ದೇಶದ ಅಲೆಮಾರಿ ಮುಸ್ಲಿಂ ಬುಡಕಟ್ಟಿಗೆ ಸೇರಿದವಳು. ಆದರೆ ಇದು ಅವಳು ವಾಸಿಸಿದ ಇಂಗ್ಲೆಂಡ್ ಮತ್ತು ಅಮೆರಿಕಾದ ಜನರಿಗೆ ಗೊತ್ತೇ ಇರಲಿಲ್ಲ. ತನ್ನ ಯಶಸ್ಸಿನ ಉತ್ತುಂಗಕ್ಕೆ ಏರಿದ ಮೇಲೆ ಅವಳೇ ತೆರೆದಿಡುವ ತನಕವೂ ಇವಳೊಬ್ಬಳು ಮೂಲತಃ ಓದಲು ಬರೆಯಲು ಬಾರದ, ಸೊಮಾಲಿಯಾದ ಮರುಭೂಮಿಯ ಹಳ್ಳಿಯಲ್ಲಿ ಕುರಿ, ಒಂಟೆ ಮೇಯಿಸಿಕೊಂಡಿದ್ದ ಹುಡುಗಿ ಎಂಬುದು ತಿಳಿದಿರಲಿಲ್ಲ. ತಿಳಿದಾಗ ಜಗತ್ತು ಬೆಚ್ಚಿಬಿತ್ತು. ಬಿ.ಬಿ.ಸಿಯವರು ಅವಳ ಜೀವನ ಚರಿತ್ರೆಯ ಡಾಕ್ಯುಮೆಂಟರಿ ಮಾಡಿದರು. ಅವರಿಗೆ ಅವಳು ಹಾಕಿದ ಒಂದೇ ಮುಖ್ಯ ಕಂಡೀಷನ್ ಎಂದರೆ, ತಾನು ಬಾಲ್ಯ ಕಳೆದ ಹಳ್ಳಿಗೆ ಕರೆದುಕೊಂಡು ಹೋಗಬೇಕು ಹಾಗೂ ತನ್ನ ಅಲೆಮಾರಿ ತಂದೆ ತಾಯಿಯರು ಸಿಗುವ ತನಕ ಸೊಮಾಲಿಯಾದಲ್ಲಿ ಇರಬೇಕು ಎಂಬುದಾಗಿತ್ತು. (ಸೊಮಾಲಿಯಾ ಆಂತರಿಕ ರಾಜಕೀಯ ದಂಗೆಗೆ ಸಿಕ್ಕಿದ್ದ ಕಾಲ ಅದಾಗಿತ್ತು). ಇಂತಹ ಅನಕ್ಷರಸ್ಥ ಅಲೆಮಾರಿ ಹುಡುಗಿ ಹಾಲಿವುಡ್ ಸಿನಿಮಾ ನಾಯಕಿಯಾದದ್ದು ಸಿನಿಮಾ ಕತೆಯಷ್ಟೇ ರೋಚಕವಾಗಿದೆಯಾದರೂ ಅದೊಂದೇ ಕಾರಣಕ್ಕೆ ಅವಳ ಆತ್ಮಚರಿತ್ರೆ ಮುಖ್ಯವಾಗುವುದಲ್ಲ.

ಹೆಣ್ಣಿನ ನಿರ್ಬಂಧದ ಕಹಿ ಅನುಭವಗಳು ವಾರಿಸಳಿಗೆ ಅವಳ ಐದನೇ ವಯಸ್ಸಿನಿಂದಲೇ ಕಟುವಾಗಿ ಅನುಭವಕ್ಕೆ ಬರುತ್ತದೆ. ಹೆಣ್ಣನ್ನು ಹದ್ದುಬಸ್ತಿನಲ್ಲಿ ಇಡಲು ಗಂಡಾಳ್ವಿಕೆಯ ವ್ಯವಸ್ಥೆಯು ಮೊದಲು ಹೂಡುವ ಅಸ್ತ್ರವೆಂದರೆ ಅವಳ ದೇಹದ ಮೇಲಿನ ಹಕ್ಕನ್ನು ಅವಳಿಗೆ ನಿರಾಕರಿಸಿ ಅದರ ಮೇಲೆ ತಾನು ಅಧಿಕಾರ ಚಲಾಯಿಸುವುದು. ಈ ಚಲಾಯಿಸುವಿಕೆಯು ಎಷ್ಟು ಕ್ರೌರ್ಯದಿಂದ ಕೂಡಿರುತ್ತದೆಂದರೆ, ಅಲ್ಲಿ ಹೆಣ್ಣಿನ ಜೀವಕ್ಕಾಗಲೀ ಭಾವಕ್ಕಾಗಲೀ ಕಿಮ್ಮತ್ತಿನ ಬೆಲೆಯಿರುವುದಿಲ್ಲ. ಮತ್ತಿದು ಶುರುವಾಗುವುದು ಪಾವಿತ್ರ್ಯದ ಪ್ರಶ್ನೆಯಿಂದಲೇ. ಈ ಪಾವಿತ್ರ್ಯವನ್ನು ಹೆಣ್ಣು ಜೀವದ ಹಂಗು ತೊರೆದಾದರೂ ಸಾಬೀತು ಮಾಡಬೇಕು. ವಾರಿಸ್‌ಳ ಬುಡಕಟ್ಟಿನಲ್ಲಿ ಇದ್ದ ಇಂತಹ ಒಂದು ಪದ್ಧತಿಯೆಂದರೆ ಯೋನಿ ಛೇದನ(Genital mutilation). ಈ ಕ್ರಿಯೆಗೆ ಒಳಗಾಗದ ಹೆಣ್ಣುಮಕ್ಕಳಿಗೆ ಮದುವೆಯಾಗುವುದೇ ದುಸ್ತರ. ಹಾಗೆ ಮಾಡಿಕೊಂಡವರಿಗೆ ವಿಶೇಷ ಮರ್ಯಾದೆ ಇರುತ್ತದೆ. ಅತ್ಯಂತ ಅವೈಜ್ಞಾನಿಕವಾಗಿ, ಅಮಾನುಷವಾಗಿ ಮಾಡುವ ಆ ಕ್ರಿಯೆಯಿಂದಾಗಿ ಎಷ್ಟೋ ಹೆಣ್ಣುಮಕ್ಕಳು ಸಾಯುತ್ತಿದ್ದರೂ ಆ ಸಾವು ಮೌನದಲ್ಲೇ ಮರೆಯಾಗಿಬಿಡುತ್ತಿತ್ತು ಎಂದು ವಾರಿಸ್ ಹೇಳುತ್ತಾಳೆ. ಯೋನಿಯ ಕೆಳತುದಿಗಳನ್ನು ಬ್ಲೇಡಿನಿಂದ ಕತ್ತರಿಸಿ ಆ ನಂತರ ಮೂತ್ರ ಮಾಡಲು ಬೇಕಾದಷ್ಟೇ ರಂಧ್ರ ಉಳಿಸಿ ಯೋನಿಗೆ ಸೂಜಿಯಿಂದ ಹೊಲಿಗೆ ಹಾಕಲಾಗುತ್ತಿತ್ತು. ಇದನ್ನು ಮಾಡಲೆಂದೇ ಕೆಲವು ಹೆಂಗಸರು ಬರುತ್ತಿದ್ದರು. ಮೂರ್ಛೆ ತಪ್ಪಿಬಿದ್ದ ಹೆಣ್ಣುಮಕ್ಕಳನ್ನು ಎರಡು ದಿನ ಬಿಟ್ಟು ಅವರಿಗಾಗಿ ಮಾಡಿದ ಗುಡಿಸಲಿನಿಂದ ಮನೆಗೆ ಕರೆದುಕೊಂಡು ಹೋಗಲಾಗುತ್ತಿತ್ತು. ಇದನ್ನು ಹೆಣ್ಣುಮಕ್ಕಳು ಮುಟ್ಟಾಗುವ ಮೊದಲೇ ಮಾಡಿಸಲಾಗುತ್ತಿತ್ತು. ಈ ಕ್ರಿಯೆಗೆ ಒಳಗಾದ ಮೇಲೆ ಜೀವನದುದ್ದಕ್ಕೂ ಅವಳು ಸದಾ ಯಮಯಾತನೆ ಅನುಭವಿಸಬೇಕಿತ್ತು.

ಇಷ್ಟಾಗಿಯೂ ತಾನು ಅಪಾರವಾಗಿ ಪ್ರೀತಿಸುತ್ತಿದ್ದ ತನ್ನ ಹಳ್ಳಿ, ತನ್ನ ತಂದೆ, ತಾಯಿ, ಒಡಹುಟ್ಟಿದವರು ಮತ್ತು ತನ್ನ ಸಾಕು ಪ್ರಾಣಿಗಳೊಂದಿಗೆ ಇದ್ದ ವಾರಿಸ್ ಅನಿರೀಕ್ಷಿತವಾಗಿ ತನ್ನ ಹಳ್ಳಿ ಬಿಡಬೇಕಾಗುತ್ತದೆ. ಹದಿಮೂರು ವರ್ಷದ ವಾರಿಸ್‌ಗೆ ಐದು ಒಂಟೆಗಳ ವಧುದಕ್ಷಿಣೆಯ ಆಸೆಗಾಗಿ ಅವಳ ತಂದೆ ಅರವತ್ತು ವರ್ಷದ ಮುದುಕನೊಂದಿಗೆ ಮದುವೆ ನಿಶ್ಚಯ ಮಾಡುತ್ತಾನೆ. ಇದರಿಂದ ತಪ್ಪಿಸಿಕೊಳ್ಳಲು ಮೊಗದಿಶುನಗರದ ಚಿಕ್ಕಮ್ಮನ ಮನೆಗೆ ಓಡಿಹೋಗುವ ಅವಳಿಗೆ ತಾಯಿ ಬೆಂಬಲ ಕೊಡುತ್ತಾಳೆ.

ಮರುಭೂಮಿಯ ಬಿಸಿಲು, ಸುಡುವ ನೆಲ, ರಾತ್ರಿಯ ಚಳಿ, ಎಂದೂ ಕಾಣದ ಚಿಕ್ಕಮ್ಮ, ಎಂದೂ ಕಾಣದ ನಗರ, ತಿಳಿಯದ ದಾರಿ, ಅನ್ನ ನೀರುಗಳಿಲ್ಲದ ಪಯಣ. ಇಂತಹ ಸಂದರ್ಭದಲ್ಲೇ ಅವಳ ಬಳಿ ಸಿಂಹ ಬಂದಿದ್ದು. ಅದು ಯಾಕೋ ಅವಳನ್ನು ಬಿಟ್ಟು ತೆರಳಿತು. ಅಂತೂ ಹಲವು ಅಪಾಯಗಳನ್ನು ದಾಟಿ ಅಕ್ಕನ ಮನೆ ಸೇರಿ, ಚಿಕ್ಕಮ್ಮನ ಮನೆಗೆ ಬಂದು ಅಲ್ಲಿಂದ ಆಕಸ್ಮಿಕವಾಗಿ ಮನೆಗೆಲಸದವಳಾಗಿ ಇಂಗ್ಲೆಂಡಿಗೆ ತೆರಳಿ, ಆ ಮನೆಯ ಮಗುವನ್ನು ಶಾಲೆಗೆ ಕರೆದುಕೊಂಡು ಹೋಗುವಾಗ ಛಾಯಾಗ್ರಾಹಕನೊಬ್ಬನ ಕಣ್ಣಿಗೆ ಬಿದ್ದು, ಅದುವರೆಗೂ ಬಿಳಿಯ ಮಾಡೆಲ್‌ಗಳನ್ನು ನೋಡಿ ಸಾಕಾಗಿದ್ದ ಆತ ಕಡೆದ ಕಲ್ಲಿನಂತಿದ್ದ ಈಕೆಯ ಚೆಲುವಿಗೆ ಮಾರುಹೋಗಿ ಅವಳ ಫೋಟೋ ತೆಗೆಯಲು ದುಂಬಾಲು ಬೀಳುತ್ತಾನೆ. ಎರಡುವರ್ಷದ ನಂತರ ಅವಳು ಹೊಟ್ಟೆಪಾಡಿನ ದಾರಿಯಾಗಿ ಒಪ್ಪಿಕೊಂಡು ಮುಂದೆ ಸೂಪರ್ ಮಾಡೆಲ್ ಎನಿಸಿಕೊಳ್ಳುತ್ತಾಳೆ.


ಇಂತಹ ಕಥನಗಳು ಪಶ್ಚಿಮದವರಿಗೆ ಬಲುಪ್ರಿಯವಾಗುವುದು ಸಹಜ. ತಾವು ಉದ್ಧಾರಕರು, ಅವರು ಕ್ರೂರಿಗಳು ಎಂದು ನಿರೂಪಿಸಲು ಇದು ಅವರಿಗೆ ಬೇಕು. ಆದರೆ ಇಲ್ಲಿ ವಾರಿಸ್ ಅಂತವರಿಗೆ ಬಿಡುಗಡೆ ಬೇಕಿರುವುದೂ ಅಷ್ಟೇ ಮುಖ್ಯ. ಪಶ್ಚಿಮದ ಬಂಡವಾಳಶಾಹಿಗೆ ಅವಳ ದೇಹ ಭಿನ್ನ ಅನುಭವಕೊಡುವ ರಂಜಕ ಸಾಮಗ್ರಿಯೇ. ಆದರೆ ಅವಳಿಗೆ ಸಿಗುವ ವ್ಯಕ್ತಿ ಸ್ವಾತಂತ್ರ್ಯ ಅದನ್ನು ಮರೆಮಾಡಿಬಿಡುತ್ತದೆ. ಈ ಕಥನದಲ್ಲಿ ಮರುಭೂಮಿಯ ಹೆಂಗಸರ ಕಷ್ಟದ ಬದುಕು, ಜೊಂಡು ಹುಲ್ಲಿನಲ್ಲಿ ಅವರು ಮಾಡುವ ಹಾಲುತುಂಬಿಡುವ ಬುಟ್ಟಿ, ನೋವಿನಲ್ಲೂ ನಗುನಗುತ್ತ ಬದುಕುವ ಅವರ ಜೀವನಪ್ರೀತಿ, ವಾರಿಸ್‌ಳ ಒಂಟಿ ಸಾಹಸ ಇತ್ಯಾದಿ ವಿವರಗಳೇ ನಮಗೆ ಮುಖ್ಯವಾಗಬೇಕಾದುದು.

ವಾರಿಸ್ ೨೮ನೆಯ ವಯಸ್ಸಿನಲ್ಲಿ ಯೋನಿಯ ಹೊಲಿಗೆ ಬಿಚ್ಚಿಸುವ ಶಸ್ತ್ರಕ್ರಿಯೆಗೆ ಒಳಗಾಗುತ್ತಾಳೆ. ಆಗ ಒಬ್ಬ ಆಫ್ರಿಕನ್ ಸ್ಟಾಫ್ "ಇದು ನಮ್ಮ ಧರ್ಮಕ್ಕೆ ಮತ್ತು ಸಂಸ್ಕೃತಿಗೆ ಮಾಡುವ ಅವಮಾನ"ಎನ್ನುತ್ತಾನೆ. ಮುಂದೆ ಯುನಿಸೆಫ್ ರಾಯಭಾರಿಯಾಗಿ ಈ ಆಚರಣೆ ವಿರುದ್ಧ ಆಕೆ ಅಭಿಯಾನ ಶುರುಮಾಡುತ್ತಾಳೆ. ಇದಕ್ಕಾಗಿ ಅವಳ ಮೇಲೆ ಎರಡು ಸಲ ಹತ್ಯೆಯ ಪ್ರಯತ್ನ ನಡೆದಿದೆ. ತನ್ನ ಚಿಂತನೆಯ ಕುರಿತು ಸ್ಪಷ್ಟತೆ ಇರುವ ಆಕೆ ಬರಹ, ನಡೆ, ನುಡಿಗಳ ಮೂಲಕ ಮುನ್ನಡೆಯುತ್ತಾ ಹೆಣ್ಣಿನ ಧೀಶಕ್ತಿಯ ಪ್ರತೀಕವಾಗಿ ನಮ್ಮೊಂದಿಗಿದ್ದಾಳೆ.

ಜಗದೀಶ್ ಕೊಪ್ಪ ಅವರ ಕನ್ನಡಾನುವಾದ ಸರಳವಾಗಿದ್ದು ಓದಿಸಿಕೊಂಡು ಹೋಗುತ್ತದೆ. ಆದರೆ ಪುಸ್ತಕದ ಮುಖಪುಟದಲ್ಲಿ ಅನುವಾದಕರ ಹೆಸರು ಮಾತ್ರ ಇದ್ದು, ಮೂಲ ಲೇಖಕಿಯ ಹೆಸರು ಕಾಣೆಯಾಗಿರುವುದು ಆಶ್ಚರ್ಯಕರ.

–ಡಾ. ಸಬಿತಾ ಬನ್ನಾಡಿ

'ಹೊಸ ಮನುಷ್ಯ' ಓದುಗರಿಗೆ
ಹಾರ್ದಿಕ ಶುಭಾಶಯಗಳು



ಮೆ. ಸಾವಳಗಿ ಡ್ರಗ್ಸ್ ಎಂಪೋರಿಯಂ
ಮಾಲೀಕರು: ಮಹಮ್ಮದ್ ಷರೀಫ್ ಸಿ. ಸಾವಳಗಿ
ಟೋಲ್ ನಾಕಾ, ಪಿ.ಬಿ. ರಸ್ತೆ
ಧಾರವಾಡ

'ಹೊಸ ಮನುಷ್ಯ' ಓದುಗರಿಗೆ
ಹಾರ್ದಿಕ ಶುಭಾಶಯಗಳು



ಅಶೋಕ ಸಬರದ
ಮತ್ತು **ಕುಟುಂಬ**
ಶ್ರೀನಗರ, ಧಾರವಾಡ



❝ ಪಂಚಾಯ್ತಿ ಮೆಂಬರ್ ಆದ್ಮೇಲೆ
ನಮ್ಮಲ್ಲಿರೋ ಶಕ್ತಿ ನಮಗೆ ಗೊತ್ತಾಯ್ತು.
ಮೊದ್ಲು ನಮ್ಮ ಸಂಸಾರ ಮಾತ್ರ ನಿಭಾಯಿಸ್ತಿದ್ವಿ;
ಈಗ ಪಂಚಾಯ್ತಿ ಎಂಬ
ಸಂಸಾರಾನೂ ನಿಭಾಯಿಸಬಲ್ಲೆವು❞
ನುಡಿದಂತೆ ನಡೆಯುತ್ತಿದೆ
"ಗ್ರಾಮ ಸ್ವರಾಜ್ಯ - ಸ್ವಾವಲಂಬಿ ಭಾರತ"
ಸಿದ್ದರಾಮಯ್ಯ
ಮುಖ್ಯಮಂತ್ರಿಗಳು
ಶೇ.50 ಮಹಿಳಾ ಮೀಸಲಾತಿ
5,629 ಪಂಚಾಯತಿಗಳಲ್ಲಿ
45,000 ಮಹಿಳಾ ಸದಸ್ಯರು
ಸಹಾಯವಾಣಿ : 1800 425 8666
ಕರ್ನಾಟಕ ವಾರ್ತೆ

'ಹೊಸ ಮನುಷ್ಯ' ಓದುಗರಿಗೆ
ಹಾರ್ದಿಕ ಶುಭಾಶಯಗಳು



-ನ್ಯಾ. ಎ.ಜೆ. ಸದಾಶಿವ
ಮತ್ತು ಕುಟುಂಬ
ಬೆಂಗಳೂರು

ತಿಂಗಳ ಸಾಲುಗಳು...



ಭಾರತದಲ್ಲಿ ಮುಸ್ಲಿಂ ವಿರೋಧಿಗಳು ಅನಿವಾರ್ಯವಾಗಿ ಪಾಕಿಸ್ತಾನದ ಗೆಳೆಯರೋ ದಲ್ಲಾಳಿಗಳೋ ಆಗಿರುತ್ತಾರೆ. ಮುಸ್ಲಿಮರನ್ನು ವಿರೋಧಿಸುತ್ತಾ ಅವರಿಗೆ ಹಿಂಸೆ ನೀಡುವುದು ಎಂದರೆ, ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಎತ್ತಿ ಹಿಡಿಯುವ ಮೂಲಕ ಪಾಕಿಸ್ತಾವದ ಮುಂದುವರಿಕೆಯನ್ನು ಖಚಿತಪಡಿಸಿಕೊಳ್ಳುವುದೇ ಆಗಿದೆ.

-ರಾಮಮನೋಹರ ಲೋಹಿಯಾ

ಪತ್ರಿಕೆಗೆ ಶುಭ ಕೋರುವ...

-ಸಿ. ಪ್ರಶಾಂತ್
ದೀಪಾ
ಕು. ಅನಘ

ಬೆಂಗಳೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)